

ಸಕಲ ಜೀವಾತ್ಮರ ಲೇಸು ಬಯಸಿದ ಕಲ್ಯಾಣನಾಡಿನ ಮಾಂಜರಾ ನದಿ ತೀರದ ಚ್ಯಾಂಬೋಳ ಗ್ರಾಮದಲ್ಲಿ ಜನಿಸಿದ ಡಾ. ಅಮರನಾಥ ಸೋಲಪುರೆಯವರು ವೈದ್ಯಕೀಯ ಕ್ಷೇತ್ರದಲ್ಲಿ ಅಗ್ರಗಣ್ಯ ಸ್ಥಾನಮಾನ ಪಡೆದಿದ್ದಾರೆ. ಮಾನವೀಯ ಸಂವೇದಕ, ಸೃಜನಶೀಲ ಚಿಂತಕ, ಭಾವನಾತ್ಮಕ ಜೀವಿ, ನೈತಿಕ ನೆಲೆಗಟ್ಟಿನ ಆದರ್ಶ ಬರಹಗಾರರಾದ ಡಾ. ಸೋಲಪುರೆಯವರು ಸರ್ಕಾರಿ ಮೆಡಿಕಲ್ ಕಾಲೇಜ್ ಔರಂಗಾಬಾದ, ಲಾತೂರ, ನಾಂದೇಡ ಹಾಗು ಗ್ರ್ಯಾಂಟ್ ವೈದ್ಯಕೀಯ ಮಹಾವಿದ್ಯಾಲಯ ಹಾಗು ಜೆ.ಜೆ. ಹಾಸ್ಪಿಟಲ್ ಮುಂಬೈಯಲ್ಲಿ ಪ್ರೊಫೆಸರ್, ಡೀನ್‌ರಾಗಿ ಹಾಗು ಮಹಾರಾಷ್ಟ್ರ ಹೆಲ್ಥ್ ಯೂನಿವ್ಹರ್‌ಸಿಟಿಯ ಕುಲಸಚಿವರಾಗಿ **(Registrar)**, ಪ್ರಭಾರಿ ಕುಲಗುರು **(Acting Vice Chancellor)** ಆಗಿ ಸೇವೆ ಸಲ್ಲಿಸಿದ ಮಹಾನ್ ಕಾಯಕ ಜೀವಿಗಳಾಗಿದ್ದಾರೆ. ಅಂತರ್ ರಾಷ್ಟ್ರೀಯ ಖ್ಯಾತಿಯ **Medical Council of India New Delhi, Canadian International Development Agency** ಸಂಸ್ಥೆಗಳು ಸದಸ್ಯತ್ವ, ಮಾನ್ಯತೆ ಮತ್ತು ಸ್ಕಾಲರ್‌ಶಿಪ್ ಕೊಟ್ಟು ಶ್ರೀಯುತರನ್ನು ಗೌರವಿಸಿವೆ. ಖ್ಯಾತ ವೈದ್ಯಕೀಯ ಶಿಕ್ಷಣತಜ್ಞ ಮತ್ತು ವಿಜ್ಞಾನಿಗಳು ಆಗಿರುವ ಸರ್ ಅವರು ಬರೆದ **'Human Neurophysiology'** ಮತ್ತು ಸಂಪಾದಕ ಮಂಡಳಿಯಲ್ಲಿದ್ದ **'Text book of Physiology by Guyton'** ವೈದ್ಯಕೀಯ ವಿದ್ಯಾರ್ಥಿ, ಆರೋಗ್ಯತಜ್ಞರ ಲೋಕದಲ್ಲಿ ಪ್ರಸಿದ್ಧ ಗ್ರಂಥಗಳಾಗಿವೆ.

ಡಾ. ಅಮರನಾಥಜೀಯವರು ಮರಾಠಿ ಭಾಷೆಯಲ್ಲಿನ 'ಬಸವ ಪುರಾಣ', 'ಬಸವ ದರ್ಶನ' ಕನ್ನಡದ 'ಶ್ರೀ ಬಸವ ವಿಜಯ', 'ಲಾಂಗ್ ಮಾರ್ಚ್' 'ಶರಣರ ಸಕಾರಾತ್ಮಕ ಮನೋಭಾವದ ಶಕ್ತಿ' ಕೃತಿಗಳು ಮಹತ್ವದ್ದಾಗಿವೆ. ಇಂಗ್ಲೀಷ್‌ನಲ್ಲಿ ಬರೆದಿರುವ **'Ishtalinga Yoga', 'Vachana', 'Basaveshwara founder of Lingayat religion and his Philosopy'** ಎಂಬ ಗ್ರಂಥಗಳು ಜಾಗತಿಕ ಮನ್ನಣೆಗೆ ಪಾತ್ರವಾಗಿವೆ. ಜನರ ನೋವು ನಲಿವುಗಳಿಗೆ ಸ್ಪಂದಿಸಬಲ್ಲ ಚಿಂತನೆಗಳೆಲ್ಲ ಹೃದ್ಯವಾಗಿವೆ.

ಸನ್ಮಾನ್ಯರು ಬಹುಸಂಖ್ಯಾತರಿಗೆ, ವಿಶೇಷವಾಗಿ ಯುವಜನರಿಗೆ ಕಾಡುತ್ತಿರುವ ಮನೋವೈಜ್ಞಾನಿಕ ಸಮಸ್ಯೆ, ಮಾನಸಿಕ ಖಿನ್ನತೆ, ನಕಾರಾತ್ಮಕತೆ, ಹಿಂಸಾತ್ಮಕತೆಗಳಂಥ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡುತ್ತಿದ್ದಾರೆ. ೧೨ನೇ ಶತಮಾನದ ಶರಣರ ತತ್ವಗಳಲ್ಲಿ, ಅವರ ಆಚಾರ ವಿಚಾರಗಳಲ್ಲಿರುವ ಚೇತೋಹಾರಿ ನುಡಿಗಟ್ಟಗಳನ್ನು, 'ಇಷ್ಟಲಿಂಗ ಪೂಜಾ ಯೋಗ'ದ ವೈಜ್ಞಾನಿಕ ಹಿನ್ನೆಲೆಯನ್ನು ಮುಂದಿಟ್ಟುಕೊಂಡು ಪ್ರಾತ್ಯಕ್ಷಿಕೆ ನೀಡುತ್ತ ಜನಮನದಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಎರಡುವರೆ ದಶಕದಿಂದ ಈ ಕುರಿತು ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಇಷ್ಟಲಿಂಗ ಪೂಜಾ ಯೋಗದ ಅವಶ್ಯಕತೆ ಅನಿವಾರ್ಯತೆ ತಿಳಿಸುತ್ತಿದ್ದಾರೆ. ಅದರಿಂದಾಗುವ ಪ್ರಯೋಜನಗಳನ್ನು ವೈಜ್ಞಾನಿಕವಾಗಿ ತಿಳಿಸುವ ಇದೊಂದು ಮಹತ್ವದ ಕೃತಿಯಾಗಿದೆ.

– ಡಾ. ರಘುಶಂಖ ಭಾತಂಬ್ರಾ

ಬೀದರ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರು

ಇಷ್ಟಲಿಂಗ ಪೂಜಾ ಯೋಗ (ಶ್ರೀ ಬಸವ ವಚನೋದಿತ ಇಷ್ಟಲಿಂಗ ಉಪಾಸನಾ ಪದ್ಧತಿ)

ಇಷ್ಟಲಿಂಗ ಪೂಜಾ ಯೋಗ (ಶ್ರೀ ಬಸವ ವಚನೋದಿತ ಇಷ್ಟಲಿಂಗ ಉಪಾಸನಾ ಪದ್ಧತಿ)

– ಡಾ. ಅಮರನಾಥ ಸೋಲಪುರೆ



# ಇಷ್ಟಲಿಂಗ ಪೂಜಾ ಯೋಗ

## (ಶ್ರೀ ಬಸವ ವಚನೋದಿತ ಇಷ್ಟಲಿಂಗ ಉಪಾಸನಾ ಪದ್ಧತಿ)




– ಡಾ. ಅಮರನಾಥ ಸೋಲಪುರೆ



# ಇಷ್ಟಲಿಂಗ ಪೂಜಾ ಯೋಗ

(ಶ್ರೀ ಬಸವ ವಚನೋದಿತ ಇಷ್ಟಲಿಂಗ ಉಪಾಸನಾ ಪದ್ಧತಿ)




– ಡಾ. ಅಮರನಾಥ ಸೋಲಪುರೆ



ಇಷ್ಟಲಿಂಗ ಪೂಜಾ ಯೋಗ

ಲೇಖಕರು : ಡಾ. ಅಮರನಾಥ ಸೋಲಪುರೆ

ಪ್ರಥಮ ಮುದ್ರಣ : 2025

ಹಕ್ಕುಗಳು : ಲೇಖಕರು

ಪುಟಗಳು : 316

ಬೆಲೆ : 100/–

ಪ್ರತಿಗಳು : 1000

ಅಕ್ಷರ ಜೋಡಣೆ : ವಚನಚೇತನ ಕಂಪ್ಯೂಟರ್ಸ್, ಬೀದರ.
ಸಂಚಾರಿ: 9916424411; 9482166251

ಪ್ರಕಾಶಕರು : ಸ್ನೇಹಾ ಪ್ರಕಾಶನ
ಬೆಂಗಳೂರು

ಮುದ್ರಣ : ಸ್ನೇಹಾ ಪ್ರಿಂಟರ್ಸ್,
ಬೆಂಗಳೂರು–560040
ದೂರವಾಣಿ: 080–23392814
ಸಂಚಾರಿ : 99866005015

|| Basava Om namah Shivaye ||

|| Vandane Shadanga Yogeshwara Sri Basavanna ||

|| ಓಂ ||

ಶ್ರೀ ಷಡ್ಗುಣೈಶ್ವರ್ಯ
ಸಂಪತ್ಕರಮನುಳ್ಳಾ
ಅ ಕಾರ ಉ ಕಾರ ಮ ಕಾರ ನಾದ ಬಿಂದು
ಘೋಶ ಶಾಂತ ಅತಿಶಾಂತ ಅಷ್ಟಾಕ್ಷರ ಪ್ರಣವ ಸ್ವರೂಪ ಬ ಕಾರ
ಮೂಲದ
ಭವ ಹರಗುರು
ಸ ಕಾರವೇ ಸಕಲ ಚೈತನ್ಯಾತ್ಮಕ
ಅಂಗವಾಗಿ ಉತ್ಪತ್ತಿ ಸ್ಥಿತಿ ಲಯಗಳಿಗೆ ಆಲಯವಾಗಿ
ವ ಕಾರವೇ ಸಕಲ ವಚಿಸುವ ಮಹಾನುಭಾವ ಮೂರುತಿ
ಜಂಗಮ ಅಮರ

ಇಂತಿ
ಗುರು ಲಿಂಗ
ಜಂಗಮದ ಐಕ್ಯಸ್ವರೂಪಾ
ಬಸವ ಬಸವ ಬಸವ ಮಂಗಲಕಾರಿ
ಬಸವ ಬಹುದುಃಖಹಾರಿ ಶುಭದಾಯಕ ಪ್ರಸಾದ ಮೂರುತಿ
ಗುರು
ಸಾರ್ವಭೌಮ
ಓಂ ಶ್ರೀ ಗುರು ಬಸವ ಲಿಂಗಾಯ ನಮಃ
ಓಂ ಶ್ರೀ ಗುರು ಬಸವಲಿಂಗಾಯ ನಮಃ
ಓಂ ಶ್ರೀ ಗುರು ಬಸವಲಿಂಗಾಯ ನಮಃ

**Amar**

**" Love is the substance of all things"**



# ಇಷ್ಟಲಿಂಗ ಪೂಜಾ ಯೋಗ

(ಶ್ರೀ ಬಸವ ವಚನೋದಿತ ಇಷ್ಟಲಿಂಗ ಉಪಾಸನಾ ಪದ್ಧತಿ)

## ೧. ಪ್ರಸ್ತಾವನೆ:

ಇಷ್ಟಲಿಂಗೋಪಾಸನೆ ದೇಶ ವಿದೇಶಗಳಲ್ಲಿ ಹರಡಿದ್ದ ವಿಶಾಲವಾದ ಲಿಂಗಾಯತ ಮತ್ತು ವೀರಶೈವ ಲಿಂಗಾಯತ ಸಮುದಾಯದ ಧಾರ್ಮಿಕ ಆಚರಣೆ, ತಾತ್ವಿಕ ನೆಲೆಗಳು ಮತ್ತು ಸಾಮಾಜಿಕ, ರಾಜಕೀಯ ಧೋರಣೆಗಳ ಜೊತೆಗೆ ಅತ್ಯಂತ ಆತ್ಮೀಯ ಮತ್ತು ಅವಿಭಾಜ್ಯ ಸಂಬಂಧ ಹೊಂದಿದೆ. ಅಷ್ಟೇ ಅಲ್ಲ ಸಮಾಜದ ಪ್ರತಿಯೊಂದು ವ್ಯಕ್ತಿಯ ಜೀವನದ ದಾರಿಯನ್ನು ನಿರ್ಧರಿಸುವಲ್ಲಿ ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಮಹತ್ವದ ಪಾತ್ರವಹಿಸುತ್ತದೆ.

ಬಸವ ಸಿದ್ಧಿಯಾದ ಇಷ್ಟಲಿಂಗ ಪೂಜಾ ಯೋಗದ ಪಂಚಪರುಷ ಸಾಧನೆಯ ಸುಲಭಾಚರಣೆಯ ಅಪೂರ್ವವಾದ ಫಲವೆಂದರೆ ಮನುಷ್ಯರಿಗೆ–

* ಆಧ್ಯಾತ್ಮಿಕ ಆರೋಗ್ಯ ಮತ್ತು ಪವಿತ್ರತೆ
* ಮಾನಸಿಕ ಸಧೃಢತೆ ಮತ್ತು ಭಾವನಿಕಸ್ಥಿರತೆ
* ದೈಹಿಕ ಆರೋಗ್ಯ ಮತ್ತು ನಿರ್ಮಲತೆ
* ಸಮಾನತೆ ಮತ್ತು ಸಾಮಾಜಿಕ ಸಾಮರಸ್ಯ
* ಪ್ರಗತಿ ಮತ್ತು ಲೋಕ ಕಲ್ಯಾಣದ ಆಲೋಚನೆ
* ಸೃಜನಶಕ್ತಿ ಮತ್ತು ಭಾಗ್ಯೋದಯ
* ಅಮಂಗಳವಳಿದು ನಿತ್ಯ ಮಂಗಳ
* ಧನಾತ್ಮಕ ಸತ್ವಸುಂದರ ವ್ಯಕ್ತಿತ್ವ ಮತ್ತು ಕ್ರಿಯಾಸಂಪನ್ನತೆಗಳು ಪ್ರಾಪ್ತವಾಗುತ್ತವೆ.

ಇಂಥ ಬಹು ಪರಿಣಾಮಕಾರಿ ಮಾನವ ಪರಿವರ್ತನೆಯ ಸಹಜ ಸುಲಭ ಸರಳ ಸಾಧನಾ ಕಾರ್ಯಾಚರಣೆಯ ವಿಷಯದಲ್ಲಿ ಮತ್ತು ಅದರ ಶೀರ್ಷಿಕೆಯ ಸಂದರ್ಭದಲ್ಲಿ ಸಾಮಾನ್ಯವಾದ ಒಮ್ಮತ ಹೊಂದಿರುವದು ಸಮುದಾಯದ ಭವಿಷ್ಯದ ಆರೋಗ್ಯಯುತ ಬೆಳವಣಿಗೆಯ ದೃಷ್ಟಿಯಿಂದ ಅಪೇಕ್ಷಿತವಾಗಿದೆ. ಅದನ್ನು ರೂಪಿಸುವದು ಇಂದಿನ ಪೀಡಿಯು ಅಘೋಶಿತವಾದ ಜವಾಬ್ದಾರಿಯೂ ಆಗಿದೆ. ಇದನ್ನು ಅನುಲಕ್ಷಿಸಿ ನಾಡಿನ ಹಿರಿಯ ಶರಣ ಗೊ.ರು. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಮತ್ತು ನವ ಅನುಭವ ಮಂಟಪದ ನಿರ್ಮಾಣ ಸಮಿತಿ ಈ ಕಾರ್ಯವನ್ನು ಕೈಗೆತ್ತಿಕೊಂಡಿದೆ ಎಂದು ನನ್ನ ಭಾವನೆ.

ದಿ. ೩೧.೦೧.೨೦೨೪ರ ಮಂಡಳಿಯ ಸಭೆಯಲ್ಲಿ ಸುದೀರ್ಘ ಚರ್ಚೆಯ ನಂತರ ಶರಣ ಅರವಿಂದ ಜತ್ತಿ, ಪೂಜ್ಯಶ್ರೀ ಡಾ. ಗಂಗಾಂಬಿಕೆ ಅಕ್ಕ, ಶರಣ ರಂಜಾನ್ ದರ್ಗಾ, ಶರಣ ವೀರಣ್ಣ ರಾಜೂರ ಇವರ ಸೂಚನೆಯ ಮೇರೆಗೆ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಮತ್ತು ನವಅನುಭವ ಮಂಟಪದ ವತಿಯಿಂದ ಪ್ರಕಟಣೆಗಾಗಿ 'ಇಷ್ಟಲಿಂಗ ಪೂಜಾ ಯೋಗ' ವಿಷಯದ ಮೇಲೆ ಮಂಡಳಿಯ ಮುಂದಿನ ಸಭೆಯಲ್ಲಿ ಪರಿಗಣನಗಾಗಿ ಕರಡುಗ್ರಂಥ ಬರೆದು ಪ್ರಸ್ತುತಪಡಿಸುವ ಜವಾಬ್ದಾರಿ ನನಗೆ ಕೊಡಲಾಯಿತು.

> ಬಸವ! ಬಸವ! ಬಸವ! ಬಸವ! ಎಂದೆನುತಿರ್ದೆ
> ಬಸವ ಲಿಂಗವೆ ಭಕ್ತಿಮೂಲವಾಗಿ
> ಬಸವಣ್ಣ ಬಸವಯ್ಯ ಎಂದೆನ್ನಲೆನ ಭಕ್ತಿ
> ಹಸನಾಯಿತಯ್ಯ ಗುರುವೆ ಯೋಗಿನಾಥ ॥

ಮಂಗಳಮಯ ರೂಪ ಸಂಗನಬಸವಣ್ಣ ಲಿಂಗನಿಜಸ್ವಯಂಭರಿತ ಬಸವಣ್ಣನು–

> "ಸೃಷ್ಟಿಗೆ ಶಿವಭಕ್ತಿ ವಿಸ್ತರಿಸಬಲ್ಲವರಾರೋ?
> ಇಷ್ಟಪ್ರಾಣಗಳನರ್ರುಹಿಸಿ ಶಿವಭಕ್ತಿ
> ಕೊಟ್ಟಾತನೆನ್ನ ಗುರುರಾಯ"



ಶ್ರೀ ಗುರು ಕರುಣೆಯಿಂದ ಲಿಂಗಸಂಬಂಧ ಪಾಲಿಸಿ ಭಕ್ತಿರಸವನು ಉಣಬಡಿಸಿದ ಮಹಾಘನಲಿಂಗ ಪರಮಾತ್ಮನ ಸೂಕ್ಷ್ಮರೂಪ ಇಷ್ಟಲಿಂಗವನ್ನು ಹಿಡಿದು ಪಂಚಪರುಷಗಳ ಪಂಚಸ್ಪರ್ಶದ ಜಂಗಮ ಸಂಚಾರಿಯಾಗಿ ಕಳೆದ ಅನೇಕ ವರ್ಷಗಳಿಂದ ಇಷ್ಟಲಿಂಗ ಪೂಜಾ ಯೋಗ ಸಾಧನೆ ಗೈಯುತ್ತ ಅಂತರಂಗದ ತಿರುಳಿಗೆ ತಲುಪುವ ಅನಂತದ ದಾರಿಯಲ್ಲಿದ್ದೇನೆ. ಕರ್ಪುರದ ಪರ್ವತಕ್ಕಾದರು ಹೊತ್ತಿ ಬೆಳಕಾಗಿ ಬಯಲಾಗಲು ಸೂರ್ಯನುದಯದ ದಾರಿ ಕಾಯ ಬೇಕಾಗುತ್ತದೆ.

ನಾಡಿನ ಹಿರಿಯ ಅನುಭಾವಿ ಶರಣರು, ವಿದ್ವಾಂಸರು ತಮ್ಮ ಲೇಖನ ಪ್ರತಿಭೆಯಿಂದ ದೇಶದಲ್ಲಿ ಗೌರವ ಸಂಪನ್ನರಾದವರು ನನಗೆ ಒಂದು ಬಹು ದೊಡ್ಡ ಪ್ರಭಾವಶಾಲಿ ಮತ್ತು ಪ್ರಬುದ್ಧ ಸಮಾಜ, ಕಳೆದ ೯೦೦ ವರ್ಷಗಳಿಂದ ಆಚರಿಸುತ್ತ ಬಂದ ಪವಿತ್ರ ಸಮಗ್ರ ಮಾನವೀಯತೆಯ ಉದ್ಧಾರದ ಉಪಾಸನಾ ಪದ್ಧತಿ 'ಇಷ್ಟಲಿಂಗ ಪೂಜಾ ಯೋಗ'ದ ವಿಷಯದಲ್ಲಿ ಬರೆಯಲು ಅವಕಾಶ ಒದಗಿಸಿಕೊಟ್ಟು ನನ್ನ ಮೇಲೆ ಮಹಾಘನಲಿಂಗ ಶ್ರೀ ಗುರುಬಸವಣ್ಣನವರ ಕೃಪಾಪ್ರಸಾದದ ಸುರಿಮಳೆ ಸುರಿಸಿ ಲಿಂಗಪ್ರಸಾದಿಕ ನನ್ನಾಗಿ ಮಾಡಿದ್ದಾರೆ.

ಅವರಿಚ್ಛೆಯೆ ಶ್ರೀ ಗುರು ಆಜ್ಞೆಯೆಂದು ಮನಹೃದಯದಲ್ಲಿ ತುಂಬಿಕೊಂಡು 'ಅಜ್ಞಾನ ನನ್ನದು ಜ್ಞಾನ ನಿಮ್ಮದು' ಎಂದು ಸರ್ವಸಮರ್ಪಣ ಭಾವದಿಂದ ನಿಗದಿತ ಸಮಯದ ಒಳಗೆ 'ಇಷ್ಟಲಿಂಗ ಪೂಜಾ ಯೋಗ' ಶೀರ್ಷಿಕೆಯಲ್ಲಿ ಪ್ರಸ್ತಾವಿತ ಪುಸ್ತಕದ ಕರಡು ಪ್ರತಿಯನ್ನು ಬರೆದು ಅದರ ಪ್ರತಿಗಳನ್ನು ಮಂಡಳಿಯ ಮಾನ್ಯ ಅಧ್ಯಕ್ಷರಿಗೆ ಮತ್ತು ಸರ್ವಸದಸ್ಯರಿಗೆ ದಿ. ೧೬.೦೪.೨೦೨೪ರಂದು ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ಸಭಾಗೃಹದಲ್ಲಿ ಆಯೋಜಿಸಿದ ಸಭೆಯಲ್ಲಿ ಅರ್ಪಿಸಿದೆ.

ಮಂಡಳಿಯು ದಿ. ೧೭.೦೪.೨೦೨೪ರಂದು ಅದೇ ಸಭಾಗೃಹದಲ್ಲಿ ಹಿರಿಯ ಶರಣ ಗೊ.ರು. ಚನ್ನಬಸಪ್ಪ ಇವರ ಅಧ್ಯಕ್ಷತೆಯಲ್ಲಿ ಮುಂದುವರಿದ ಸಭೆಯಲ್ಲಿ ಪ್ರಸ್ತುತಪಡಿಸಿದ ಕರಡುಪ್ರತಿಯನ್ನು ಪ್ರದೀರ್ಘವಾಗಿ ನಡೆದ ಆಳವಾದ ಚರ್ಚೆಯ ನಂತರ ಪುಸ್ತಕದ ಶೀರ್ಷಿಕೆಯನ್ನು ಸರ್ವಾನುಮತದಿಂದ ಮಂಡಳಿಯ ಅಧಿಕೃತ ಪ್ರಕಟಣೆಗಾಗಿ ಸ್ವೀಕರಿಸಿದ ಪುಸ್ತಕವೆಂದು ಸ್ವೀಕರಿಸಿ ಅಭಿನಂದಿಸಿದರು.

ಬಸವನ ಧ್ಯಾನದಿಂದ ಬಸವನ ಕರುಣದಿಂ
ಬಸವನ ಪರಮ ಪ್ರಸಾದದಿಂದ
ಬಸವನ ಕೃಪೆಯಿಂದವಾದಿ ಅಕ್ಷರವರ್ರಿದೆ
ಭೇದಿಸಿದೆನ್ನೈ ಗುರುವೆ ಯೋಗಿನಾಥ

ಶ್ರೀ ಗುರುಕೃಪೆಯಿಂದ ಮಾಡಿದ ಭಕ್ತಿ, ಸಾಧನೆಯ ಶ್ರಮ, ಸವೆದ ಸಮಯ ಬಾಳಿದ ಕ್ಷಣಗಳು ಹಸನಾಗಿ ತನುಮನಕ್ಕೆ ಆನಂದವಾಯಿತು. ಸಭೆಯಲ್ಲಿ ಉಪಸ್ಥಿತರಿದ್ದು ಆಳವಾದ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು 'ಇಷ್ಟಲಿಂಗ ಪೂಜಾ ಯೋಗ' ಪುಸ್ತಕದ ಸ್ವೀಕೃತಿಗೆ ಸಮ್ಮತಿ ಕೊಟ್ಟ ಕೆಳಕಂಡ ಶರಣರಿಗೆ ಭಕ್ತಿಯ ಶರಣು ಸಲ್ಲಿಸುತ್ತೇನೆ.

೧. ಡಾ. ಗೊ.ರು. ಚನ್ನಬಸಪ್ಪ ಅಧ್ಯಕ್ಷರು
೨. ಶ್ರೀ ಅರವಿಂದ ಜತ್ತಿ ಮಾನ್ಯ ಸದಸ್ಯರು
೩. ಡಾ. ವೀರಣ್ಣ ರಾಜೂರ ಧಾರವಾಡ ಮಾನ್ಯ ಸದಸ್ಯರು
೪. ಪ್ರೊ. ಟಿ.ಆರ್. ಚಂದ್ರಶೇಖರ ಮಾನ್ಯ ಸದಸ್ಯರು
೫. ಶ್ರೀ ರಂಜಾನ್ ದರ್ಗಾ ಮಾನ್ಯ ಸದಸ್ಯರು
೬. ಶ್ರೀ ಅಶೋಕ ಬರಗುಂಡೆ ಮಾನ್ಯ ಸದಸ್ಯರು
೭. ಡಾ. ಗಂಗಾಂಬಿಕೆ ಪಾಟೀಲ ಮಾನ್ಯ ಸದಸ್ಯರು
೮. ಶ್ರೀ ಕಾಶಿನಾಥ ಅಂಬಲಗೆ ಮಾನ್ಯ ಸದಸ್ಯರು
೯. ಡಾ. ಅಮರನಾಥ ಸೋಲಪುರೆ ವಿಶೇಷ ಅಹ್ವಾನಿತರು
೧೦. ಪ್ರೊ. ಬಸವರಾಜ ಹೊಸಪೇಟ
೧೧. ಡಾ. ರುದ್ರೇಶ ಕಿತ್ತೂರು ವಿಶೇಷ ಅಹ್ವಾನಿತರು
೧೨. ಡಾ. ಜಯಶ್ರೀ ದಂಡೆ ವಿಶೇಷ ಅಹ್ವಾನಿತರು
೧೩. ಡಾ. ಅಶೋಕ ದೊಮ್ಮಲೂರು
೧೪. ಡಾ. ಪ್ರಭುಲಿಂಗ ಗಡ್ಡೆ ಮೆ॥ ನರಚರ್ & ನೇಚರ್ ಎಂಟರ್‌ಪ್ರೈಸೆಸ್ ಸಮಾಲೋಚಕರು

– ಡಾ. ಅಮರನಾಥ ಸೋಲಪುರೆ





**Founder of Modern Anubhava Mantap**

ಮ.ಘ.ಚ.ಡಾ॥ ಚನ್ನಬಸವ ಪಟ್ಟದ್ದೇವರು

**" Love is the substance of all things"**



ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳೊಂದಿಗೆ ಲೇಖಕರು

# ಪರಿವಿಡಿ

## ಇಷ್ಟಲಿಂಗ ಪೂಜಾ ಯೋಗ

(ಶ್ರೀ ಬಸವ ವಚನೋದಿತ ಇಷ್ಟಲಿಂಗ ಉಪಾಸನಾ ಪದ್ಧತಿ)


೧. ಷಡಂಗ ಯೋಗೇಶ್ವರ ಮಂಡನೆ ೦೩
೨. ಪ್ರಸ್ತಾವನೆ ೦೪

ಭಾಗ-೧

೨. ಸಾಹಿತ್ಯ ಮತ್ತು ಉಲ್ಲೇಖಗಳ ವಿಮರ್ಶೆ ೧೩
೩. ಇಷ್ಟಲಿಂಗೋಪಾಸನೆಯ ಮನೋವೈಜ್ಞಾನಿಕ
ದೃಷ್ಟಿಕೋನ ೬೩
೪. ಲಿಂಗವಂತದ ಜನಪ್ರಿಯತೆಗೆ ಕಾರಣಗಳು ೭೭
೫. ಲಿಂಗವಂತರ ಉಪಾಸನಾ ೮೧
೬. ಇಷ್ಟಲಿಂಗದ ಉಗಮ ಮತ್ತು ಸ್ವರೂಪ ೮೮
೭. ೧೨ನೆಯ ಶತಮಾನ
೭. ಇಷ್ಟಲಿಂಗೋಪಾಸನೆ ಶರಣರ ಅರಿವು, ಅನುಭವ
ನೋಟ ಮತ್ತು ಉಪಾಸನಾ ವಿಧಿನಾಮ ೯೭
ಹನ್ನೆರಡನೆಯ ಶತಮಾನದಲ್ಲಿ-
೧. ಅಲ್ಲಮಪ್ರಭು ೯೭
೨. ಚೆನ್ನಬಸವಣ್ಣ ೧೦೧
೩. ಸಿದ್ಧರಾಮೇಶ್ವರ ೧೦೮
೪. ಬಸವಣ್ಣ ೧೩೯
೮. ೧೩ನೆಯ ಶತಮಾನದಲ್ಲಿ ಇಷ್ಟಲಿಂಗೋಪಾಸನೆ ೧೬೫
೧. ಹರಿಹರ, ರಾಘವಾಂಕ, ಕೆರೆಯ ಪದ್ಮರಸ
೦೯. ೧೪ನೆಯ ಶತಮಾನದಲ್ಲಿ ಇಷ್ಟಲಿಂಗೋಪಾಸನೆ ೧೬೮
ಪ್ರಭುಲಿಂಗಲೀಲೆ-ಚಾಮರಸ
೧೦. ತೋಂಟದ ಸಿದ್ಧಲಿಂಗ ಶಿವಯೋಗಿಗಳ
ವಚನಗಳಲ್ಲಿ ಬಸವ ವಚನೋದಿತ ಇಷ್ಟಲಿಂಗೋಪಾಸನೆ ೧೭೩
೧೧. ಷಣ್ಮುಖ ಸ್ವಾಮಿ ವಚನೋದಿತ ಇಷ್ಟಲಿಂಗೋಪಾಸನೆ ೧೮೧
೧೨. ಶಿವಶರಣೆಯರ ವಚನಗಳಲ್ಲಿ ಇಷ್ಟಲಿಂಗೋಪಾಸನೆ ೧೯೨
೧. ಅಕ್ಕಮಹಾದೇವಿ ೧೯೨
೨. ಅಮುಗೆ ರಾಯಮ್ಮ ೧೯೬
೩. ಆಯ್ದಕ್ಕಿ ಲಕ್ಕಮ್ಮ ೧೯೭
೪. ಗಂಗಾಂಬಿಕೆ ೧೯೭
೫. ನಾಗಲಾಂಬಿಕೆ ೧೯೭
೬. ನೀಲಮ್ಮ ೧೯೮
೧೪. ಸಾರಾಂಶ ೨೦೦

ಭಾಗ-೨

೧. ಇಷ್ಟಲಿಂಗ ಯೋಗದ ವ್ಯಾಪ್ತಿ ೨೦೭
೨. ಇಷ್ಟಲಿಂಗ ಯೋಗದ ಪ್ರಾತ್ಯಕ್ಷಿಕೆ ೨೧೦
೩. ಪ್ರತ್ಯಕ್ಷ ಇಷ್ಟಲಿಂಗ ಯೋಗವಿಧಿ ೨೨೩
೧. ಇಷ್ಟಲಿಂಗಾರ್ಚನೆ ೨೨೩
೨. ಪ್ರಾಣ ಲಿಂಗಾರ್ಚನೆ ೨೩೯
೩. ಭಾವ ಲಿಂಗಾರ್ಚನೆ ೨೭೪

ಭಾಗ-೩

೧. ಇಷ್ಟಲಿಂಗ ಯೋಗ ೨೭೮
* ಸಾಧನೆಯಿಂದಾಗುವ ವೈಜ್ಞಾನಿಕ ತತ್ತ್ವಗಳ ಆಧಾರದ
ಮೇಲೆ ಆಗುವ ಲಾಭಗಳು
* ಶರಣರ ವೈಜ್ಞಾನಿಕ ಅನುಭೂತಿ ೨೭೯

೧. ಮೆಲಾಟೊನಿನ್ ಸ್ರಾವದಿಂದ ಲಾಭಗಳು ೨೮೪
* ಮೆಲಾಟೊನಿನ್ ಸ್ರಾವದ ಜ್ಞಾನ ಮತ್ತು ಮಹತ್ವ ಶರಣರಿಗಿತ್ತು
* ಇಷ್ಟಲಿಂಗಾರ್ಚನೆ ಬಲಮೆದುಳನ್ನು ಉತ್ತೇಜಿಸುತ್ತದೆ
೨. ಇಷ್ಟಲಿಂಗ ಕಪ್ಪುಬಣ್ಣದ ಮಹತ್ವ ೨೮೮
೩. ಇಷ್ಟಲಿಂಗದಲ್ಲಿದ್ದ ಚಂದ್ರಶಿಲೆ ೨೮೯
೪. ಲಿಂಗೋದಕ ೨೯೦
೫. ವಿಭೂತಿಧಾರಣೆ ೨೯೧

ಭಾಗ–೪

* ಗ್ರಂಥ ಸೂಚಿ ಮತ್ತು ಉಲ್ಲೇಖಗಳು ೨೯೫
* ಪದಕೋಶ ೩೦೨
* ಕರಡು ಪ್ರತಿ ಸಲ್ಲಿಕೆ, ಸಭಾ ಸೂಚನಾ ಪತ್ರಗಳು ೩೧೪

ಭಾಗ–೧

## ೨. ಸಾಹಿತ್ಯ ಮತ್ತು ಉಲ್ಲೇಖಗಳ ವಿಮರ್ಶೆ

॥ ದೃಷ್ಟವಪ್ಪ ಗುರುಕರಣದಲ್ಲಿ
ಇಷ್ಟಲಿಂಗ ಸಂಬಂಧಿಸ ಬಳಿಕ
ಮತ್ತೆ ಯೋಗ ಉಂಟೆ?
ಸರ್ವಯೋಗಕ್ಕೆ ಶಿವಯೋಗ
ಮಹಾಯೋಗವಾದ ಬಳಿಕ......
.......ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಧರ್ಮ ॥

ಮನದಂತೆ ಮಂಗಳವೆಂಬುದು
ತಪ್ಪದು ನೋಡಾ ಬಸವಣ್ಣ
ಅರಸುವಂಗೆ ಅರಕೆ ಸಾಧ್ಯವಪ್ಪುದು ತಪ್ಪದು
ಸ.ವ.ಸಂ.೩. ಚೆ.ಬ. ೧೪೫೦

ಇಷ್ಟಲಿಂಗ ಪೂಜಾಯೋಗಕ್ಕೆ
ಅಲ್ಲಮ ಪ್ರಭುಗಳು ಷಡಂಗಯೋಗವೆಂದು
ಶ್ರೀ ಬಸವಣ್ಣನವರು ಶುದ್ಧ, ಸಿದ್ಧ, ಪ್ರಸಿದ್ಧ
ಪ್ರಸಾದಯೋಗವೆಂದು ವರ್ಣಿಸಿದ್ದಾರೆ.

ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದರೆ ಆಯತ ಲಿಂಗ
ಆ ಇಷ್ಟಲಿಂಗದಲ್ಲಿ ಭಾವ ಮನೋವೇದ್ಯವಾದಲ್ಲಿ ಸ್ವಾಯತ ಲಿಂಗ
ಆ ಇಷ್ಟಲಿಂಗದ ಭಾವ ಮನೋವೇದ್ಯವಾದ ಸುಖವು
ಭಿನ್ನವಾಗಿ ತೋರದೆ, ಅನುಪಮ ಪರಿಣಾಮ



ಭರಿತವಾದಲ್ಲಿ ಸನ್ನಿಹಿತ ಲಿಂಗ
ಇಂತು, ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಯ
ಭಾವಲಿಂಗಂಗಳೆಂಬ ಲಿಂಗತ್ರಯಂಗಳು
ತನುತ್ರಯಂಗಳ ಮೇಲೆ ಆಯತ ಸ್ವಾಯತ ಸನ್ನಹಿತಂಗಳಾದ
ಶರಣನ ಪಂಚಭೂತಂಗಳಳಿದು ಪರಮಾತ್ಮ ನೆನಿಸಿದಲ್ಲಿ
ಷಡಂಗಯೋಗವಾದುದು ಕಾಣಾ ಗುಹೇಶ್ವರಾ
ಸ.ವ.ಸಂ.೨ ಅಲ್ಲಮಪ್ರಭು ವ.ಸಂ. ೯೪೪

ಜಿಹ್ವೆ ಗುರು,ಕಂಗಳು ಲಿಂಗ, ನಾಸಿಕ ವಾಚಾರ
ಹಸ್ತ ಜಂಗಮ, ಶ್ರೋತ್ರ ಪ್ರಸಾದ
ಈ ಪಂಚಾಚಾರ ಸಂಜ್ಞೆಯನು
ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಯೋಗ ಸಂಜ್ಞೆಯನೆನಗೆ
ನೀ ಕರುಣಿಸಲಾಯಿತ್ತು. ಕೂಡಲಸಂಗಮದೇವಾ
ಅ.ವ.ಸಂ.೧ ಬಸವಣ್ಣ, ವ.ಸಂ. ೧೧೯೭

ಇಷ್ಟಲಿಂಗಾರ್ಚನೆಯಿಂದ ಪ್ರಸಾದಕಾಯವಾಗುತ್ತದೆ
ಪ್ರಾಣಲಿಂಗಾರ್ಚನೆಯಿಂದ ಪ್ರಸಾದಕಾಯ ಪ್ರಕಾಶಕಾಯವಾಗುತ್ತದೆ
ಭಾವಲಿಂಗಾರ್ಚನೆಯಿಂದ ಪ್ರಕಾಶಕಾಯಾ ಆಕಾಶಕಾಯಾವಾಗುತ್ತದೆ

### ಇಷ್ಟಲಿಂಗ ಯೋಗ

### ಮನದಂತೆ ಮಂಗಳ

೧. ಮನುಷ್ಯರ ಅಂತರಂಗದಲ್ಲಿ ಅವರ ಅರಿವಿಗೆ ಬಾರದೆ ಬ್ರಹ್ಮಾಂಡ ವ್ಯಾಪ್ತವಾಗಿದ್ದ ಮಹಾಪ್ರಜ್ಞೆಯು ಹುದುಗಿರುತ್ತದೆ ಎಂದು ಮನೋವಿಜ್ಞಾನ ಸಿದ್ಧಪಡಿಸಿದೆ.

ಈ ಮಹಾಪ್ರಜ್ಞೆ ಎಂದರೆ ಮನುಷ್ಯನಿಗೆ ಎಲ್ಲವನ್ನು ಸಾಧಿಸುವ ಶಕ್ತಿಕೊಡಬಲ್ಲ ಆತನಲ್ಲಿಯೆ ನಿಷ್ಕ್ರಿಯೆ ರೂಪದಲ್ಲಿ ಗುಪ್ತವಾಗಿ ಕುಳಿತ್ತಿದ್ದ ದೊಡ್ಡ ಶಕ್ತಿಯ ನಿಧಿಯಾಗಿದೆ.

೨. ಇಷ್ಟಲಿಂಗಯೋಗದಲ್ಲಿ ಸಾಧಕ ಇಷ್ಟಲಿಂಗ ನೋಡುತ್ತ ಮನದ ಪ್ರಜ್ಞಾಅವಸ್ಥೆಯ ಬಲದಿಂದ ಪ್ರಜ್ಞೆಯ ಆಳಕ್ಕೆ ಇಳಿದು ಅಲ್ಲಿ ಅರಿವಿಗೆ ಬಾರದೆ ಗುಪ್ತವಾಗಿ ನೆಲೆಸುತ್ತಿದ್ದ ಮಹಾಪ್ರಜ್ಞಾನಿಧಿ ಮತ್ತು ತನ್ನ ಪ್ರಜ್ಞೆಯ ನಡುವೆ ಸಾಮರಸ್ಯದ ಕ್ರಿಯಾತ್ಮಕ ಸಂಬಂಧ ಪ್ರಸ್ತಾಪಿಸುತ್ತಾನೆ. ಸತತ ಸಾಧನೆಯಿಂದ ಅಲ್ಲಿಯವರೆಗೆ ನಿಷ್ಕ್ರಿಯವಾಗಿದ್ದ ಮಹಾಪ್ರಜ್ಞೆಯನ್ನು ಸಕ್ರಿಯಗೊಳಿಸಿ ತನ್ನ ಮನದ ಎಲ್ಲ ಅವಸ್ಥೆಗಳನ್ನು ಅದರಿಂದ ತುಂಬಿಕೊಳ್ಳುತ್ತಾನೆ.

೩. ಮಹಾಪ್ರಜ್ಞೆಯೆ ಎಲ್ಲ ಅವಸ್ಥೆಗಳ ಭಾಗವಾದಾಗ ಮನುಷ್ಯನ ಎಲ್ಲ ಕ್ರಿಯೆ ಮತ್ತು ಕಾಯಕಗಳು ಮಹಾಲಿಂಗದ ಕ್ರಿಯೆಗಳಾಗುತ್ತವೆ ಇದರಿಂದ ಆತ ಮನದಿಚ್ಛೆಯಂತೆ ಸಮೃದ್ಧ ಸಂತೋಷದ ಪರಿಪೂರ್ಣವಾದ ಉನ್ನತ ಜೀವನ ಬಾಳುತ್ತಾನೆ.

೪. ರೋಗಗಳನ್ನು ಗುಣಪಡಿಸುವ ಅನಂತದ ಉಪಸ್ಥಿತಿ ನಮ್ಮ ಅರಿವಿಗೆ ಬಾರದ ಉಪಪ್ರಜ್ಞೆ ಶಕ್ತಿಗಳಲ್ಲಿ ಅಡಗಿದೆ. ವೈಯಕ್ತಿಕವಾಗಿ ನಮಗೆ ಬಂದ ರೋಗವನ್ನು ಗುಣಪಡಿಸುವ ನಮ್ಮ ಉಪಪ್ರಜ್ಞೆಯ ಶಕ್ತಿ ಅನುಭವಕ್ಕೆ ಬಂದರೆ ಅದೆ ರೋಗ ಗುಣಪಡಿಸುತ್ತದೆ. ದುರ್ದೈವದಿಂದ ನಮಗೆ ರೋಗ ಬಂದರೆ ವೈದ್ಯರ ಉಪಾಯದ ಜೊತೆ ಇಷ್ಟಲಿಂಗಯೋಗ ಮಾಡಿನೋಡಿ. ಪ್ರಸ್ತುತ ಸಮಯದಲ್ಲಿ ಚಿಕಿತ್ಸೆಗೆ ಮೀರಿದ ದುರ್ಧರ ರೋಗಗಳು ಗುಣಪಡುತ್ತವೆ.

ಏಕೆಂದರೆ ಇಷ್ಟಲಿಂಗ ನಿಮ್ಮಲ್ಲಿ ಹುದುಗಿದ್ದ ಉಪಪ್ರಜ್ಞಾ ಶಕ್ತಿಯನ್ನು ಜಾಗೃತಗೊಳಿಸಿ ಅದರ ರೋಗನಿವಾರಕ ಶಕ್ತಿಯನ್ನು ಎಬ್ಬಿಸುತ್ತದೆ.

೫. ನಿಸ್ಸಂಶಯವಾಗಿ ಇಷ್ಟಲಿಂಗಾರ್ಚನೆ ತೊಂದರೆಯ ಸಮಯದಲ್ಲಿ ಯಾವಾಗಲೂ ಸಹಾಯಕ್ಕಾಗಿ ಮುಂದೆ ಬರುತ್ತದೆ. ಆದರೆ ನೀವು ತೊಂದರೆಗಾಗಿ ಕಾಯಬೇಕಾಗಿಲ್ಲ. ಇಷ್ಟಲಿಂಗಾರ್ಚನೆ ಮತ್ತು ಇಷ್ಟಲಿಂಗ ಯೋಗವನ್ನು ನಿಮ್ಮ ಜೀವನದ ರಚನಾತ್ಮಕ ಅವಿಭಾಜ್ಯ ಭಾಗವನ್ನಾಗಿ ಮಾಡಿ.

೬. ನಾನು ನನ್ನ ಸ್ವಂತ ಜೀವನದಲ್ಲಿ ಇಷ್ಟಲಿಂಗಯೋಗದ ಶಕ್ತಿಯನ್ನು ಅನುಭವಿಸಿದ್ದೇನೆ.



೭. ಇಷ್ಟಲಿಂಗ ಯೋಗ ಸಾಧನೆಗೆ ಸುಲಭವಾದ ಸರಳ ಕಾರ್ಯ ಸಾಧ್ಯವಾದ ಮಾದರಿಯ ಅರ್ಚನೆ ಮತ್ತು ಯೋಗವಾಗಿದೆ. ಇದು ಮಾಡಲು ಅತ್ಯಂತ ಸರಳವಾಗಿದ್ದು ಅಪವಾದ ಇಲ್ಲದೆ ಎಲ್ಲರು ಇದನ್ನು ಮಾಡಬಹುದು ಮತ್ತು ಎಲ್ಲರಿಗೂ ಫಲದೊರಕುತ್ತದೆ. ಇದು ಇದರ ವಿಶೇಷತೆ ಇದೆ.

೮. ಇಷ್ಟಲಿಂಗ ಯೋಗವು ತನ್ನ ಇತ್ಯಾರ್ಥದಲ್ಲಿರುವ ಯಾವುದೆ ವಿಧಾನಗಳನ್ನು ಬಳಸಿಕೊಂಡು ನಿಮ್ಮ ಉತ್ತಮ ಗುರಿಗಳನ್ನು ಸಾಧಿಸಲು ಮನುಷ್ಯನ ಸಾಮರ್ಥ್ಯ ಪೂರೈಸುತ್ತದೆ.

೯. ವ್ಯಕ್ತಿಯ ಅರಿವಿಗೆ ಬಾರದ ಉಪಪ್ರಜ್ಞೆಯ ಮನಸ್ಸು ಅವನ ಪ್ರಜ್ಞಾ ಅವಸ್ಥೆಯಲ್ಲಿಯ ಮನಸ್ಸಿನಲ್ಲಿ ಮೂಡಿದ ಚಿತ್ರ ಅಥವಾ ಅದರಲ್ಲಿಯ ಶಕ್ತಿಶಾಲಿವಿಚಾರಕ್ಕೆ ಪ್ರತಿಕ್ರಿಯಿಸಿದಾಗ ಮಾತ್ರ ಇಷ್ಟಲಿಂಗಾರ್ಚನೆಗೆ ಫಲ ದೊರಕುತ್ತದೆ. ಅದಕ್ಕಾಗಿ ದಿನನಿತ್ಯ ಇಷ್ಟಲಿಂಗಯೋಗ ಮಾಡಿದರೆ ಪ್ರಜ್ಞಾವಸ್ಥೆಯ ಮನದಲ್ಲಿ ಇದ್ದ ಚಿತ್ರ ಅಥವಾ ವಿವೇಚನೆ ಸಹಜವಾಗಿ ಉಪಪ್ರಜ್ಞೆಗೆ ತಲುಪಿ ಅಲ್ಲಿ ಪ್ರತಿಕ್ರಿಯೆ ಮೂಡಿಸುತ್ತವೆ.

೧೦. ವಿಶ್ವಾಸದ ನಿಯಮವು ಕೂಡ ಇಷ್ಟಲಿಂಗಾರ್ಚನೆಯಲ್ಲಿ ಹೆಚ್ಚು ಬಲವಾಗಿ ಕಾರ್ಯನಿರ್ವಹಿಸುತ್ತದೆ. ಅದಕ್ಕಾಗಿ ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದರೆ ಯೋಗ ಸಾಧನೆಗೆ ಫಲ ಬರುವದು ನಿಶ್ಚಿತವಾಗುತ್ತದೆ.

೧೧. ವಿಶ್ವಾಸವೆಂದರೆ ನಾವು ಯಾವುದನ್ನು ಪ್ರಾರ್ಥಿಸುತ್ತೇವೋ ಅದನ್ನು ಮಾನಸಿಕವಾಗಿ ಗ್ರಹಿಸಿ ಅಳುಗಾಡದೆ ಅದನ್ನು ಸ್ವೀಕರಿಸುವದಾಗಿದೆ. ಇಷ್ಟಲಿಂಗ ಮಹಾಘನಲಿಂಗ ಪರಮಾತ್ಮನ ಮಹಾಪ್ರಜ್ಞೆಯ ಸಾಕ್ಷಾತ ಸ್ವರೂಪವಾಗಿದ್ದು ನಮ್ಮಲ್ಲಿ ಸುಖದುಃಖ, ವಾಮಕ್ಷೇಮದ, ಹುಟ್ಟು ಸಾವಿನ ಕಾರಣಕರ್ತವಾಗಿದೆ.

೧೨. ಜೀವನದ ನಿಯಮವು ನಂಬಿಕೆಗಳ ನಿಯಮವಾಗಿದೆ. ಇದನ್ನು ಸಂಕ್ಷಿಪ್ತವಾಗಿ ಹೇಳುವದೆಂದರೆ ನಿಮ್ಮ ಮನಸ್ಸಿನಲ್ಲಿರುವ ಒಂದು ಆಲೋಚನೆ ಅಥವಾ ನಿಮ್ಮ ಪ್ರಜ್ಞೆಯಲ್ಲಿ ಮೂಡಿನಿಂತ ಒಂದು ಚಿತ್ರವಾಗಿದೆ. ಬ್ರಹ್ಮಾಂಡ ವ್ಯಾಪ್ತ ಮಹಾಘನಲಿಂಗನ ಮಹಾಪ್ರಜ್ಞಾಸ್ವರೂಪಿ ಇಷ್ಟಲಿಂಗದ ಚಿತ್ರ ಅದರ ಧ್ಯಾನ ನಿಮ್ಮ ಪ್ರಜ್ಞಾಮನದಲ್ಲಿ ಯಾವಾಗಲೂ ಸಕ್ರೀಯವಾಗಿರಬೇಕು.

೧೩. ನಾನು ಪ್ರತಿನಿತ್ಯ ಇಷ್ಟಲಿಂಗಾರ್ಚನೆ ಮಾಡುತ್ತೇನೆ, ಪ್ರಾರ್ಥನೆ ಮಾಡುತ್ತೇನೆ ಆದರೆ ನನ್ನ ಸಾಧನೆ ಮತ್ತು ಪ್ರಾಥನೆಗೆ ಯಾವುದೆ ಪ್ರತಿಫಲ ಬರುವದಿಲ್ಲವೆಂದು ಹತಾಶಾಗಿ ಕೇಳುವವರು ಅನೇಕರುಂಟು.

೧೪. ಅವರಿಗೆ ಉತ್ತರ: ಇಷ್ಟಲಿಂಗಾರ್ಚನೆ ಮತ್ತು ಯೋಗದ ಶಕ್ತಿಯಲ್ಲಿ ಅಚಲವಾದ ವಿಶ್ವಾಸವಿಟ್ಟು ಪ್ರತಿನಿತ್ಯ ಇಷ್ಟಲಿಂಗಾರ್ಚನೆ ಮಾಡುತ್ತಿರಬೇಕು. ಜೀವನದ ಎಲ್ಲ ಒಳ್ಳೆಯ ವಿಷಯಗಳ ಸಾಕಾರ ರೂಪಗಳನ್ನು ಇಷ್ಟಲಿಂಗ ದೃಷ್ಟಿಯಲ್ಲಿಟ್ಟು ಪ್ರಜ್ಞಾಪೂರ್ವಕವಾಗಿ ನಿಮ್ಮ ಉಪಪ್ರಜ್ಞಾ ಅವಸ್ಥೆಗೆ ಇಳಿದು ಅದರಲ್ಲಿ ಆ ರೂಪಗಳನ್ನು ಪ್ರಸ್ತಾಪಿತ ಮಾಡಿ ಪ್ರಾರ್ಥಿಸಿರಿ. ನಿಮ್ಮ ಪ್ರಾರ್ಥನೆಗೆ ಉತ್ತರ ಶೀಘ್ರದಲ್ಲಿಯೇ ಬರುತ್ತದೆ.

## ಸಾಹಿತ್ಯ:

## ಇಷ್ಟಲಿಂಗ ಪೂಜಾ ಯೋಗ:

ಉತ್ತಮ ಜೀವನ ರಚಿಸುವ ಸುಲಭ ವೈಜ್ಞಾನಿಕ ಉಪಾಯವಾಗಿದೆ.

೧. ಮನೋವೈಜ್ಞಾನಿಕ ಲಾಭಗಳು:

ತಾನು ಸುಖಿಯಾಗಿ ಪ್ರಗತಿ ಸಾಧಿಸಬೇಕು, ಕುಟುಂಬದ ಜವಾಬ್ದಾರಿ ಪಾಲಿಸಬೇಕು, ಇತರರ ಹಿತವನ್ನು ಸಾಧಿಸಬೇಕು. ಆಧ್ಯಾತ್ಮಿಕ ಅನುಭೂತಿಯನ್ನು ಪಡೆಯಬೇಕು, ಮಹಾಲಿಂಗ ಪರಮಾತ್ಮನ ಕೃಪೆ ನಮ್ಮಮೇಲಿರಬೇಕು, ಜೀವನದಲ್ಲಿ ಸಫಲರಾಗಬೇಕೆಂಬುವವರು ಇಷ್ಟಲಿಂಗ ಪೂಜಾಯೋಗದ ಮಾರ್ಗಹಿಡಿಯಬೇಕು. ಈ ಲಿಂಗ ಸಾಧನೆಯು ನಿಮ್ಮ ಸರಿಯಾದ ಮತ್ತು ಶ್ಲಾಘನೀಯ ಬಯಕೆಯನ್ನು ಪೂರ್ತಿ ಮಾಡಿಯೇ ತೀರುತ್ತದೆ.

॥ ಯಾರು ಗೆಲ್ಲುತ್ತೇನೆ ಎಂದು ಭಾವಿಸಿ ಪ್ರಯತ್ನ ಮಾಡುತ್ತಾರೆಯೋ ಅವರು ಖಚಿತವಾಗಿ ಗೆಲ್ಲುತ್ತಾರೆ.

ಮನದಂತೆ ಮಂಗಳವೆಂಬುದು ತಪ್ಪದು ನೋಡಾ
ಇದು ಶರಣರ ಸಿದ್ಧ ವಾಕ್ಯ ॥



ನಿಮ್ಮನ್ನು ಸೋಲುವ ವ್ಯಕ್ತಿತ್ವದಿಂದ ಗೆಲ್ಲವು ವ್ಯಕ್ತಿತ್ವವಾಗಿ ರೂಪಾಂತರಿಸುತ್ತದೆ, ನಿರಾಶೆಯಿಂದ ಹತಾಶನಾದ ವ್ಯಕ್ತಿತ್ವದಿಂದ ಯಶಸ್ವಿಯಾಗಿ ತೃಪ್ತನಾದ ವ್ಯಕ್ತಿತ್ವವಾಗಿ ಪರಿವರ್ತಿಸುತ್ತದೆ. ಎಲ್ಲರು ಬೇಡ ಬೇಡವೆಂಬ ನಿಮ್ಮನ್ನು ಎಲ್ಲರಿಗು ಬೇಕು ಬೇಕು ಎಂಬ ಮನುಷ್ಯನಾಗಿ ಮಾಡುತ್ತದೆ. ಇಷ್ಟಲಿಂಗ ಪೂಜಾಯೋಗ ಅದು ಹೇಗೆ ಮಾಡುತ್ತದೆ, ಎಂದರೆ ನಿಮ್ಮಲ್ಲಿ ಅದು ನಾಲ್ಕು ಪರಿವರ್ತನೆ ಮಾಡುತ್ತದೆ:

೧. ನಿಮ್ಮ ಆಲೋಚನಾ ಸಾಮರ್ಥ್ಯ ಹೆಚ್ಚಿಸುತ್ತದೆ(**Thinking**). ಆಲೋಚನೆಯ ದಿಶೆಯನ್ನು ಬದಲಾಯಿಸಿ ಸರಿಯಾದ ದಿಶೆಗೆ ಹಚ್ಚುತ್ತದೆ, ಚಿಂತನದ ಆಳ ಹೆಚ್ಚಿಸುತ್ತದೆ. ಇದರಿಂದ ನಿಮ್ಮ ನಿರ್ಣಾಯಕ ಬುದ್ಧಿ ಶಕ್ತಿ ಹೆಚ್ಚಾಗುತ್ತದೆ.

೨. ನಿಮ್ಮ ಭಾವನಾತ್ಮಕ ಭಾಗಲಬ್ದ (**Emotional Quotient**) ವೃದ್ಧಿಗೊಳಿಸುತ್ತದೆ. ಮಾನಸಿಕವಾಗಿ ನಿರ್ಭಯರಾಗಿ ಸದೃಢ ಮನಸ್ಸು ಹೊಂದಿ ಶಾಂತಿಯುತ ಸೃಜನಶೀಲ ಪ್ರಗತಿಪರ ವ್ಯಕ್ತಿಯಾಗುತ್ತೀರಿ.

೩. ನಿಮ್ಮ ವರ್ತನೆ(**Attitude**) ಬದಲಾಗುತ್ತದೆ. ಸ್ವಯಂ ನೀವು ನಿಮ್ಮ ಕಡೆ ನಿಮ್ಮಕುಟುಂಬಿಯರ ಕಡೆ ಮತ್ತು ಸಮಾಜದ ಕಡೆ ಸಕಾರಾತ್ಮಕ ದೃಷ್ಟಿಯಿಂದ ವರ್ತಿಸುತ್ತೀರಿ. ಇದರಿಂದ ಎಲ್ಲರ ವತಿಯಿಂದ ನಿಮಗೆ ಸಹಕಾರ ದೊರಕುತ್ತದೆ.

೪. ನಿಮ್ಮ ಸ್ಮರ್ಣ(**Memory**) ಬದಲಾಗುತ್ತದೆ. ಪ್ರತಿಯೊಬ್ಬ ಮನುಷ್ಯನಲ್ಲಿ ಸ್ಮರ್ಣಗಳ ಬ್ಯಾಂಕ ಇರುತ್ತದೆ. ಅದರಲ್ಲಿ ಹಿಂದೆ ಆದ ಘಟನೆಗಳು ಹೆಚ್ಚಾಗಿ ನಕಾರಾತ್ಮಕ ಭಾವನೆಗಳು, ಸ್ಮರ್ಣಗಳು ತುಂಬಿರುತ್ತವೆ. ಆದರೆ ಅವೆ ಘಟನೆಗಳ ಎಷ್ಟೋ ಸಕಾರಾತ್ಮಕ ಭಾವನೆಗಳು, ಸ್ಮರರ್ಣಗಳು ಸ್ಮರ್ಣ ಬ್ಯಾಂಕಿನಲ್ಲಿ ತುಂಬಿರುವದಿಲ್ಲ, ಇಷ್ಟಲಿಂಗ ಪೂಜಾಯೋಗ ನಿಮ್ಮಲ್ಲಿಯ ನಕಾರಾತ್ಮಕ ಸ್ಮರ್ಣ ತೆಗೆದು ಸಕಾರಾತ್ಮಕ ಸ್ಮರ್ಣ ತುಂಬುತ್ತವೆ. ನಾವು ಯಾವುದೆ ನಿರ್ಣಯ ಮಾಡುವಲ್ಲಿ ನಮ್ಮ ಸ್ಮರ್ಣಗಳು ಬಹಳೆ ಮಹತ್ವದ ಪಾತ್ರ ವಹಿಸುತ್ತವೆ ಅಷ್ಟೇ ಅಲ್ಲ ನಮ್ಮ ಭಾವನಾತ್ಮಕ ಜೀವನ ಕೂಡ ನಿರ್ಧರಿಸುತ್ತವೆ. ಇದರಿಂದ ನೀವು ಒಳ್ಳೆ ನೆನಪು ಹೊಂದಿದ ಸಕಾರಾತ್ಮಕ ವ್ಯಕ್ತಿ ಆಗುತ್ತೀರಿ.

ಹೀಗೆ ಇಷ್ಟಲಿಂಗ ಪೂಜಾಯೋಗ ಮನೋವೈಜ್ಞಾನಿಕವಾಗಿ ನಿಮ್ಮ ಮನವೆಂಬ ರಥದ ನಾಲ್ಕು ಗಾಲಿಗಳಾದ **Thinking**(ವಿವೇಚನಾ), **Emotional**(ಭಾವನೆ), **Attitude**(ವರ್ತನೆ), **Memory**(ಸ್ಮರ್ಣ) **TEAM** ಪರಿವರ್ತಿಸುತ್ತದೆ. ಇಷ್ಟಲಿಂಗ ಪೂಜಾಯೋಗದಿಂದ ಮೆದುಳಿನ ಕೋಶ ಕೋಶಗಳಲ್ಲಿ ಹೊಸ ಸಂಪರ್ಕ ಪ್ರಸ್ತಾಪಿತವಾಗುತ್ತವೆ. ಮೆದುಳಿನ ಚಯಾಪಚಯದ ಅವಶೇಷಗಳು (**metabolic debris**) ಹರಿದು ಹೋಗಿ ಮೆದುಳು ಚೈತನ್ಯಮಯ(**refresh**) ಆಗುತ್ತದೆ.

## ೨. ಭೌತಿಕ ಶರೀರದ ಮೇಲಿನ ಪರಿಣಾಮದಿಂದಾಗುವ ಲಾಭಗಳು:

೧. ಪಿನಿಯಲ ಗ್ರಂಥಿಯಿಂದ ಮೆಲಾಟೊನಿನ್ ಸ್ರಾವ ಹೆಚ್ಚಿಸುತ್ತದೆ. ಇದರಿಂದ ರೋಗಪ್ರತಿರೋಧಕ ಶಕ್ತಿ (**immunity**) ಹೆಚ್ಚಾಗುತ್ತದೆ, ನಿದ್ದೆ ಸರಿಯಾಗಿ ಬರುತ್ತದೆ. ಬೈಯೋರಿಥಮ್ಸ ಸಾಮಾನ್ಯವಾಗುತ್ತವೆ. ಆಯುಷ್ಯ ೧೦-೨೫% ಹೆಚ್ಚಾಗುತ್ತದೆ. ಇದೆ ಗ್ರಂಥಿಯಿಂದ ಒಂದು ವೇಳೆ **DMT**ಯ ಸ್ರಾವವಾದರೆ ಜ್ಞಾನೋದಯ ಆಧ್ಯಾತ್ಮಿಕ ಅನುಭೂತಿಯಾಗುತ್ತದೆ. ಪಿನಿಯಲ ಗ್ರಂಥಿಯ ಸ್ರಾವಗಳು ಮನುಷ್ಯನ ಪ್ರಜ್ಞಾ ಅವಸ್ಥೆ, ಸ್ಥಲ ಮತ್ತು ಕಾಲದ ಜ್ಞಾನಗಳಿಗೆ ಸಂಬಂಧ ಪಟ್ಟಿದ್ದ ಗ್ರಂಥಿಯಾಗಿದೆ. ಇಷ್ಟಲಿಂಗ ಪೂಜಾಯೋಗ ಈ ಗ್ರಂಥಿಯ ಕಾರ್ಯ ಉತ್ತಮವಾಗಿಸುತ್ತದೆ.

೨. ಇಷ್ಟಲಿಂಗ ಎಡಕೈಯಲ್ಲಿ ಹಿಡಿದು ನೋಡಿ ಯೋಗ ಮಾಡುವದರಿಂದ ಬಲಮೆದುಳಿನ ಕಾರ್ಯಗಳಾದ ಹೊಸ ನಿರ್ಮಿತಿ, ಸೃಜನಶೀಲತೆ ಸಂಶೋಧನ ಬುದ್ಧಿ, ಕಲೆ ಮತ್ತು ಸಂಗೀತಗಳ ಗ್ರಹಿಕೆ ಹೆಚ್ಚಾಗುತ್ತವೆ. ಭೇದಾಭೇದ ಕಡಿಮೆ ಆಗಿ ಮನಗಳು ಉತ್ತಮವಾಗಿ ಕಾರ್ಯಮಾಡುತ್ತವೆ.

೩. ಇಷ್ಟಲಿಂಗ ಕಪ್ಪು ಬಣ್ಣದಾಗಿದ್ದರಿಂದ ಅದನ್ನು ಧರಿಸುವದರಿಂದ ಅಂಗದ ಮೇಲೆ ಹೊರಗಿನಿಂದ ಬೀಳುವ ಘಾತಕ ಕಿರಣಗಳಾದ, ಗ್ಯಾಮಾ, ಬೀಟಾ ಮತ್ತು ಯ್ಯೂವಿ ರೇಜ್‌ಗಳನ್ನು ಅದು ಹೀರಿಕೊಳ್ಳುತ್ತದೆ.

೪. ಇಷ್ಟಲಿಂಗದಲ್ಲಿ ಚಂದ್ರಶಿಲೆ (**Moon stone**) ಇರುವದರಿಂದ ಕಂಪ್ಯೂಟರ್‌ಗಳಲ್ಲಿಯ ಚಿಪ್‌ಗಳಂತೆ ಕಾರ್ಯ ಮಾಡಬಹುದಲ್ಲದೆ ರತ್ನಶಾಸ್ತ್ರದ ಅನುಸಾರ ಚಂದ್ರಶಿಲೆ ಮಂಗಳಕಾರಿಯಾಗಿರುತ್ತದೆ.



೫. ಇಷ್ಟಲಿಂಗ ಪೂಜಾಯೋಗಕ್ಕಾಗಿ ಶರೀರದ ಮೇಲಿನ ೩೨ ನಿರ್ಧಿಷ್ಟ ಸ್ಥಾನಗಳಿಗೆ ವಿಭೂತಿ ಒತ್ತಡ ಹಾಕಿ ಹಚ್ಚುವದರಿಂದ ವಿಭೂತಿ ಹಚ್ಚುವ ಸ್ಥಳಗಳ ಹಿಂದೆ ಮತ್ತು ಒಳಗಿರುವ ಥೈರೊಯಿಡ್ ಪಾನಕ್ರಿಯಾಜ ಹೆಣ್ಣುಮಕ್ಕಳಲ್ಲಿ ಒವ್ಹರೀಜ ಗ್ರಂಥಿಗಳು ಸರಿಯಾಗಿ ಸ್ರಾವ ಮಾಡುತ್ತವೆ, ಹೃದಯ, ಕಿಡ್ನಿ, ಬ್ಲ್ಯಾಡರಗಳಂಥ ಅಂತರ ಅವಯವಗಳು ಸರಿಯಾಗಿರುತ್ತವೆ. ಇವುಗಳಿಗೆ ಬರುವ ಪ್ರಮುಖ ರೋಗಗಳು ಬರುವುದಿಲ್ಲ.

೬. ಇಷ್ಟಲಿಂಗ ಪೂಜಾಯೋಗದಲ್ಲಿ ಲಿಂಗೋದಕ ಅಥವಾ ಲಿಂಗದ ತೀರ್ಥ ಕುಡಿಯುುವದರಿಂದ ಶರೀರದಲ್ಲಿಯು ಅನೇಕ ಬಾಧೆಗಳ ನಿವಾರಣವಾಗುತ್ತದೆ.

೩. ಆಧ್ಯಾತ್ಮಿಕ ಅನುಭೂತಿ

ಇಷ್ಟಲಿಂಗ ಪೂಜಾಯೋಗ ಮೂಲದಲ್ಲಿ ಪೀನಿಯಲ ಗ್ರಂಥಿ ಮತ್ತು ಬಲಮೆದುಳನ್ನು ಚುರುಕುಗೊಳಿಸುತ್ತದೆ. ಇದರಿಂದ ಪ್ರಜ್ಞಾ ಅವಸ್ಥೆ ಮತ್ತು ಅರಿವು ಹಾಗು ಗ್ರಹಿಕೆಗಳು ಸತ್ಯನಿಷ್ಟವಾಗುತ್ತವೆ. ಆಕಾರದ ಹಿಂದಿನ ನಿರಾಕಾರ ಸ್ವರೂಪ ಸಹಜ ದೃಷ್ಟಿಯಲ್ಲಿ ಬರುತ್ತವೆ. ಸಕ್ಕರೆಯ ರೂಪದ ಹಿಂದಿನ ಸಿಹಿ ಹೂವಿನ ಹಿಂದಿನ ಸುಗಂಧ ಮನುಷ್ಯರ ಹಿಂದಿನ ಮನಸ್ಸು ತಿಳುವಳಿಕೆಗೆ ಬರುತ್ತವೆ. ಜ್ಞಾನದ ವ್ಯಾಪಕತೆ ಮತ್ತು ಭಾವನೆಗಳ ಆಳ ಹೆಚ್ಚಾಗುತ್ತವೆ. ಇದರಿಂದಾಗಿ ಜ್ಞಾನಾತೀತದ ಅವಸ್ಥೆ ಮತ್ತು ಅಸ್ತಿತ್ವಗಳು ಜ್ಞಾನದ ತಲುಪಿನಲ್ಲಿ ಬರುತ್ತವೆ. ಭಾವಾತೀತದ ಕಲ್ಪನೆಗಳು ಭಾವನೆಯಲ್ಲಿ ಪ್ರಕಟವಾಗುತ್ತವೆ. ಆವಾಗ ಅರಿವಾಗುತ್ತದೆ. ನಾನೂ ಎಂಬುದು ಯಾರು? ತನ್ನರಿವು ತನಗಾಗುತ್ತದೆ.

ಸಕಲ ಬ್ರಹ್ಮಾಂಡಗಳನ್ನು ನಿರ್ಮಿಸಿ ಅವುಗಳನ್ನಾವರಿಸಿ ಅವುಗಳು ಮತ್ತು ಅವುಗಳಲ್ಲಿ ನಿರ್ಮಿತವಾದ ಅಸ್ತಿತ್ವಗಳನ್ನು ನಿರ್ವಹಿಸುವ, ಸಂಹರಿಸುವ ಮಹಾ ಶಕ್ತಿ ವಸ್ತು ಒಂದೇ ಆಗಿದ್ದು ಅದಕ್ಕೆ 'ಶೂನ್ಯ' ಮಹಾಪ್ರಜ್ಞೆ, ಘನಲಿಂಗ ಪರಮಾತ್ಮನೆಂದು ಮನುಷ್ಯರು ಗುರುತಿಸಿದ್ದಾರೆ. ಈ ಶೂನ್ಯವೆ ಪರಿವರ್ತಿತವಾಗಿ ಪಂಚಮಹಾಭೂತಗಳಾಗಿ ಮಾರ್ಪಟ್ಟು ಅವುಗಳಿಗೆ ಸೂರ್ಯ, ಚಂದ್ರ ಮತ್ತು ಶೂನ್ಯದ ತಿರುಳಾದ ಆತ್ಮ ಸೇರಿ, ಅಷ್ಟ ತನುವೆಂಬ ಮಾನವ ಶರೀರವಾಗಿದೆ. ಇದೆ ಮನುಷ್ಯನ ಅಂಗ.

ಅದೇ ಶೂನ್ಯದ ಮಹಾಪ್ರಜ್ಞೆ ಅರಿವಾಗಿ, ಮನುಷ್ಯನ ಅಂಗದ ಪ್ರತಿಯೊಂದು ಕೋಶವನ್ನು ಮನುಷ್ಯ ಪ್ರಜ್ಞೆಯಾಗಿ ಚೇತರಿಸಿ ಅವನಲ್ಲಿ ಮನ, ಬುದ್ಧಿ, ಚಿತ್ತು, ಅಹಂಕಾರವಾಗಿ ಕ್ರಿಯಾ ರೂಪಕ್ಕೆ ಬರುತ್ತದೆ. ಇದೇ ಲಿಂಗ, ವಾಸ್ತವದಲ್ಲಿ ಮನುಷ್ಯನ ಅಂಗವು ಮತ್ತು ಅವನಲ್ಲಿಯ ಲಿಂಗವು ಅದೆ. "ಏಕಂ ಏವ ಅದ್ವಿತಿಯಂ"ವಾಗಿದ್ದ ಶೂನ್ಯದ ಪ್ರಕೃತಿ ಪರಾವರ್ತಿತ ರೂಪಗಳಾಗಿವೆ. ಈ ವಾಸ್ತವದ ಅನುಭವ ಹೊಂದಿ ಬಾಳುವದೇ ಅಂಗ ಲಿಂಗದ ಸಾಮರಸ್ಯ. ಹೀಗಾದಾಗ ಮನುಷ್ಯನ ಸರ್ವಾಂಗ ಲಿಂಗವಾಗುತ್ತದೆ. ಹೀಗಾದವನೆ ಶರಣ, ಆತನೇ ಅರಿವು–ಆಚಾರ–ಅನುಭಾವ ಒಂದಾದವ *ನಮ್ಮ ನಡವಳಿಕೆ ಅಥವಾ ವರ್ತನೆ;* ನಮ್ಮ ಜೀವನದ ಅನುಭವಗಳ ಮತ್ತು ಅನುವಂಶಿಕವಾಗಿ ಬಂದ ಗುಣಗಳಲ್ಲಿಯ ಪರಸ್ಪರ ಪ್ರತಿಕ್ರಿಯೆಗಳ ಪರಿಣಾಮದಿಂದ ಮೆದುಳಿನಲ್ಲಿ ಆಗುವ ಭೌತ ರಾಸಾಯನಿಕ ಬದಲಾವಣೆಗಳ ಫಲಿತವಾಗಿರುತ್ತದೆ. ಮನೋವಿಕಾರಗಳು ಮನುಷ್ಯನ ವರ್ತನೆಗಳನ್ನು ಬದಲಾಯಿಸುತ್ತವೆ. ಮನುಷ್ಯರ ವರ್ತನೆ ಅವರಲ್ಲಿಯ ಅನುವಂಶಿಕ ಗುಣ ಮತ್ತು ಜೀವನ ಅನುಭವ ನಿಯಂತ್ರಣದಲ್ಲಿರಲಾರದ ಎರಡು ಅಂಶಗಳ ಆಧಾರದ ಮೇಲೆ ಆಗುವ ಕಾರಣದಿಂದ ಇದರಲ್ಲಿ ವ್ಯಕ್ತಿ ತನ್ನ ಮನೋವಿಕಾರಕ್ಕಾಗಿ ಬಹಳ ಕಡಿಮೆ ಜವಾಬ್ದಾರನಾಗಿರುತ್ತಾನೆ. ಇದರ ವಿಪರೀತವಾಗಿ ಇತರರು ಅವನ ಮೇಲೆ ಮಾಡಿದ ಅನುಚಿತ ಕಾರ್ಯಗಳಿಗಾಗಿ ಆತ ಕಷ್ಟ ಭೋಗಿಸುತ್ತಾನೆ. ಅದಕ್ಕಾಗಿ ಶರಣರು "ಸಮಸ್ತ ಕತ್ತಲೆಯ ಮಸುಕವ ಕಳೆದಿಪ್ಪ ಇರುವ ನೋಡಾ" ಎನ್ನುತ್ತಾರೆ. ಅಂದರೆ ಮನುಷ್ಯರಲ್ಲಿಯ ಮಸುಕು ಅರ್ಥಾತ ಕಪ್ಪು ಗುಣ ತೆಗೆಯುವ ಮಾತಾಡುತ್ತಾರೆ ಮನುಷ್ಯನಿಗಲ್ಲ.

ಮನೋವಿಕಾರಗಳು ತನ್ನಿಂದಾಗಿ ಬಂದ ಕಾಯಿಲೆಗಳಲ್ಲ ಅನುವಂಶಿಕ ಗುಣ ಮತ್ತು ಪರಿಸ್ಥಿತಿಗಳಿಂದ ಬಂದಿರುತ್ತವೆ. ಅವುಗಳ ಕಾರಣಗಳನ್ನು ಇಲ್ಲದಂತೆ ಮಾಡುವದು ಸಂಬಂಧಿಕರ ಜವಾಬ್ದಾರಿಯಾಗಿದೆ. ಆದರೆ ಈ ತರಹದ ಅನೇಕ ಕಾಯಿಲೆಗಳಲ್ಲಿ ಮೆದುಳಿನಲ್ಲಿ ಭೌತರಸಾಯನ ಬದಲಾವಣೆಯಾಗುವದು ಕಂಡುಬರುತ್ತದೆ.

ಇಷ್ಟಲಿಂಗ ಪೂಜಾಯೋಗ ಮೆದುಳಿನಲ್ಲಿಯ ಭೌತ ರಾಸಾಯನಿಕ ಬದಲಾವಣೆಗಳನ್ನು ತಡೆಯುತ್ತದೆ. ಅಥವಾ ಅದರಲ್ಲಿ ಸರಿಯಾದ



ಬದಲಾವಣೆಗಳನ್ನು ಮಾಡುತ್ತದೆ. ಇದರಿಂದ ಪೀಡಿತ ವ್ಯಕ್ತಿ ಗುಣಮುಖ ನಾಗುತ್ತಾನೆ.

ಗಂಭೀರ ಮನೋವಿಕಾರಗಳಾದ ಸ್ಕಿಜೋಫ್ರೇನಿಯಾ ಮತ್ತು ಮ್ಯಾನಿಯಾಕ ಡಿಪ್ರೆಸಿವ ಇಲ್ಲನೆಸ್ ಮತ್ತು ಅಷ್ಟು ಗಂಭೀರವಾಗಿರದ ನ್ಯುರೋಸಿಸ, ಪರಸನಾಲಿಟಿ ಡಿಸಾರ್ಡರ, ಮಾದಕ ದ್ರವ್ಯಗಳ ವ್ಯಸನಗಳಲ್ಲಿ ಅನುವಂಶಿಕ ಪ್ರವೃತ್ತಿ ಮುಖ್ಯಕಾರಣವಾಗಿದ್ದು ಪರಿಸರ ಅಂಶಗಳು ಕಡಿಮೆ ಪಾತ್ರವಹಿಸುತ್ತವೆ.

ನ್ಯರೋಸಿಸದ ಪ್ರಮುಖ ಕಾಯಿಲೆಗಳಾದ ಹಿಸ್ಟಿರಿಯಾ, ಎಂಕ್ಸೈಟಿ, ಆಬಸೆಸನಲ್ ನ್ಯೂರೊಸಿಸ ಮತ್ತು ಡಿಪ್ರೆಸಿವ ರಿಎಕ್ಷನ್‌ಗಳಲ್ಲಿ ಅನುವಂಶಿಕತೆಯ ಕಡಿಮೆ ಪಾತ್ರವಿದೆ ಆದರೆ ಪರಿಸರ ಕಾರಣಗಳು ಮಹತ್ವದ್ದಾಗಿರುತ್ತವೆ. ಈ ಕಾಯಿಲೆಗಳಲ್ಲಿ ಮನೋರೋಗಿ ಹೊರ ಪ್ರಚೋದನಗಳಿಗೆ ತನ್ನ ವರ್ತನೆಯನ್ನು ಆಧೀನ ಮಾಡಿರುತ್ತಾನೆ.

ಪರಸನಾಲಿಟಿ ಡಿಸಾರ್ಡರ (ಸೈಕೊಪ್ಯಾಥ ಮತ್ತು ಸೋಸಿಯೋ ಪ್ಯಾಥ)ಗಳಲ್ಲಿ ಮನುಷ್ಯ ವಿವಿಧ ಪಾತ್ರದೋಶಗಳಿಂದ ಪೀಡಿತನಾಗಿರುತ್ತಾನೆ. ಇಂಥವರಲ್ಲಿ ಕೆಲವರು ಗುಣದಿಂದ ಬಹಳ ದುರ್ಬಲರಾಗಿರುತ್ತಾರೆ. ಇವರು ಕುಟುಂಬ ಮತ್ತು ಸಮಾಜದ ಮೇಲೆ ಭಾರವಾಗಿರುತ್ತಾರೆ. ಇನ್ನು ಕೆಲವರು ವಿಪರೀತ ಆಕ್ರಮಣಕಾರಿಗಳಾಗಿರುತ್ತಾರೆ. ಇಂಥವರು ತಮ್ಮ ಕುಟುಂಬ ಮತ್ತು ಸಮಾಜದಲ್ಲಿ ಅಂತ್ಯವಿಲ್ಲದ ವಿನಾಶಕ್ಕೆ ಕಾರಣವಾಗುತ್ತಾರೆ.

ನಮ್ಮ ದೈನಂದಿನ ಜೀವನದ ಮಾನಸಿಕ ಘಟನೆಗಳಾದ ಮನಸ್ಥಿತಿಗಳು, ಆಲೋಚನೆಗಳು, ಭಾವನೆಗಳು, ಗ್ರಹಿಕೆ ಮತ್ತು ನಡುವಳಿಕೆಗಳು ಮೆದುಳಿನ ಕಾರ್ಯವಿಧಾನದಲ್ಲಿ ಏನಾಗುತ್ತದೆ ಎಂಬುದು ನಿರ್ಧರಿಸುತ್ತವೆ.

ಮೆದುಳಿನ ಕಾರ್ಯವಿಧಾನದಲ್ಲಿ ಆಗುವ ಏರುಪೇರು ಅದರಲ್ಲಿ ಎರಡು ಪ್ರಕಾರದ ಬದಲಾವಣೆಗಳು ಹುಟ್ಟಿಸುತ್ತವೆ. ಮೊದಲನೆಯದು ಮೆದುಳಿನ ಕೋಶಗಳಲ್ಲಾಗುವ ರಚನಾತ್ಮಕ ಬದಲಾವಣೆ, ಎರಡನೆಯದು ಮೆದುಳಿನ ಕೋಶಗಳಲ್ಲಾಗುವ ರಸಾಯನಿಕ ಬದಲಾವಣೆಗಳು. ಕೆಲವು ವಿಕಾರಗಳಲ್ಲಿ ಇವೆರಡು ಕಂಡು ಬರುವದಿಲ್ಲ. ಇಂಥವರಲ್ಲಿ ಮಾನಸಿಕ ಕಾರಣವಿರುತ್ತವೆ.

ಇಷ್ಟಲಿಂಗ ಪೂಜಾಯೋಗ ಮೆದುಳಿನ ಕೋಶಗಳನ್ನು ಆರೋಗ್ಯಕರವಾಗಿ ಇಡುತ್ತದೆ ಮತ್ತು ಅವುಗಳಲ್ಲಾಗುವ ರಸಾಯನಿಕ ಬದಲಾವಣೆಗಳನ್ನು ಕಡಿಮೆ ಮಾಡುತ್ತದೆ. ಮನೋ ವಿಕಾರಗಳಲ್ಲಿ ಇಷ್ಟಲಿಂಗ ಪೂಜಾ ಯೋಗವನ್ನು ವೈದ್ಯಕೀಯ ಚಿಕಿತ್ಸೆಯ ಒಂದು ಭಾಗವಾಗಿ, ಚಿಕಿತ್ಸಾ ಸಹಾಯಕ ಪ್ರಕಾರವಾಗಿ ಉಪಯೋಗಿಸಬಹುದು.

ನಿಸ್ಸಂದೇಹವಾಗಿ ಆದಿಪ್ರಮಥ ಶ್ರೀ ಬಸವ ಗುರುವಿನಿಂದಲೆ ಪ್ರತಿಷ್ಠಿತವಾದ ಲಿಂಗವಂತ ಧರ್ಮಕ್ಕೆ ಬಸವಣ್ಣ ಹಾಗು ಬಸವನಿಷ್ಠ ಶರಣರಿಂದ ಕರುಣಿಸಲ್ಪಟ್ಟ ಅನುಭಾವ ವಚನಗಳೆ ಪ್ರಮಾಣಗ್ರಂಥಗಳೆನಿಸಿದ ಮೂಲ ವಾಙ್ಮಯವಾಗಿದೆ. ಶ್ರೀ ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಮಹಾದೇವಿ ಅಕ್ಕ ಈ ಮಹಾನುಭಾವಿ ಶರಣರು ಲೋಕ ಕಲ್ಯಾಣಾರ್ಥವಾಗಿ ಬೋಧಿಸಿದ ವಿಪುಲ ವಚನಗಳನ್ನು ಸುಮಾರು ೮೫೦ ವರ್ಷಗಳಿಂದ ಪ್ರಾಚೀನ ವೇದಾಗಮ ಪರಂಪರೆಯ ಆಚಾರ್ಯರು ಸ್ಥಲಕಟ್ಟಿನಲ್ಲಿ ಸಂಕಲಿಸಿದ್ದಾರೆ. ಶ್ರೀ ಬಸವಣ್ಣನವರ ವಚನಗಳ ಷಟಸ್ಥಲ ಕಟ್ಟು ಎಲ್ಲರಲ್ಲಿ ಮಾನ್ಯತೆ ಪಡೆದಿದೆ. ವಚನಗಳೆಂದರೆ ಬಸವ ಷಟಸ್ಥಲ ವಚನಗಳೆ ಎನ್ನುವಷ್ಟರ ಮಟ್ಟಿಗೆ ಮಾನ್ಯತೆ ಮತ್ತು ಖ್ಯಾತಿ ಹೊಂದಿವೆ.

ವಿಜಯನಗರದ ಪ್ರಾಚೀನ ಪೂಜ್ಯರು, ಕನ್ನಡದ ರಸಋಷಿ ತತ್ವಜ್ಞಾನಿಗಳಾದ ಕಲ್ಲುಮಠದ ಪ್ರಭುದೇವರು ತಮ್ಮ 'ಲಿಂಗಲೀಲಾವಿಲಾಸ ಚಾರಿತ್ರ್ಯವೆಂಬ' ವಚನ ಸಂಪಾದನೆಯ ಮಹಾಕೃತಿಯಲ್ಲಿ ಲಿಂಗವಂತ ಧರ್ಮಕ್ಕೆ ಶ್ರೀ ಬಸವಾದಿ ಪ್ರಮಥರು, ಬಸವ ಪರಂಪರೆಯ ಶಿವಶರಣ ಮಹಾನುಭಾವಿಗಳು ಕರುಣಿಸಿರುವ ಕನ್ನಡ ವಚನಗಳೆ ಏಕೈಕ ಪ್ರಮಾಣ ಗ್ರಂಥವೆಂದು ನಮೂದಿಸಿದ್ದಾರೆ.

"ನಿಮ್ಮ ನೋಟವನಂತ ಸುಖ ಕೂಟ ಪರಮಸುಖ
ಅಷ್ಟಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನು
ಕೂಡಲ ಸಂಗಮದೇವಾ ನಿಮ್ಮ ನೋಡಿ
ಮನದಲ್ಲಿ ರತಿಹುಟ್ಟಿ ನಿಮರ್ದವೆನ್ನ ಕಳೆಗಳು"
(ಸ.ವ.ಸಂ.೧ ಬಸವಣ್ಣ ವ-೪೯೧)



ಈ ವಚನದಲ್ಲಿ ಶ್ರೀ ಬಸವ ಸಿದ್ಧಿ ಇಷ್ಟಲಿಂಗೋಪಾಸನೆಯ ವಿಧಾನ, ಸತ್ವ ಸಿದ್ಧಿಯನ್ನು ಬಸವಣ್ಣನವರು ನಮಗೆ ಸ್ಪಷ್ಟವಾಗಿ ತಿಳಿಸುತ್ತಾರೆ.

"ಸಕಲ ವಿಸ್ತಾರದ ರುಹು" ಮಹಾ ಘನಲಿಂಗ ಪರಮಾತ್ಮನನ್ನು ತನ್ನ ಎರಡು ನೇತ್ರ ಸಹಿತ ತನ್ನಲ್ಲಿಯ ಎಂಟುಕೋಟಿ ರೋಮಗಳನ್ನು ಕಂಗಳಾಗಿಸಿ ಕರಸ್ಥಲಕ್ಕೆ 'ಚುಳುಕಾಗಿ"[೬] ಬಂದ ಇಷ್ಟಲಿಂಗವನ್ನು ಕಂಡು ಪರಮ ಸುಖವು ಪಡೆದು ಮನದಲ್ಲಿ ಇಹಲೋಕಕ್ಕಾಗಿ ಪ್ರೀತಿ ಹೊಂದಿ ಪರಮಾತ್ಮನಾಗಿ ಬಾಳುವಂತೆ ಮಾಡುವದು ಈ ಉಪಾಸನೆ.

ಲೌಕಿಕ ಪ್ರಜ್ಞೆ, ನಿರ್ಲಿಪ್ತ ಪ್ರಜ್ಞೆಗ್ಗಳನ್ನು ಸಮರಸ ಪ್ರಜ್ಞೆಯಾಗಿಸುವ ಸಾಧನ ಇದಾಗಿದೆ. ಅಂತಿಮವಾಗಿ ಉಪಾಸಕನ ಅರಿಯುವ ಬಯಕೆ ಮರೆಯಾಗಿ ತಾನೆ ಅರಿವಿನ ಸ್ವರೂಪವಾಗಿ ಮಹದರಿವಾಗಿ ಪರಿಣಮಿಸುತ್ತಾನೆ.

ಸಾಧಕಸಾಧ್ಯ ಎರಡೆಂಬ ಭಾವವಳಿದು ಏಕಾಖಂಡ ಪರಿಪೂರ್ಣ ಸ್ವರೂಪನಾಗುತ್ತಾನೆ.

ಮಹಾವಿಂದ್ಯ ಪರ್ವತದಲ್ಲಿ ಜ್ಯೋತಿರ್ಮಯವೆಂಬ
ಪ್ರಜ್ವಲ ಸ್ಫಟಿಕ ಘಟದಲ್ಲಿ
ಒಪ್ಪಿ ತೋರುವ ಜ್ಯೋತಿರ್ಮಯ ಲಿಂಗವೇ ನೀನು
ಸೂಕ್ಷ್ಮವೇ ನೀನು
ಉರುತರ ಸಕಲ ಬ್ರಹ್ಮಾಂಡಗಳೆಲ್ಲ ನಿನ್ನ
ರೋಮಕೂಪದ ಕೊನೆಯ ಮೊನೆಯ ಮೇಲೆ
ಸಕಲ ವ್ಯಾಪಿಯಡಗಿಪ್ಪಂಥ ಬ್ರಹ್ಮಾಂಡಗಳನ್ನು ಧರಿಸಿಪ್ಪ ನಿನ್ನ
ಅನಂತ ವೇದಂಗಳೆಲ್ಲವು ನಿನ್ನೊಳಗೆ
ನೀನು ಸರ್ವವ್ಯಾಪ್ತಿಗೆ ಒಳಗಾದುದಿಲ್ಲ
ನಿನ್ನ ಮೀರಿದ ಅಧಿಕ್ಯ ಒಂದೂ ಇಲ್ಲ
ಘನತರ ಲಿಂಗವೆ ಗುರುಕರುಣದಿಂದ
ಎನ್ನ ಕರಸ್ಥಲಕ್ಕೆ ಬಂದು ಸೂಕ್ಷ್ಮವಾದೆಯಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನ
(ಸ.ವ.ಸಂ.-೪ ಸಿದ್ಧರಾಮೇಶ್ವರ ವ-೮೯೧)

ಶಿವಯೋಗಿ ಸಿದ್ಧರಾಮರು ಶ್ರೀ ಬಸವ ಕೃಪೆಯಿಂದ ಕರಸ್ಥಲಕ್ಕೆ ಬಂದ ಘನತರಲಿಂಗ ಪರಮಾತ್ಮನ ಇಷ್ಟಲಿಂಗ ಸ್ವರೂಪ ವರ್ಣಿಸಿದ್ದಾರೆ. ಇಷ್ಟಲಿಂಗೋಪಾಸನೆಯ ಮಹತಿ ಏನಿದೆ ಎಂದರೆ ಸರ್ವವ್ಯಾಪ್ತ, ಸಕಲ ವಿಸ್ತಾರ, ಅಪ್ರತಿಮ, ನಿರವಯಲು ಸಕಲ ವೇದ್ಯ ಸಕಲ ಕ್ರಿಯಾ ಕರುಣ ಅನಂತ ಸ್ವರೂಪಿ, ಅಸಾಧ್ಯ ಮಹಾಘನಲಿಂಗ ಪರಮಾತ್ಮನ ಸ್ವರೂಪ ಸೂಕ್ಷ್ಮವಾಗಿ ಇಷ್ಟಲಿಂಗದ ರೂಪದಲ್ಲಿ ಸಾಕ್ಷಾತ್ಕಾರಗೊಳಿಸಿಕೊಂಡು ಅವನಲ್ಲಿ ಒಂದಾಗಿ ತನ್ನ ಮತ್ತು ಲೋಕದ ಸುಖಕ್ಕಾಗಿ ಕಾಯಕ ಮಾಡುವದಾಗಿದೆ.






ಕಾಣದುದನರಸುವರಲ್ಲದೆ ಕಂಡದುನರಸುವರೆ ಹೇಳಾ?
ಘನಕ್ಕೆ ಘನವಾದ ವಸ್ತು
ತಾನೆ ಗುರುವಾದ ತಾನೆ ಲಿಂಗವಾದ
ತಾನೆ ಜಂಗಮವಾದ ತಾನೆ ಪ್ರಸಾದವಾದ
ತಾನೆ ಮಂತ್ರವಾದ ತಾನೆ ಯಂತ್ರವಾದ
ತಾನೆ ಸಕಲ ವಿದ್ಯಾಸ್ವರೂಪನಾದ
ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದ
ಇನ್ನೂ ನಿರ್ವಿಕಾರ ಗುಹೇಶ್ವರ

(ಸ.ವ.ಸಂ.–೨, ಅಲ್ಲಮಪ್ರಭುದೇವರು ವ–೫೫)

ನಿರಾಕಾರ ಮಹಾಘನಲಿಂಗ ಪರಮಾತ್ಮನು ತಾನೆ ಗುರು ಲಿಂಗ ಜಂಗಮ ಪ್ರಸಾದ, ಮಂತ್ರವಾಗಿ ಸಕಲ ವಿದ್ಯಾಸ್ವರೂಪನಾಗಿ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬಂದು ಸಕಲವಾಹಕನಾಗಿದುದಕ್ಕಾಗಿ ಅವನು ಮನುಷ್ಯನಿಂದ ಭಿನ್ನವಾಗಿಲ್ಲ.

ವಟ ಬೀಜ ವಟವೃಕ್ಷ ಕೋಟಿಯ ನುಂಗಿಪ್ಪಂತೆ
ಸಟಿಯಿಂದಾದ ಅಜಾಂಡ ಬ್ರಹ್ಮಾಂಡ ಕೋಟಿಗಳ ನುಂಗಿಪ್ಪ ಲಿಂಗವೇ
ದಿಟಪುಟವಾಗಿ ಎನ್ನ ಕಣ್ಣು ಮನ ಕರಸ್ಥಲಕ್ಕೆ ಬಂದು ಪ್ರಕಾಶವಾದೆ
ಮಝು ಭಾಪು ಮಝು ಭಾಪು ಲಿಂಗವೇ
'ನ ಚರೇಣುರ್ನ ಚಾಕ್ಷುಷಂ ಎಂದೆನಿಸುವ ಲಿಂಗವೇ
ನಿಮ್ಮ ಮುಟ್ಟಿ ಉತ್ಪತ್ತಿ ಸ್ಥಿತಿಲಯಕ್ಕೆ ಹೊರಗಾದೆನು
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ

(ಸಂಕೀರ್ಣ ವ.ಸಂ–೧, ಉರಿಲಿಂಗಪೆದ್ದಿ–೧೫೩೪)

ಅಂತರಂಗದಲ್ಲಿಯ ಬೀಜರೂಪಿ ಮಹಾಘನಲಿಂಗ ಪರಮಾತ್ಮನೆ ಅನಂತಕೋಟಿ ಬ್ರಹ್ಮಾಂಡಗಳನ್ನು ಆವರಿಸಿದ್ದು ಮನುಷ್ಯರ ಕಣ್ಣು ಮನ ಮತ್ತು ಕರಸ್ಥಲಕ್ಕೆ ಬಂದು ಇಷ್ಟಲಿಂಗವಾಗಿ ಪ್ರಕಟವಾಗುತ್ತಾನೆ. ಉಪ ಪರಮಾಣು ಕಣದಕಿಂತಲು ಸೂಕ್ಷ್ಮ, ನೋಟಕ್ಕೆ ಕಾಣದ ಅದೃಶ್ಯ ಲಿಂಗವ ಮುಟ್ಟಿ ಅಖಂಡಿತ, ಅನಂತ ನಿತ್ಯ ಪರಿಪೂರ್ಣ ಸ್ವರೂಪಿಯಾದೆನು. ಅರ್ಥಾತ ಪರಮಾತ್ಮ ಪ್ರತಿಯೊಬ್ಬ ಮನುಷ್ಯನಂಗದಲ್ಲಿಯೇ ತನ್ನ ಬೀಜಸ್ವರೂಪದಲ್ಲಿ ವಾಸವಾಗಿದ್ದಾನೆ.

ಇದೆ ಅರಿವಿನ ಬೆಳಕಿನಲ್ಲಿ ಶರಣ ಉರಿಲಿಂಗ ಪೆದ್ದಿಯವರು ಸತ್ಯ ದರ್ಶನದ ಸಾಕ್ಷಾತ್ಕಾರ ಸಾಧಿಸುವ ವಿಧಾನವನ್ನು ತಿಳಿಸುತ್ತಾರೆ.

ಅಂತರಂಗದಲ್ಲಿ ಆವರಿಸಿ ಬಹಿರಂಗದಲ್ಲಿ ತೋರುವೆ
ಕಂಗಳ ಕೊನೆಯಲ್ಲಿ ಮೂರುತಿಯಾಗಿ ಮನದ ಕೊನೆಯಲ್ಲಿ ತೋರುವೆ
ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಪರಂಜ್ಯೋತಿ
ಉರಿಲಿಂಗದೇವ ನೀನಯ್ಯಾ
(ಸಂಕೀರ್ಣ ವ.ಸಂ–೧, ಉರಿಲಿಂಗಪೆದ್ದಿ–೧೨೧೮)

ಬಹಿರಂಗದಲ್ಲಿ ಕಂಗಳ ಕೊನೆಯಲ್ಲಿ ಮೂರುತಿಯಾದ ಇಷ್ಟಲಿಂಗವ ನೋಡುತ್ತ ಮನದ ಕೊನೆಯ ಮೇಲೆ ಅದನ್ನು ಕಂಡಾಗ ತನ್ನ ಬ್ರಹ್ಮರಂಧ್ರದಲ್ಲಿ ತೋರುವ ಶತಕೋಟಿ ಸೂರ್ಯಸಮನಾದ ಪರಂಜ್ಯೋತಿಯೇ ಘನಲಿಂಗ ಪರಮಾತ್ಮನ ಸಾಕ್ಷಾತ ಸ್ವರೂಪವಾಗಿದ್ದು ಇದುವೆ ಪರಮ ಸತ್ಯದ ದರ್ಶನ ಹೊಂದುವ ಪರಿಯಾಗಿದೆ.

....... ನಿರಾಕಾರವಪ್ಪ ಪರಬೊಮ್ಮವೆ
ತಿಳಿದುಪ್ಪ ಬಿಳಿದುಪ್ಪವಾದಂತೆ ಸಾಕಾರವಾಗಿ ನಿನ್ನ
ಕರಕಮಲಕ್ಕೆ ಬಂದಿರ್ಪುದು
(ಸ.ವ.ಸ.–೩ ಚೆನ್ನಬಸವಣ್ಣ ವ–೮೯೦)

ಎಂದು ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು ತಿಳಿಸುತ್ತಾರೆ.

ಮನುಷ್ಯರು ಲೌಕಿಕ, ಅಲೌಕಿಕ, ಸಮರಸ ಪ್ರಜ್ಞೆಯ ಪರಿಪೂರ್ಣ ಅನುಭಾವ ಪಡೆದು ಸಂಗದಿಂದ ನಿಸ್ಸಂಗವಾಗಿ ಮಹಾ ಘನಲಿಂಗನ ಅರಿವಿನಲ್ಲಿ ಅರಿವಾಗಲು ಒಂದು ಸೂತ್ರದ ಪರಿಪಾಲನೆ ಮಾಡುವ ಅನಿವಾರ್ಯತೆಯನ್ನು ಚನ್ನಬಸವಣ್ಣನವರು ನಮೂದಿಸುತ್ತಾರೆ.

ಆಕಾಶದಲ್ಲಾಡುವ ಪಟಕ್ಕಾದಡೆಯು ಮೂಲಸೂತ್ರವಿರಬೇಕು
ಕಲಿಯಾದಡೆಯು ಕಜ್ಜವಿಲ್ಲದೆ ಆಗದು
ಭೂಮಿಯಿಲ್ಲದೆ ಬಂಡಿ ನಡೆವುದೆ?
ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಬಾರದು



ಕೂಡಲ ಚನ್ನಸಂಗಮದೇವರಲ್ಲಿ
ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯಬಹುದೆ ಪ್ರಭುವೆ
(ಸ.ವ.ಸಂ.–೩ ಚೆನ್ನಬಸವಣ್ಣ ವ.೯೬೩)

ಅಂಗದ ಮೇಲೆ ಇಷ್ಟಲಿಂಗ ಧರಿಸುವದು ನಿಸ್ಸಂಗವಾಗಿ ಪರಿಪೂರ್ಣತೆ ಹೊಂದಲು ಅನಿವಾರ್ಯವಾಗಿ ಪಾಲಿಸುವ ಸೂತ್ರವಾಗಿದೆ. ಭೇದರಹಿತವಾಗಿ ಎಲ್ಲ ಮನುಜರು ಅಂಗದ ಮೇಲೆ ಲಿಂಗ ಧರಿಸಬೇಕೆಂದು ಸಾರುತ್ತಾರೆ. ಶರಣರ ದರ್ಶನದಲ್ಲಿ, ಪರಮಸಾಕ್ಷಾತ್ಕಾರದ ಸಿದ್ಧಿ ಪರಾಪುರಸ್ಕೃತ ಭಕ್ತಿಭಾವದಲ್ಲಿ ಮಿಂದ ವ್ಯಕ್ತಿಯ ಮೇಲೆ ಆಕಸ್ಮಿಕವಾಗಿ ಸುರಿಯುವ ಕರುಣೆಯಾಗಿರದೆ, ಸ್ವಬಲದಿಂದ ಸೂತ್ರವಿಡಿದು ಸತತ ಸಾಧನೆ ಮಾಡಿ ಸಾಧಿಸಿದ ಸಕಲ ಸಿದ್ಧಿಗಳನ್ನು ಮೀರಿಸುವ ಏಕೈಕ ಪರಿಪೂರ್ಣ ಶ್ರಮಫಲವಾಗಿದೆ.

ಪರಮ ಸತ್ಯದ ಸಾಕ್ಷಾತ್ಕಾರ ಪ್ರತಿಯೊಬ್ಬ ಪರಿಶ್ರಮ ಮಾಡುವ ಮಾನವನ ಸೃಷ್ಟಿದತ್ತ ಹಕ್ಕಾಗಿದೆ.

ಚಿಂತನಶೀಲ ಮನುಜನು ಎದುರಿಸುವ ಮೂಲಭೂತ ಪ್ರಶ್ನೆಗಳಲ್ಲಿ ಪ್ರಮುಖವಾದವು ನಾನ್ಯಾರು? ಪರಮಾತ್ಮನ್ಯಾರು? ಅವನೆಲ್ಲಿರುತ್ತಾನೆ. ಶರಣರ ಮಹಾನುಭವದಲ್ಲಿ ಪರಮಾತ್ಮನು ಹೆಣ್ಣು ಗಂಡೆಂಬ ಮನುಷ್ಯಾಕೃತಿಯಲ್ಲಿ ಕಾಣದೆ ಸಕಲ ಸ್ವರೂಪನಿರೂಪಗಳಲ್ಲಿ ಸಕಲ ಸೃಜನ, ಸಂರಕ್ಷಣ ಕ್ರಿಯಾ, ಪ್ರಾಣ, ಮನ ಶಕ್ತಿಯ ಮೂಲದಲ್ಲಿದ್ದ ನಿತ್ಯನಿರಂಜನ ಪರಂಜ್ಯೋತಿ ವಸ್ತು ರೂಪದಲ್ಲಿ ವಾಸಿಸುತ್ತಿದ್ದು ಕಂಡುಬಂದಿದೆ.

ನಿತ್ಯ ನಿರಂಜನ ಪರಂಜ್ಯೋತಿವಸ್ತು
ಉಪದೇಶವ ಕೊಟ್ಟು ಗುರುವಾದ
ಕರಸ್ಥಲಕ್ಕೆ ಬಂದು ಲಿಂಗವಾದ
(ಸ.ವ.ಸಂ.–೧ ಬಸವಣ್ಣ ವ–೧೨೪೭)

ಎಂದು ಶ್ರೀ ಬಸವಣ್ಣನವರು ಪರಮಾತ್ಮನನ್ನು ವರ್ಣಿಸುತ್ತಾರೆ. ಅಸ್ತಿತ್ವದ ಜ್ಞಾನ ಮನುಷ್ಯರಿಗೆ ಆ ಅಸ್ತಿತ್ವದ ಆಕಾರ, ಗಾತ್ರ, ಉದ್ದ, ಅಗಲದ ಜೊತೆ ಸ್ಥಳ ಮತ್ತು ಸಮಯಗಳೆಂಬ ಅದರ ವಿವಿಧ ಆಯಾಮಗಳ ಜ್ಞಾನವಾಗದೆ ಪೂರ್ಣವಾಗುವದಿಲ್ಲ ಅದಕ್ಕಾಗಿ ಶರಣರು ಪರಮಾತ್ಮ ವಸ್ತುವಿನ ಅನುಭವ

ದೊರಕಿಸುವದಕ್ಕಾಗಿ ಅದರ ವಾಸಿಸುವ ಸ್ಥಳವನ್ನು ಮನುಷ್ಯರಿಗೆ ತೋರಿಸಿ ಕೊಟ್ಟಿದ್ದಾರೆ.

ಅಡವಿಯೊಳಗರಸುವಡೆ ಸಿಡಿಗಂಟಿ ತಾನಲ್ಲ
ಮಡವಿಯೊಳಗರಸುವಡೆ ಮತ್ಸ್ಯ ಮಂಡುಕನಲ್ಲ
ತಪಂಬಡುವಡೆ ವೇಷಕ್ಕೆ ವೇಳೆಯಲ್ಲ
ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ
ಅಷ್ಟ ತನುವಿನೊಳಗೆ ಹುದುಗಿದ್ದ ಲಿಂಗವ
ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ
(ಸಂಕೀರ್ಣ ವ.ಸಂ.–೧, ಅಂಬಿಗರ ಚೌಡಯ್ಯ–೨೬)

ಅಷ್ಟತನುವೆಂದರೆ ಎಂಟು ತತ್ವಗಳಿಂದ ಆದ ಶರೀರ. ಪಂಚ ಮಹಾಭೂತಗಳು, ಸೂರ್ಯ ಚಂದ್ರ ಮತ್ತು ಆತ್ಮಗಳಿಂದಾದ ಶರೀರ ಇದು ಆಧ್ಯಾತ್ಮಿಕ ಸತ್ಯ ಅದರಷ್ಟೇ ವೈಜ್ಞಾನಿಕ ಸತ್ಯವೂ ಆಗಿದೆ. ಆಧುನಿಕ ಮಾನವ ಶರೀರ ರಚನಾ ಶಾಸ್ತ್ರದನುಸಾರ ಮಾನವ ದೇಹದ ಪ್ರಮುಖ ಅಂಗಾಂಶಗಳು **(tissue)** ನಾಲ್ಕಿವೆ. ಆದರೆ ಇವುಗಳ ಉಪಂಗಾಂಶಗಳು ಗುಣಿಸಿದರೆ ಎಂಟಾಗುತ್ತವೆ. ಶರಣ ಅಂಬಿಗರ ಚೌಡಯ್ಯನವರು ವೈಜ್ಞಾನಿಕ ಸತ್ಯದ ಆಧಾರವನ್ನು ಗುರುತಿಸಿ ಇದೆ ಅಂಗದಲ್ಲಿ ಲಿಂಗ ಹುದುಗಿದೆ, ಅದರ ಸಾಕ್ಷಾತ ದರ್ಶನ ಪಡೆದು ತಾವು ನುಡಿಯುತ್ತಿದ್ದಾರೆಂದು ದೃಢವಾಗಿ ಹೇಳುತ್ತಾರೆ.

ಅಂತರಂಗದಲ್ಲಿ ವಾಸಿಸುವ ಪರಮಾತ್ಮನ ಸಕಲ ಕ್ರಿಯಾತ್ಮಕ ಶಕ್ತಿಯ ಶರೀರದಲ್ಲಿಯ ವಿನ್ಯಾಸವನ್ನು ಷಟಸ್ಥಲದಲ್ಲಿ ವರ್ಣಿಸಲಾಗಿದೆ. ಈ ಸಿದ್ಧಾಂತಕ್ಕೆ 'ಷಟಸ್ಥಲ ಸಿದ್ಧಾಂತ'ವೆನ್ನುತ್ತಾರೆ. ಇದಕ್ಕನುಸಾರ ಮನುಷ್ಯನನ್ನು ಇಂದ್ರಿಯಗಳಿಂದ ಗ್ರಹಿಸಬಹುದಾದ, ಬೌದ್ಧಿಕವಾಗಿ ಅರ್ಥಮಾಡಿಕೊಳ್ಳಬಹುದಾದ, ಭಾವದಿಂದ ಅನುಭವಿಸಬಹುದಾದ, ಕಾರಣದಿಂದ ವಿವರಿಸಬಹುದಾದ ಕ್ರಿಯೆಯಿಂದ ಭಿನ್ನವಾದ ಆರು ಸ್ಥಲಗಳಲ್ಲಿ ವಿಭಾಗಿಸಲಾಗಿದೆ.

ಜನನಾಂಗ, ಗುದ ಮತ್ತು ಕಾಲುಗಳು ಕೂಡಿ ಭಕ್ತಸ್ಥಲ
ಜಠರ, ಕರುಳು ಮತ್ತು ಹೊಟ್ಟೆಯಲ್ಲಿಯ
ಅಂಗಕೂಡಿ, ಮಾಹೇಶ್ವರ ಸ್ಥಲ



ಉರದಲ್ಲಿಯ ಹೃದಯ ಮತ್ತಿತರ
ಅವಯವಗಳು ಕೂಡಿ ಪ್ರಸಾದಿಸ್ಥಲ
ಫುಪ್ಪುಸ ಕಂಠ ಎರಡು ಕೂಡಿ ಪ್ರಾಣಲಿಂಗಿ
ಮುಖ, ಸ್ರೋತ್ರ ನೇತ್ರ, ನಾಸಿಕ ಕೂಡಿ ಶರಣಸ್ಥಲ
ಸಿರ, ಮೆದುಳು, ಅದರ ಭಾಗಗಳು ಕೂಡಿ ಐಕ್ಯಸ್ಥಲ.

ಈ ಆರು ಸ್ಥಲಗಳೆಂದರೆ ಆರು ಶಕ್ತಿಯ ಕೇಂದ್ರಗಳೆಂದೆ ತಿಳಿಯಬಹುದು. ಈ ೬ ಸ್ಥಳಗಳನ್ನು ಅಲ್ಲಿಯ ಕ್ರಿಯಾ ಸಂಚಾಲನದ ದೃಷ್ಟಿಯಿಂದ ಅಂಗಸ್ಥಲ ಮತ್ತು ಲಿಂಗಸ್ಥಲಗಳೆಂದು ಎರಡು ಪ್ರಕಾರದ ಸ್ಥಲಗಳೆಂದು ಗುರುತಿಸಲಾಗಿದೆ. ಅಂಗಸ್ಥಲಗಳೆಂದರೆ ಭೌತಿಕ ಕ್ರಿಯಾನ್ವಯನದ ಕೇಂದ್ರಗಳು. ಲಿಂಗಸ್ಥಲಗಳೆಂದರೆ ಭೌತಿಕ ಕ್ರಿಯಾನ್ವಯ ಕೇಂದ್ರಗಳಿಗೆ ಸಂಚಲನದ ಭಾವನೆ ಮತ್ತು ಜ್ಞಾನದ ಪ್ರಚೋದನೆ ಒದಗಿಸುವ ಮಾನಸಿಕ ಕೇಂದ್ರವಾಗಿರುತ್ತದೆ.

ಈ ಆರೂ ಪ್ರಮುಖ ಸ್ಥಲಗಳ ಕೇಂದ್ರ ಸ್ಥಾನದಲ್ಲಿ ಆರು ಪ್ರಮುಖ ಲಿಂಗಗಳ ಆಧಿಷ್ಠಾನವನ್ನು ಪ್ರಸ್ತಾಪಿಸಿಲಾಗಿದೆ. ಭಕ್ತಸ್ಥಲಕ್ಕೆ ಆಚಾರಲಿಂಗ, ಮಹೇಶ್ವರ ಸ್ಥಲಕ್ಕೆ ಗುರುಲಿಂಗ, ಪ್ರಸಾದಿ ಸ್ಥಲಕ್ಕೆ ಶಿವಲಿಂಗ, ಪ್ರಾಣಲಿಂಗಿ ಸ್ಥಲಕ್ಕೆ ಜಂಗಮಲಿಂಗ ಶರಣಸ್ಥಲಕ್ಕೆ ಪ್ರಸಾದಲಿಂಗ ಮತ್ತು ಐಕ್ಯಸ್ಥಲಕ್ಕೆ ಮಹಾಲಿಂಗ.

| ಸ್ಥಲ | ಲಿಂಗ | ದೈಹಿಕ ಸ್ಥಾನ |
|---|---|---|
| ಭಕ್ತ | ಆಚಾರಲಿಂಗ | ಆಧಾರ ಚಕ್ರ (ಗುದ) |
| ಮಹೇಶ | ಗುರುಲಿಂಗ | ಸ್ವಾಧಿಷ್ಠಾನ ಚಕ್ರ (ಶರೀರಲಿಂಗ) |
| ಪ್ರಸಾದಿ | ಶಿವಲಿಂಗ | ಮಣಿಪೂರಕ (ನಾಭಿ) |
| ಪ್ರಾಣಲಿಂಗಿ | ಜಂಗಮಲಿಂಗ | ಅನಾಹತ (ಹೃದಯ) |
| ಶರಣ | ಪ್ರಸಾದಲಿಂಗ | ವಿಶುದ್ಧಿ (ಕಂಠ) |
| ಐಕ್ಯ | ಮಹಾಲಿಂಗ | ಆಜ್ಞಾ (ಶಿರ) |

ಹೀಗೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಆರು ಕೇಂದ್ರಗಳು ಅಂಗಸ್ಥಲ ಮತ್ತು ಲಿಂಗಸ್ಥಲಗಳೆಂದು ಎರಡಾಗಿ ೧೨ ಸ್ಥಲವಾಗುತ್ತವೆ

ಅಂಗಸ್ಥಲಗಳು ಪಂಚಮಹಾಭೂತಗಳ ಪಂಚಿಕರಣದಿಂದ ಪಿಂಡದಲ್ಲಿ ಉದ್ಭವಿಸುತ್ತವೆ ಮತ್ತು ಲಿಂಗಸ್ಥಲಗಳು ಅಂಗಸ್ಥಲಗಳಲ್ಲಿ ಉದ್ಗಮಿಸಿದ ಮಹಾಘನಲಿಂಗ ಪರಮಾತ್ಮನ ಅಂತರಂಗದಲ್ಲಿಯ ನಿತ್ಯ ನಿರಂಜನ ಪರಂಜ್ಯೋತಿ ವಸ್ತುವೇ ಆಗಿರುತ್ತದೆ.

ಈ ೧೨ ಸ್ಥಲಗಳು ಮನುಷ್ಯನ ಸ್ಥೂಲ, ಸೂಕ್ಷ್ಮ ಮತ್ತು ಕಾರಣಿಕವೆಂಬ ಅಂಗತ್ರಯಂಗಳಿಗೆ ಲಗತಿಸಿದಾಗ ೧೨x೩=೩೬ ಸ್ಥಲಗಳಾಗುತ್ತವೆ.

ಶರಣರು ತಮ್ಮ ಇಷ್ಟಲಿಂಗೋಪಾಸನಾ ಸಾಧನೆಯಲ್ಲಿ ಪರಮೋನ್ನತಿ ಸಾಧಿಸುತ್ತಾ ಹೋದಂತೆ ಮೇಲೆ ವಿವರಿಸಿದ ಮಾನವ ದೇಹದ ಈ ಪ್ರಮುಖ ಆರು ಕೇಂದ್ರ ಮತ್ತು ಅವುಗಳಲ್ಲಿಯ ಉಪಸ್ಥಲಗಳ ದರ್ಶನವಾಗಿ ಮನುಷ್ಯ ಶರೀರದಲ್ಲಿ ಸ್ಪಷ್ಟವಾಗಿ ಶತ ಏಕಸ್ಥಲಗಳನ್ನು ೧೦೧ ಗುರುತಿಸುತ್ತಾರೆ.

ಇಷ್ಟಲಿಂಗ ಸಾಧಕರಿಗೆ ಮೆಲ್ಲ ಮೆಲ್ಲನೆ ಇವುಗಳ ದರ್ಶನ ಸುಖ ಮತ್ತು ಅವುಗಳಲ್ಲಿಯ ಪರಂಜ್ಯೋತಿ ಪ್ರಕಾಶದ ಜ್ಞಾನಾನುಭೂತಿಯಾಗುತ್ತಾ ಹೋಗಿ ಸಾಧನೆ ಪರಿಪೂರ್ಣವಾದಾಗ ಶರೀರದ ಎಲ್ಲ ಅಂಗಸ್ಥಲಗಳು ಮತ್ತು ಲಿಂಗಸ್ಥಲಗಳು ಉದ್ದೀಪನಗೊಂಡು ಮನುಷ್ಯರ ಬ್ರಹ್ಮರಂಧ್ರದಲ್ಲಿ ಮಹದರಿವಿನ ಮಹಾ ಪ್ರಕಾಶ ಮತ್ತು ಮನುಷ್ಯನ ಅಂತರಂಗದ ವ್ಯಕ್ತಿದರುವಿನ ಸಮರಸ ಸಂಗಮವಾಗಿ ಆತ ಪರಿಪೂರ್ಣ ಪ್ರಕಾಶಮಯವಾಗುತ್ತಾನೆ. ನಿಜ ಜಂಗಮನಾಗಿ ಜಗತ್ಬೆಳಗಿಸುತ್ತಾನೆ. ಇದಕ್ಕೆ ಬಸವಣ್ಣನವರು

“ಬಯಲು ರೂಪ ಮಾಡ ಬಲ್ಲಾತನೆ ಶರಣ”
(ಬಸವಣ್ಣ–೯೨೩)

ಎಂದಿದ್ದಾರೆ.

ಈ ನೂರೊಂದು ಸ್ಥಲಗಳ ನಿರ್ಣಯವನ್ನು ಷಣ್ಮುಖ ಸ್ವಾಮಿ ತಮ್ಮ ವಚನದಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾರೆ.

ಕೇಳಿ ಕೇಳಿರಯ್ಯಾ ಶಿವಭಕ್ತ ಶರಣಜನಂಗಳು ನೀವೆಲ್ಲ
ನೂರೊಂದು ಸ್ಥಲದ ನಿರ್ಣಯವನು ಆರು ಸ್ಥಲದಲ್ಲಡಗಿಸಿ
ಆರುಸ್ಥಲದ ನಿರ್ಣಯವನ್ನು ಮೂರು ಸ್ಥಲದಲ್ಲಡಗಿಸಿ



ಆ ಮೂರು ಸ್ಥಲ ಒಂದಾದ ಮೂಲ ಬ್ರಹ್ಮದಲ್ಲಿ
ಶರಣನ ಕುರುಹು ಅಡಗಿ ನಿರ್ಮಾಯವಾದ
ಭೇದಂ ಪೇಳ್ವೆ, ಅದೆಂತೆನಲು:
ಪಿಂಡಸ್ಥಲ, ಪಿಂಡಜ್ಞಾನ ಸ್ಥಲ, ಸಂಸಾರಹೇಯ ಸ್ಥಲ
ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ
ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಸ್ಥಲ
ಉಭಯಸ್ಥಲ, ತ್ರಿವಿಧ ಸಂಪತ್ತಿಸ್ಥಲ
ಚತುರ್ವಿಧ ಸಾರಾಯಸ್ಥಲ, ಉಪಾಧಿಮಾಟಸ್ಥಲ
ನಿರುಪಾಧಿ ಮಾಟಸ್ಥಲ ಸಹಜ ಮಾಟಸ್ಥಲ ಈ ೧೫ ಭಕ್ತಸ್ಥಲಗಳು
ದಿಕ್ಷಾಗುರು ಸ್ಥಲ, ಭಾವಲಿಂಗ ಸ್ಥಲ, ಜ್ಞಾನಲಿಂಗಸ್ಥಲ
ಸ್ವಯಂಸ್ಥಲ, ಚರಸ್ಥಲ, ಪರಸ್ಥಲ ಈ ಒಂಬತ್ತು
ಆಚಾರ ಲಿಂಗಸ್ಥಲಗಳು ಇಂತಿ ಉಭಯಕೂಡಿ
೨೪ ಸ್ಥಲಂಗಳಾಗಿ ಆಧಾರ ಚಕ್ರದಲ್ಲಿ ಸಂಬಂಧ
ಮಹೇಶ್ವರಸ್ಥಲ ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯ ನಿರಸನಸ್ಥಲ
ವಾಗ್ದ್ವೈವತ ನಿರಸನಸ್ಥಲ, ಅವ್ಹಾನ ನಿರಸನಸ್ಥಲ, ಅಷ್ಟತನು
ಮೂರ್ತಿ ನಿರಸನಸ್ಥಲ, ಸರ್ವಗತ ನಿರಸನಸ್ಥಲ, ಶಿವಜನನ್ಮಯಸ್ಥಲ
ಭಕ್ತಿದೇಹಿಸ್ಥಲ ಈ ಒಂಬತ್ತು ಮಹೇಶ್ವರ ಸ್ಥಲಂಗಳು,
ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮ ಸ್ಥಲ,
ಸಕಾಯಸ್ಥಲ, ಅಕಾಯಸ್ಥಲ, ಪಕಾರಸ್ಥಲ, ಧರ್ಮಾಚಾರಸ್ಥಲ,
ಜ್ಞಾನಾಚಾರಸ್ಥಲ ಈ ಒಂಬತ್ತು ಗುರುಲಿಂಗ ಸ್ಥಲ
ಇಂತೀ ಉಭಯ ಸ್ಥಲವು ಕೂಡಿ ೧೮ ಸ್ಥಲಂಗಳಾಗಿ
ಸ್ವಾಧಿಷ್ಠಾನ ಚಕ್ರದಲ್ಲಿ ಸಂಬಂಧವಾಗಿರ್ಪವು.
ಪ್ರಸಾದಿಸ್ಥಲ, ಗುರುಮಹಾತ್ಮೆಸ್ಥಲ, ಲಿಂಗಮಹಾತ್ಮೆಸ್ಥಲ,
ಜಂಗಮ ಮಹಾತ್ಮೆಸ್ಥಲ, ಭಕ್ತಮಹಾತ್ಮೆಸ್ಥಲ, ಶರಣಮಹಾತ್ಮೆಸ್ಥಲ,
ಪ್ರಸಾದ ಮಹಾತ್ಮೆಸ್ಥಲ ಈ ಏಳು ಪ್ರಸಾದಿಸ್ಥಲಂಗಳು
ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ,
ಕಾಯಾರ್ಪಿತ ಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ,
ಶಿಷ್ಯಸ್ಥಲ, ಶುಶ್ರೂಷಾಸ್ಥಲ, ಸೀವ್ಯಸ್ಥಲ,

ಈ ಒಂಬತ್ತು ಶಿವಲಿಂಗಸ್ಥಲ, ಇಂತೀ ಉಭಯಸ್ಥಲವು ಕೂಡಿ
೧೬ ಸ್ಥಲಂಗಳಾಗಿ ಮಣಿಪೂರಕ ಚಕ್ರದಲ್ಲಿ ಸಂಬಂಧವಾಗಿರ್ಪುವು.
ಪ್ರಾಣಲಿಂಗಸ್ಥಲ, ಪ್ರಾಣಲಿಂಗಾರ್ಚನಾಸ್ಥಲ,
ಶಿವಯೋಗ ಸಮಾಧಿಸ್ಥಲ,
ಲಿಂಗನಿಜಸ್ಥಲ, ಅಂಗಲಿಂಗಸ್ಥಲ, ಈ ಐದು ಪ್ರಾಣಲಿಂಗಸ್ಥಲ
ಜೀವಾತ್ಮಸ್ಥಲ, ಅಂತರಾತ್ಮಸ್ಥಲ ಪರಮಾತ್ಮಸ್ಥಲ,
ನಿರ್ದೇಹಗಾಮಸ್ಥಲ, ನಿರ್ಭಾವಾಗಮ, ನಷ್ಟಾಗಮಸ್ಥಲ,
ಆದಿ ಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯಪ್ರಸಾದಿಸ್ಥಲ,
ದಿಕ್ಷಾಪಾದೋದಕಸ್ಥಲ, ಶಿಕ್ಷಾ ಪಾದೋದಕಸ್ಥಲ,
ಜ್ಞಾನ ಪಾದೋದಕಸ್ಥಲ, ೧೨ ಜಂಗಮ ಲಿಂಗಸ್ಥಲಗಳು
ಇಂತೀ ಉಭಯಸ್ಥಲವು ಕೂಡಿ ೧೭ ಸ್ಥಲಂಗಳಾಗಿ
ಅನಾಹತ ಚಕ್ರದಲ್ಲಿ ಸಂಬಂಧವಾಗಿರ್ಪವು.
ಶರಣಸ್ಥಲ, ತಾಮಸ ನಿರಸನಸ್ಥಲ, ನಿರ್ದೇಶಸ್ಥಲ,
ಶೀಲಸಂಪಾದನಾಸ್ಥಲ, ಈ ನಾಲ್ಕು ಶರಣಸ್ಥಲಂಗಳು,
ಕ್ರಿಯಾನಿಷ್ಪತ್ತಿ ಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ,
ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಿತಿ, ಮಹದಾಕಾಶಸ್ಥಲ,
ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲ
ಈ ಒಂಬತ್ತು ಪ್ರಸಾದಲಿಂಗಸ್ಥಲಗಳು
ಇಂತೀ ಉಭಯಸ್ಥಲವು ಕೂಡಿ ೧೩ ಸ್ಥಲಂಗಳಾಗಿ,
ವಿಶುದ್ಧಿ ಚಕ್ರದಲ್ಲಿ ಸಂಬಂಧವಾಗಿರ್ಪುವು
ಐಕ್ಯಸ್ಥಲ, ಸರ್ವಾಚಾರಸಂಪತ್ತಿಸ್ಥಲ, ಏಕಭಾಜನಸ್ಥಲ,
ಸಹಭೋಜನಸ್ಥಲ ಈ ನಾಲ್ಕು ಐಕ್ಯಸ್ಥಲಂಗಳು
ಕೊಂಡುದು ಪ್ರಸಾದಿಸ್ಥಲ ನಿಂದುದೋಗರಸ್ಥಲ.
ಚರಾಚರನಾಸ್ತಿಸ್ಥಲ, ಭಾಂಡಸ್ಥಲ, ಭಾಜನಸ್ಥಲ,
ಅಂಗಲೇಪನಸ್ಥಲ ಸ್ವಯಪರ ಜ್ಞಾನಸ್ಥಲ,
ಭಾವಾಭಾವನಷ್ಟಸ್ಥಲ, ಜ್ಞಾನಶೂನ್ಯಸ್ಥಲ
ಒಂಬತ್ತು ಮಹಾಲಿಂಗಸ್ಥಲಂಗಳು
ಇಂತಿ ಉಭಯಸ್ಥಲವು ಕೂಡಿ ೧೩ ಸ್ಥಲಂಗಳಾಗಿ



ಆಜ್ಞಾಚಕ್ರ ಸಂಬಂಧವಾಗಿರ್ಪುವು.
ಇಂತಿ ೧೦೧ ಸ್ಥಲಂಗಳು ಆಧಾರ, ಸ್ವಾಧಿಷ್ಠಾನ,
ಮಣಿಪೂರಕ ಅನಾಹತ, ವಿಶುದ್ಧಿ ಆಜ್ಞಾ
ಎಂಬ ಆರೂ ಚಕ್ರಂಗಳಲ್ಲಿ ಸಂಬಂಧಿಸಿ
ಆ ಆರು ಚಕ್ರಂಗಳನ್ನು
ನಿಃಷ್ಕಲ ಶೂನ್ಯ ನಿರಂಜನವೆಂಬ
ಮೂರು ಚಕ್ರಂಗಳಲ್ಲಿ ಅಡಗಿಸಿ
ಆ ಮೂರು ಚಕ್ರಂಗಳೆಂಬ ಮಂಟಪದಲ್ಲಿ
ಗುರುಲಿಂಗ ಜಂಗಮದ ಕುಳ್ಳಿರಿಸಿ
ನಿಷ್ಕಲ ಶೂನ್ಯ ನಿರಂಜನ ಭಕ್ತಿಯಿಂದರ್ಚಿಸಿ
ಆ ಗುರುಲಿಂಗ ಜಂಗಮದ ಒಂದಾದ
ಮಹಾಘನ ಪರಬ್ರಹ್ಮದಲ್ಲಿ ಮನವಡಗಿ
ಭಾವನಿಷ್ಪತ್ತಿಯಾಗಿ ಶರಧಿಯಲ್ಲಿ ಮುಳುಗಿದ
ಪೂರ್ಣಕುಂಭದಂತಿರ್ಪ ಮಹಾಶರಣರ ಪರಮಗುರು
ಬಸವರಾಜದೇವರ ದಿವ್ಯ ಶ್ರೀಪಾದಕ್ಕೆ ನಮೋ ನಮೊ
ಎಂಬೆನಯ್ಯಾ ಅಖಂಡೇಶ್ವರಾ.
(ಸಂಕೀರ್ಣ ವ.ಸಂ.೯ ಷಣ್ಮುಖ ಸ್ವಾಮಿ ವ-೭೮೦)

| ಸ್ಥಲ | ಚಕ್ರ/ಲಿಂಗ | ಅಂಗಸ್ಥಲ | ಲಿಂಗಸ್ಥಲ |
|---|---|---|---|
| ಭಕ್ತ | ಆಧಾರ/ | ೧. ಪಿಂಡಸ್ಥಲ | ೧. ದಿಕ್ಷಾಗುರುಸ್ಥಲ |
| | ಆಚಾರಲಿಂಗ | ೨. ಪಿಂಡ ಜ್ಞಾನ | ೨. ಶಿಕ್ಷಾಗುರು |
| | | ೩. ಸಂಸಾರ ಹೇಯ | ೩. ಜ್ಞಾನಗುರು |
| | | ೪. ಗುರುಕಾರುಣ್ಯ | ೪. ಕ್ರಿಯಾಲಿಂಗ |
| | | ೫. ಲಿಂಗಧಾರಣಾ | ೫. ಭಾವಲಿಂಗ |
| | | ೬. ವಿಭೂತಿಧಾರಣ | ೬. ಜ್ಞಾನಲಿಂಗ |
| | | ೭. ರುದ್ರಾಕ್ಷಿಧಾರಣ | ೭. ಸ್ವಯ |
| | | ೮. ಮಹಾಮಂತ್ರ | ೮. ಚರ |
| | | ೯. ಭಕ್ತ | ೯. ಪರ |

| | | |
|---|---|---|
| | | ೧೦. ಉಭಯ |
| | | ೧೧. ತ್ರಿವಿಧ ಸಂಪತ್ತಿ |
| | ೧೨. ಚತುರ್ವಿದ ಸಾರಾಯ | |
| | ೧೩. ಉಪಾಧಿಮಾಟ | |
| | ೧೪. ನಿರುಪಾಧಿಮಾಟ | |
| | ೧೫. ಸಹಜಮಾಟ | |

ಒಟ್ಟು (೧೫+೯=೨೪)

| | | |
|---|---|---|
| ಮಾಹೇಶ್ವರ ಸ್ವಾಧಿಷ್ಠಾನ ಚಕ್ರ/ಗುರುಲಿಂಗ | ೧. ಮಾಹೇಶ್ವರಸ್ಥಲ | ೧. ಕ್ರಿಯಾಗಮ |
| | ೨. ಲಿಂಗನಿಷ್ಠಾಸ್ಥಲ | ೨. ಭಾವಾಗಮ |
| | ೩. ಪೂರ್ವಾಶ್ರಯ ನಿರಸನ ಸ್ಥಲ | ೩. ಜ್ಞಾನಾಗಮ |
| | ೪. ವಾಗದ್ವೈತ ನಿರಸನ | ೪. ಸಕಾಯ |
| | ೫. ಅವ್ಹಾನ ನಿರಸನ | ೫. ಅಕಾಯ |
| | ೬. ಅಷ್ಟತನುಮೂರ್ತಿ | ೬. ಪರಕಾಯ |
| | ೭. ಸರ್ವಗತ ನಿರಸನ | ೭. ಧರ್ಮಾಚಾರ |
| | ೮. ಶಿವಜಗನ್ಮಯ | ೮. ಭಾವಾಚಾರ |
| | ೯. ಭಕ್ತದೇಹಿಕ | ೯. ಜ್ಞಾನಾಚಾರ |

ಒಟ್ಟು (೯+೯=೧೮ ಸ್ಥಲ)

| | | |
|---|---|---|
| ಪ್ರಸಾದಿ ಸ್ಥಲ ಮಣಿಪೂರಕ/ಶಿವಲಿಂಗ | ೧. ಪ್ರಸಾದಿ ಸ್ಥಲ | ೧. ಕಾಯಾನುಗ್ರಹ |
| | ೨. ಗುರುಮಹಾತ್ಮ | ೨. ಇಂದ್ರಿಯಾನುಗ್ರಹ |
| | ೩. ಲಿಂಗಮಹಾತ್ಮೆ | ೩. ಪ್ರಾಣಾನುಗ್ರಹ |
| | ೪. ಜಂಗಮ ಮಹಾತ್ಮೆ | ೪. ಕಾಯಾರ್ಪಿತ |
| | ೫. ಭಕ್ತ ಮಹಾತ್ಮೆ | ೫. ಕರಣಾರ್ಪಿತ |
| | ೬. ಶರಣ ಮಹಾತ್ಮೆ | ೬. ಭಾವಾರ್ಪಿತ |
| | ೭. ಪ್ರಸಾದ ಮಹಾತ್ಮೆ | ೭. ಶಿಷ್ಯ ಸ್ಥಲ |
| | | ೮. ಶುಶ್ರೂಷಾ ಸ್ಥಲ |



| | | |
|---|---|---|
| | | ೯. ಸೇವ್ಯ ಸ್ಥಲ |

ಒಟ್ಟು (೭+೯=೧೬) ಸ್ಥಲ

| | | |
|---|---|---|
| ಪ್ರಾಣಲಿಂಗಿ ಅನಾಹತ/ಜಂಗಮಲಿಂಗ | ೧. ಪ್ರಾಣಲಿಂಗಿ ಸ್ಥಲ | ೧. ಜೀವಾತ್ಮ |
| | ೨. ಪ್ರಾಣಲಿಂಗಾರ್ಚನ | ೨. ಅಂತರಾತ್ಮ |
| | ೩. ಶಿವಯೋಗ ಸಮಾಧಿ | ೩. ಪರಮಾತ್ಮ |
| | ೪. ಲಿಂಗನಿಜ | ೪. ನಿರ್ದೇಹಾಗಮ |
| | ೫. ಅಂಗಲಿಂಗ | ೫. ನಿರ್ಭಾವಾಗಮ |
| | | ೬. ನಷ್ಟಾಗಮ |
| | | ೭. ಆಗಿ ಪ್ರಸಾದಿ |
| | | ೮. ಅಂತ್ಯ ಪ್ರಸಾದಿ |
| | | ೯. ಸೇವ್ಯ ಪ್ರಸಾದಿ |
| | | ೧೦. ದೀಕ್ಷಾ ಪಾದೋದಕ |
| | | ೧೧. ಶಿಕ್ಷಾ ಪಾದೋದಕ |
| | | ೧೨. ಜ್ಞಾನ ಪಾದೋದಕ |

ಒಟ್ಟು ಒಟ್ಟು (೫+೧೨=೧೭)

| | | |
|---|---|---|
| ಶರಣ ವಿಶುದ್ಧಿ/ಪ್ರಸಾದ ಲಿಂಗ | ೧. ಶರಣ ಸ್ಥಲ | ೧. ಕ್ರಿಯಾ ನಿಷ್ಪತ್ತಿ |
| | ೨. ತಾಮಸ ನಿರಸನ | ೨. ಭಾವ ನಿಷ್ಪತ್ತಿ |
| | ೩. ನಿರ್ದೇಶ | ೩. ಜ್ಞಾನ ನಿಷ್ಪತ್ತಿ |
| | ೪. ಶೀಲಸಂಪಾದನ | ೪. ಪಿಂಡಾಕಾಶ |
| | | ೫. ಬಿಂದ್ವಾಕಾಶ |
| | | ೬. ಮಹದಾಕಾಶ |
| | | ೭. ಕ್ರಿಯಾ ಪ್ರಕಾಶ |
| | | ೮. ಭಾವಪ್ರಕಾಶ |
| | | ೯. ಜ್ಞಾನ ಪ್ರಕಾಶ (೯) |

ಒಟ್ಟು (೪+೯=೧೩) ಸ್ಥಲ

| | | | |
|---|---|---|---|
| ಐಕ್ಯ | ಆಜ್ಞಾಚಕ್ರ/ ಮಹಾಲಿಂಗ | ೧. ಐಕ್ಯ ಸ್ಥಲ | ೧. ಕೊಂಡುದು ಪ್ರಸಾದಿ |
| | | ೨. ಸರ್ವಾಚಾರ ಸಂಪತ್ತು | ೨. ನಿಂದುದೋಗರ |
| | | ೩. ಏಕಭಾಜನ | ೩. ಪರಾಚರ ನಾಸ್ತಿ |
| | | ೪. ಸಹಭೋಜನ | ೪. ಭಾಂಡ |
| | | | ೫. ಭಾಜನ |
| | | | ೬. ಅಂಗಲೇಪನ |
| | | | ೭. ಸ್ವಯಪರ |
| | | | ೮. ಭಾವಾಭಾವ |
| | | | ೯. ಜ್ಞಾನಶೂನ್ಯ |

ಒಟ್ಟು (೪+೯=೧೩)

ಅಂಗಸ್ಥಲ ೪೪+ಲಿಂಗಸ್ಥಲ ೫೭=೧೦೧ ಸ್ಥಲ

ಹೀಗೆ ಮನುಷ್ಯನ ದೇಹದಲ್ಲಿ ೧೦೧ ಸ್ಥಲಗಳಿವೆ. ಪ್ರತಿಯೊಂದು ಸ್ಥಲ ಸಾಮಾನ್ಯ ಭಾಷೆಯಲ್ಲಿ ಹೇಳುವದಾದರೆ ಒಂದೊಂದು ದಿವ್ಯ ಮಂದಿರಕ್ಕಿಂತಲೂ ಮಿಗಿಲಾಗಿವೆ. ಹಾಗೆ ಕಂಡರೆ ಮನುಷ್ಯನ ಅಂಗ ೧೦೧ ಭವ್ಯ ದಿವ್ಯ ದೇವಾಲಯ ಸಮೂಹದ ತೀರ್ಥಕ್ಷೇತ್ರವಾಗಿದೆ. ಶ್ರೀ ಬಸವಣ್ಣನವರು 'ದೇಹವೇ ದೇಗುಲ', 'ಶಿರ ಹೊನ್ನದ ಕಳಸ'ವೆಂದಿದ್ದಾರೆ.

ಇಂತೀ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ
ಶಿವಾನುಭವವನೊಳಕಂಡ ಎನ್ನ ಚಿದಂಗವೇ
ಮಹಾಕೈಲಾಸವಯ್ಯ ನಿಮಗೆ ಅಖಂಡೇಶ್ವರಾ
(ಸಂ.ವ.ಸಂ-೯ ವ.ಸಂ-೪೪೩)

ಇಷ್ಟಲಿಂಗೋಪಾಸನೆ ನಿಜದಲ್ಲಿ ಸ್ವಯದ ಉಪಾಸನೆಯ ಮಾಧ್ಯಮದಿಂದ ಬ್ರಹ್ಮಾಂಡದ ಪ್ರಜ್ಞೆಯ ಉಪಾಸನೆಯಾಗಿದೆ. ಬಸವಸಿದ್ಧಿಯಾದ ಇಷ್ಟಲಿಂಗ ಯೋಗದ ಪಂಚಪರುಷ[೧೬] ಸಾಧನೆಯ ಸುಲಭಾಚರಣೆಯ ಅಪೂರ್ವ ಫಲವೆಂದರೆ ಮನುಷ್ಯರ ಅರಿವು-ಆಚಾರ-ಅನುಭಾವದಲ್ಲಿ ಕ್ರಾಂತಿಕಾರಕ ಪರಿವರ್ತನೆ ಮನೋವೈಜ್ಞಾನಿಕ ವಿಚಾರದ ಶ್ರೇಷ್ಠ ಅವಿಷ್ಕಾರವೆಂದರೆ



"ಮನುಷ್ಯರು ತಮ್ಮ ಮನಸ್ಸಿನ ವರ್ತನೆಯನ್ನು ಬದಲಾಯಿಸುವ ಮೂಲಕ ತಮ್ಮ ಜೀವನವನ್ನು ಬದಲಾಯಿಸಬಹುದು"

**"The beauty of human existence lies not in staying alive but finding something to live for. When you findout that something write it on your heart and live for it. Believe in yourself never quit. Mahaghanalinga paramatma is within you"**



# ಇಷ್ಟಲಿಂಗ

## ಇಷ್ಟಲಿಂಗ ಉಪಸನಾ ಜಗತ್ತಿಗೆ ಮೊದಲು ಕೊಟ್ಟವರು ಯಾರು?

ಕಳೆದ ೨೦–೨೨ ವರ್ಷಗಳಿಂದ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣಾ ಆಂಧ್ರದ ಹಲವು ಪಟ್ಟಣ, ಹಳ್ಳಿಗಳ ಅನೇಕ ತೀರ್ಥಕ್ಷೇತ್ರ ಮತ್ತು ಭಾರತದ ಇತರ ಭಾಗದ ಜನರ ಮುಂದೆ ಇಷ್ಟಲಿಂಗ ಯೋಗದ ಪ್ರಾತ್ಯಕ್ಷಿಕೆಗಳನ್ನು ಸಾದರಪಡಿಸಿ ಅದರಲ್ಲಿ ಸಹಭಾಗಿಯಾದ ಜನರ ಪ್ರತಿಕ್ರಿಯೆ ಕೇಳಿದರೆ ಅವರೆಲ್ಲರಲ್ಲಿ ಒಂದು ಸಾಮಾನ್ಯವಾದ ವಿಚಾರ ಬಂದುದ್ದು ಕಂಡು ಬರುತ್ತದೆ. ಅದೇನೆಂದರೆ:

೧. ಇಷ್ಟಲಿಂಗದ ಯೋಗದ ಸಾಧಕರಿಗೆ ಖಚಿತವಾದ ಪ್ರಯೋಜನಗಳು ದೊರೆಯುತ್ತವೆ ಎಂಬ ನನ್ನ ವಾದವನ್ನು ಸಾಬೀತುಪಡಿಸಲು ಯಾವುದಾದರು ವೈಜ್ಞಾನಿಕ ಪುರಾವೆಗಳಿವೆಯೇ?

ಅವರಿಗಾಗಿ ನನ್ನ ಉತ್ತರ: ನಾನು ತರ್ಕ ಮತ್ತು ತಾರ್ಕಿಕತೆಯೊಂದಿಗೆ ನನ್ನ ಪಿಪಿಟಿ ಪ್ರಸ್ತುತಿಯಲ್ಲಿ ಇಷ್ಟಲಿಂಗ ಯೋಗದ ಬಗ್ಗೆ ನನಗೆ ದೊರಕಿದ ವೈಜ್ಞಾನಿಕ ಸಂಗತಿಗಳನ್ನು ನಿಮ್ಮ ಮುಂದೆ ಇರಿಸಿದ್ದೇನೆ ಮತ್ತೆ ಮುಂದೆ ನೀವು ಸ್ವತಃ ಪ್ರಯೋಗ ಮಾಡಿ ಈ ಬಗ್ಗೆ ನಿರ್ಣಯಿಸುತ್ತೀರಿ ಎಂದು ಹೇಳುತ್ತೇನೆ. ನನಗೆ ಖಾತ್ರಿ ಇದೆ ಇದನ್ನು ಪ್ರಯತ್ನಿಸಿ ಸ್ವಯಂ ನೀವೆ ಇಷ್ಟಲಿಂಗಯೋಗದ ವೈಜ್ಞಾನಿಕ ಪುರಾವೆಯಾಗುತ್ತೀರಿ.

೨. ಜನರು ನನ್ನ ಮುಂದೆ ಇನ್ನೊಂದು ಪ್ರಶ್ನೆ ಎತ್ತುತ್ತಿರುವದೆಂದರೆ ಇಷ್ಟಲಿಂಗ ಮತ್ತು ಇಷ್ಟಲಿಂಗೋಪಾಸನಾ ಪದ್ಧತಿ ಜಗತ್ತಿಗೆ ಮೊಟ್ಟಮೊದಲು ಕೊಟ್ಟವರ್ಯಾರು? ಈ ವಿಷಯ ಕುರಿತು ನಾವು ಪ್ರಶ್ನೆಗೆ ಉತ್ತರ ಬಸವ



ಸಮಕಾಲೀನ ಶರಣರ ಮತ್ತು ಬಸವೋತ್ತರ ಕಾಲದ ಶರಣರ ವಚನಗಳಲ್ಲಿ, ಸಾಹಿತ್ಯದಲ್ಲಿ ಮಹಾಕಾವ್ಯಗಳಲ್ಲಿ ಹುಡುಕಬೇಕಾಗುತ್ತದೆ. ಸನಾತನದಲ್ಲಿ ಒಂದು ಮಾತು ಬರುತ್ತದೆ. ಶಾಸ್ತ್ರಕ್ಕೆ ಪ್ರಶ್ನೆ ಉದ್ಭವಿಸಿದಾಗ ಅದಕ್ಕೆ ಉತ್ತರ ಇತರ ಶಾಸ್ತ್ರಗಳಲ್ಲಿ ಹುಡುಕದೆ ಲೋಕದಲ್ಲಿ ಹುಡುಕಬೇಕೆಂದು, ಅದಕ್ಕಾಗಿ ಈ ಪ್ರಶ್ನೆಗೂ ಉತ್ತರ ಸಂಸ್ಕೃತಿ ಮತ್ತು ಲೋಕ ಚೈತನ್ಯ ಮತ್ತು ಭಾವಾಚರಣೆಯಲ್ಲಿ ಹುಡುಕಿದರು ತಪ್ಪಾಗಲಾರದು. ಭಾರತೀಯರು ಇತಿಹಾಸ ನಿರ್ಮಿಸುತ್ತಾರೆ. ಆದರೆ ಇತಿಹಾಸದ ದಾಖಲೆಗಳಿಡುವದಿಲ್ಲ ಈ ಮಾತು ಜಗಪ್ರಸಿದ್ಧವಿದೆ.

ಅನುಭವ ಮಂಟಪದ ೨ನೇ ಶೂನ್ಯಪೀಠಾಧಿಪತಿ ಚಿನ್ಮಯ ಜ್ಞಾನಿ ಸಮಸಮನ್ವಯ ಷಟ್‌ಸ್ಥಲ ಸಿದ್ಧಾಂತದ ಜನಕ ಚೆನ್ನಬಸವಣ್ಣ ಬರೆದಿದ್ದಾರೆ.

ಬಸವಣ್ಣ ಓಂಕಾರದಿಂದತ್ತತ್ತ ನೀನೆ
ಬಸವಣ್ಣ ನಾದಬಿಂದು ಕಳೆಗಳಿಂದತ್ತತ್ತ ನೀನೆ
ಬಸವಣ್ಣ ಪ್ರಥಮಾಚಾರ್ಯ ನೀನೆ ....
(ಸ.ವ.ಸ.–೩ ಚೆನ್ನಬಸವಣ್ಣ ವ–೧೪)

ಅರ್ಥಾತ ಶ್ರೀ ಬಸವಣ್ಣನವರೆ ಲಿಂಗವಂತಕ್ಕೆ ಪ್ರಥಮ ಗುರುಗಳು ಇದರಿಂದ ಶ್ರೀಬಸವರಿಂದಲೆ ಲಿಂಗವಂತ ಧರ್ಮ ಹುಟ್ಟಿದೆ ಎಂದು ಸಿದ್ಧವಾಗುತ್ತದೆ ಮುಂದೆ ಬರೆಯುತ್ತಾರೆ.

ನಮಃ ಶಿವಾಯ ಲಿಂಗವು ಓಂ ನಮಃ ಶಿವಾಯ ಬಸವಣ್ಣನು

(ಸ.ವ.ಸ.–೩ ಚೆನ್ನಬಸವಣ್ಣ ವ–೧೫)

ವ್ಯೋಮಕಾಯ ಯೋಗಿ ಅಲ್ಲಮ ಪ್ರಭುಗಳು ತಮ್ಮ ವಚನ

"ಶಿವಗುರುವೆಂದು ಬಲ್ಲಾತನೆ ಗುರು
.........................................
..........................................
ಇಂತೀ ಪಂಚವಿಧವೆ ಪಂಚಬ್ರಹ್ಮವೆಂದರಿದ
ಮಹಾಮಹಿಮ ಸಂಗನ ಬಸವಣ್ಣನು
ಎನಗೆಯೂ ಗುರು ನಿನಗೆಯೂ ಗುರು

ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರಾ
(ಸ.ವ.ಸ.೨ ಅಲ್ಲಮ ಪ್ರಭು ವ-೧೫೪೨)

ಜಗವೆಲ್ಲಕ್ಕೂ ಗುರು ಬಸವಣ್ಣನೆ ಎಂದು ಸಾರಿದ್ದಾರೆ ಅಲ್ಲಮ ಪ್ರಭುಗಳು. ಅವರು ಬಸವಣ್ಣನವರಿಗೆ ಧರ್ಮ ಸಂಸ್ಥಾಪಕರೆಂದು ಈ ವಚನದಲ್ಲಿ ಘೋಷಿಸಿದ್ದಾರೆ. ಲಿಂಗಾಧಾರಿತ ಧರ್ಮವಾಗಿದ್ದ ಕಾರಣ ಧರ್ಮದ ಮೂಲವಾದ ಲಿಂಗವು ಬಸವಣ್ಣನವರಿಂದಲೆ ಜಗಕ್ಕೆ ದೊರಕಿತು.

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದಡೆ ಭಕ್ತಿ ಎಂಬ ರಸವಯ್ಯಾ
ಆಯತ ಬಸವಣ್ಣನಿಂದ, ಸ್ವಾಯತ ಬಸವಣ್ಣನಿಂದ
ಸನ್ನಿಹಿತ ಬಸವಣ್ಣನಿಂದ
ಗುರುಬಸವಣ್ಣನಿಂದ, ಲಿಂಗ ಬಸವಣ್ಣನಿಂದ
ಜಂಗಮ ಬಸವಣ್ಣನಿಂದ
ಪಾದೋದಕ ಬಸವಣ್ಣನಿಂದ, ಪ್ರಸಾದ ಬಸವಣ್ಣನಿಂದ
ಅತ್ತ ಬಲ್ಲಡೆ ನೀವು ಕೇಳಿರೆ, ಇತ್ತ ಬಲ್ಲಡೆ ನೀವು ಕೇಳಿರೆ
ಬಸವಾ, ಬಸವಾ, ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ
ಶೂನ್ಯ ಕಾಣಾ ಕಲಿದೇವರ ದೇವಾ
(ಸಂಕೀರ್ಣ ವ.ಸಂ.೩. ಮಡಿವಾಳ ಮಾಚಿದೇವ. ವ.೫೨೬)

ಮಡಿವಾಳ ಮಾಚಿತಂದೆಯವರು ಲಿಂಗದಿಂದ ಹಿಡಿದು ಲಿಂಗವಂತ ಧರ್ಮದ ಎಲ್ಲ ಅಂಗಗಳು ಬಸವಣ್ಣನಿಂದಲೆ ಹುಟ್ಟಿದವೆಂದು ಸಾರುತ್ತಾರೆ.

ಬಸವೋತ್ತರ ಯುಗದ ಕನ್ನಡದ ಕವಿಶ್ರೇಷ್ಠರಾದ ಚಾಮರಸರು ತಮ್ಮ 'ಮಹಾಕಾವ್ಯ ಪ್ರಭುಲಿಂಗಲೀಲೆ'ಯಲ್ಲಿ ಹೇಳುತ್ತಾರೆ.

ಕಾಯದೊಳು ಗುರುಲಿಂಗ ಜಂಗಮ
ದಾಯತವನರಿಯಲ್ಕೆ ಸುಲಭೋ
ಪಾಯದಿಂದಿದಿರಿಟ್ಟು ಬಾಹ್ಯಸ್ಥಲಕ್ಕೆ ಕುರುಹಾಗಿ
ದಾಯದೋರಿ ಸಮಸ್ತ ಭಕ್ತನಿ



ಕಾಯವನು ಪಾವನವ ಮಾಡಿದ
ರಾಯ ಪೂರ್ವಾಚಾರ್ಯ ಸಂಗನ ಬಸವ ಶರಣಾರ್ಥಿ
(ಚಾಮರಸನ ಪ್ರಭುಲಿಂಗಲೀಲೆ ಚಾಮರಸ ಕವಿ ವಿರಚಿತ ವ್ಯಾ: ಬಸವರಾಜ ವೆಂಕಟಾಪುರ ಪು-೨)

ತನುವಿನಲ್ಲಿಯೇ ಗುರುಲಿಂಗಜಂಗಮದ ವಾಸವಿದ್ದು ಆ ಲಿಂಗವನ್ನೆ ಕರಸ್ಥಲದಲ್ಲಿ ಮಹಾಘನಲಿಂಗ ಪರಮಾತ್ಮನ ಸೂಕ್ಷ್ಮರೂಪವಾದ ಇಷ್ಟಲಿಂಗದ ರೂಪದಲ್ಲಿ ಸಾಕ್ಷಾತ್ಕಾರ ಮಾಡಿದ ಪ್ರಥಮ ಗುರು ಶ್ರೀ ಬಸವಣ್ಣ, ಇವರಿಂದ ಅಲ್ಲಿಯವರೆಗೆ ಶರೀರಕ್ಕೆ ವ್ಯರ್ಥ ಅಪವಿತ್ರವೆಂದು ಪರಿಗಣಿಸುತ್ತಿದ್ದುದ್ದನ್ನು ಬದಲಾಯಿಸಿ ದೇಹದಲ್ಲಿಯೇ ಲಿಂಗವಿದ್ದ ಕಾರಣ ದೇಹ ಪವಿತ್ರವಾದ ಮೌಲ್ಯಯುತವಾದದ್ದು ಎಂದು ತೋರಿದವರು ಶ್ರೀ ಬಸವರು ಎಂದು ಕವಿ ಬರೆಯುತ್ತಾನೆ.

ಶಿವಯೋಗಿ ಸಿದ್ಧರಾಮರು ಬಸವಣ್ಣನವರು ಇಷ್ಟಲಿಂಗದ ಜನಕರಷ್ಟೇ ಅಲ್ಲ ಅವರು ಸ್ವಯಂ ಲಿಂಗವೆ ಆಗಿದ್ದಾರೆಂದು ಸಾರುತ್ತಾ

ಅಂಗದೊಳಾಯತ್ತ ಲಿಂಗ ನಿರವಯರೂಪ
ಮಂಗಳಾತ್ಮಕ ಮೂರ್ತಿ ಬಸವಲಿಂಗ
ಅಂಗಸಂಗದ ಭಾವ ಭ್ರಮೆಯಳಿದ ಶಿವಯೋಗಿ
ಲಿಂಗ ಬಸವಣ್ಣನೈ ಯೋಗಿನಾಥ
(ಶ್ರೀ ಸಿದ್ಧರಾಮೇಶ್ವರ ದೇವರ ಸತ್ಯಶುದ್ಧ ಮಹಾ ವಚನಾಗಮ ವ.೨೦೮೫ ಪು. ೪೮೧) ಸಂ.ಪಿ.ಎಂ. ಗಿರಿರಾಜು

ಸರ್ವಜ್ಞನ ವಚನ ಸ್ಪಷ್ಟವಾಗಿ ಸಾರುತ್ತದೆ. ಶ್ರೀಗುರು ಬಸವಣ್ಣನವರೆ ಇಷ್ಟಲಿಂಗದ ಜನಕರಾಗಿದ್ದಾರೆ.

ಹರನೆ ಗುರುವಾಗಿ ತಾ ಮರ್ತ್ಯಲೋಕಕ್ಕೆ ಬಂದು
ಪರಶಿವಲಿಂಗವನು ಕರಕೆ ತಂದುಕೊಟ್ಟು
ಗುರುವೆ ಬಸವಣ್ಣ ಸರ್ವಜ್ಞ
(ವಚನತವನಿಧಿ ಅನುಭವ ಮಂಟಪ, ಟ್ರ ತಾಳಿಕೋಟೆ-೨೦೧೫ ಪು.೦೫, ಸಂ. ಪ್ರ.ಗು.ಕಶೆಟ್ಟಿ)

ಇಷ್ಟಲಿಂಗದ ಜನಕರಾರು? ಎಂಬ ಈ ಪ್ರಶ್ನೆ ಎತ್ತಿಕೊಂಡು ನಾನು ಮಹಾರಾಷ್ಟ್ರದ ಅನೇಕ ಜಿಲ್ಲೆಗಳಲ್ಲಿ, ಹಳ್ಳಿಗಳಲ್ಲಿ, ಕಲ್ಯಾಣ ಕರ್ನಾಟಕದ ಅನೇಕ ಪಟ್ಟಣ ಮತ್ತು ಹಳ್ಳಿಗಳಲ್ಲಿ, ತೆಲಂಗಾಣಾ, ಆಂಧ್ರದ ಅನೇಕ ನಗರಗಳ ಜನರಿಗೆ ಈ ಪ್ರಶ್ನೆ ಹಾಕಿದ್ದೇನೆ. ಅನೇಕರು ನನ್ನಿಂದಲೆ ಈ ಪ್ರಶ್ನೆಯ ಉತ್ತರ ಅಪೇಕ್ಷಿಸುತ್ತಿದ್ದರು. ಆದರೆ ಅನೇಕ ಮುಗ್ಧರು ಶಿಕ್ಷಿತರು ಅಶಿಕ್ಷಿತರು ಒಕ್ಕೊರಳಿನಿಂದ ಉತ್ತರಿಸುತ್ತಾರೆ. "ಬಸವಣ್ಣನೆ ಇಷ್ಟಲಿಂಗದ ಜನಕ" ತೆಲಂಗಾಣದ ಕೆಲವು ಹಳ್ಳಿಗಳಲ್ಲಿ ಶ್ರೀ ಬಸವಣ್ಣನೆ ಇಷ್ಟಲಿಂಗದ ಜನಕನೆಂದು ಜಾನಪದ ಗೀತೆಗಳನ್ನು ಕಟ್ಟಿ ಹಾಡುತ್ತಿರುವುದನ್ನು ಅನೇಕರು ಕೇಳಿದ್ದಾರೆ. ನಾನು ಕೇಳಿದ್ದೇನೆ.

ಜ್ಞಾನದ ಬಹು ಆಯಾಮದ ಯಾವುದೆ ಅಂಗದಿಂದ ಉಪಲಬ್ದವಿದ್ದ ಸಾಹಿತ್ಯಿಕ, ಕಾವ್ಯ, ಲೋಕದ ಧಾರ್ಮಿಕ ಹಾಗು ಸಂಸ್ಕೃತಿಯ ಪುರಾವೆಗಳ ಆಧಾರದ ಮೇಲೆ 'ಇಷ್ಟಲಿಂಗದ' ಜನಕರು ಯಾರು'? ಎಂದು ವಿಶ್ಲೇಶಿಸಿದರೆ ಅದರ ಉತ್ತರ ನಿರ್ವಿವಾದವಾಗಿ "ಶ್ರೀಗುರು ಬಸವಣ್ಣನವರೆ" ಎಂದು ಸಿದ್ಧವಾಗುತ್ತದೆ.

ತಾ ಮಾಡಿದ ಕಾರ್ಯಕ್ಕೆ ತನ್ನಕಿಂತ ಮಿಗಿಲಾದ ಸಾಕ್ಷಿ ಬೇರೆಯವರಾಗಲಿಕ್ಕೆ ಸಾಧ್ಯವಿಲ್ಲ. ಶ್ರೀ ಬಸವಣ್ಣನವರೆ ತಮ್ಮ ವಚನ ಇಷ್ಟಲಿಂಗದ ಜನಕರು ಯಾರು ಎಂಬ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ನಾನಾಸ್ಥಾನದಲ್ಲಿ ಬಂದು ತೊಳಲಿ ಬಳಲಿ
ಅಳಿದುಳಿದು ನಿಂದನಿಲದವನಲ್ಲ
ಮರ್ತ್ಯಲೋಕದಲ್ಲಿ ಶಿವಾಚಾರದ ಘನವು ಹೂಳಿಹೊಯಿತ್ತೆಂದು
ಕರ್ತನು ತಾನೆ ಮಹಾಪ್ರಸಾದಿಯಾಗಿ ಉದಯವಾದನು
ಹಸ್ತಮಸ್ತಕ ಸಂಯೋಗವಿಲ್ಲದ ಮುನ್ನವೆ
ಆದಿಗುರು ಅನಾದಿ ಶಿಷ್ಯನೆಂಬುದ ನೆಲೆಮಾಡಿ
ಸಂಗಮನಾಥನೆಂಬ ಲಿಂಗವನೆನ್ನ ಕೈಯಲ್ಲಿ ಕೊಟ್ಟು
ಸಾಮದಿಂದ ಅನುಗ್ರಹಿಸಿಕೊಂಡನು
ಎನ್ನ ಹಿಂದಣ ಪೂರ್ವಾಪರವನೆತ್ತಿ



ತೋರಿ ತನ್ನತ್ತ ಕರೆದುಕೊಂಡನು
ಕೂಡಲಸಂಗಮದೇವರಲ್ಲಿ ಚನ್ನಬಸವಣ್ಣನು"

ಸ.ವ.ಸಂ.೧ ಬಸವಣ್ಣ ವ. ೧೨೪೦

ಘನಲಿಂಗ ಪರಮಾತ್ಮ ಕೂಡಲ ಸಂಗಮದೇವನೆ ಸ್ವತಃ ಅವರ ಕರಸ್ಥಲದಲ್ಲಿ ಗುರುಶಿಷ್ಯ ಪರಂಪರೆಯನ್ನು ಪರಿಗಣಿಸಲಾರದೆ ಉದಯವಾದನು ಎನ್ನುತ್ತಾರೆ. ಪರಮಾತ್ಮನ ಈ ಅತಿವಿಶೇಷ ಪ್ರಕಟಿಕರಣಕ್ಕೆ ಕಾರಣವೇನು? ಮರ್ತ್ಯದಲ್ಲಿ ಅಂದರೆ ಈ ಭೂಮಿಯ ಮೇಲಿನ ಒಳ್ಳೆಯ ತನ್ನ ನಷ್ಟವಾಗಿದ್ದ ಕಾರಣ ಅದ್ನನು ಪುನಃ ಸ್ಥಾಪಿಸಿ ಜನ ಕಲ್ಯಾಣ ಮಾಡಲು ಬಸವಣ್ಣನವರ ಕರಸ್ಥಲದಲ್ಲಿ ಪರಮಾತ್ಮ ಸ್ವತಃ ಇಷ್ಟಲಿಂಗವಾಗಿ ಉದವಾದನು. ಈ ವಚನ ಆಧಾರವಾಗಿಟ್ಟುಕೊಂಡು ನೋಡಿದರೆ ಬಸವಣ್ಣನವರಲ್ಲಿ ಲಿಂಗದ ಉದಯವಾಗಿದೆ. ಅದಕ್ಕಾಗಿ ಇಷ್ಟಲಿಂಗಯೋಗಕ್ಕೆ "ಲಿಂಗಾನುಸಂಧಾನ" ವೆಂಬುದು ಸತ್ಯಕ್ಕೆ ಹಿಡಿದಾಗುವದಿಲ್ಲ.

ಕೆಲವು ಶೈವಾಗಮಿಗಳು ಹಾಗು ವೈದಿಕರು ಬಸವ ಪೂರ್ವದಲ್ಲಿ ಇಷ್ಟಲಿಂಗೋಪಾಸನೆ ಇತ್ತು ಎಂದು ಹೇಳುತ್ತಾರೆ. ಇದು ಸತ್ಯಕ್ಕೆ ಹಿಡಿದ ಮಾತಲ್ಲ, ಈ ದೇಶದಲ್ಲಿ ಶೈವಾಗಮಿಗಳು ತಮಿಳನಾಡು, ಕೇರಳ, ಕಾಶ್ಮೀರ ಮತ್ತು ಓರಿಸಾದ ಕೆಲವು ಭಾಗಗಳಿದ್ದುದ್ದು ಕಂಡು ಬರುತ್ತದೆ. ಶೈವಾಗಮಿಗಳಲ್ಲಿ ಇಷ್ಟಲಿಂಗೋಪಾಸನೆ ಇದ್ದರೆ ಇಂದಿಗೂ ಅಲ್ಲಿ ಇಷ್ಟಲಿಂಗಧಾರಕರು ಮತ್ತು ಇಷ್ಟಲಿಂಗಾರ್ಚಕರು ವ್ಯಾಪಕವಾಗಿ ಕಂಡು ಬರಬೇಕಾಗಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ, ಇಷ್ಟಲಿಂಗಧಾರಕರು ಮತ್ತು ಅರ್ಚಕರು ಬಹು ದೊಡ್ಡ ಸಂಖ್ಯೆಯಲ್ಲಿ ಕಂಡುಬರುವದು ಶ್ರೀ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮದ ಪ್ರಭಾವವಿದ್ದ ಕರ್ನಾಟಕ, ಮಹಾರಾಷ್ಟ್ರ, ಕರ್ನಾಟಕ, ಕರ್ನಾಟಕ ತಮಿಳನಾಡು ಗಡಿಪ್ರದೇಶ ತೆಲಂಗಾಣಾದ ವೆಂಗಿನಾಡು, ಶ್ರೀಶೈಲಂ ಮತ್ತು ಮಧ್ಯ ಆಂಧ್ರದಲ್ಲಿ, ಈ ಸತ್ಯಸ್ಥಿತ ಏನು ಸೂಚಿಸುತ್ತದೆ? ಬಸವಣ್ಣನವರೆ ಇಷ್ಟಲಿಂಗದ ಜನಕರಾಗಿದ್ದಾರೆ.

ಶ್ರೀ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೇಳುತ್ತಾರೆ.

ಲಿಂಗದ ಉಂಡಿಗೆಯ ಪಶುನಾನಯ್ಯಾ

ವೇಷಧಾರಿಯಾನು, ಉದರಪೋಷಕ ನಾನಯ್ಯಾ
ಕೂಡಲಸಂಗನ ಶರಣರ ಧರ್ಮದ ಕವಿಲೆಯಾನು
(ಸ.ವ.ಸಂ.೧ ಬಸವಣ್ಣ ೮೫)

ಈ ವಚನದಲ್ಲಿ ಶ್ರೀ ಬಸವಣ್ಣನವರು ಸ್ವತಃ ಹೇಳಿಕೊಳ್ಳುತ್ತಾರೆ. ತಾವೇ ಲಿಂಗಧಾರಿಯಾಗಿದ್ದು ಕೂಡಲಸಂಗನ ಶರಣರ ಧರ್ಮದ ಅಂದರೆ ಲಿಮಗಾಯತ ಧರ್ಮದ ಕಪಿಲವಸ್ತು ಗೋವು ಆಗಿದ್ದಾರೆ, ಅರ್ಥಾತ ಸ್ಥಾಪಕರಾಗಿದ್ದಾರೆ.

## ೩. ಇಷ್ಟಲಿಂಗ ಯಾವ ವಸ್ತುಗಳಿಂದ ತಯಾರಿಸಲಾಗುತ್ತದೆ:

ನಾನು ಇಷ್ಟಲಿಂಗ ಯೋಗ ಪ್ರತಿನಿತ್ಯ ಮಾಡಲು ಆರಂಭ ಮಾಡಿದಾಗ ಸುಮಾರು ೩೦–೩೫ ವರುಷಗಳ ಹಿಂದೆ, ನಮ್ಮ ಮನೆಗೆ ಕಾಂತಿ ಸ್ವಾಮಿಗಳು ಬಂದು ಲಿಂಗಮಾಡಿ ಕೊಡುತ್ತಿದ್ದುದ್ದು ನಾನು ನೋಡಿದ್ದೇನೆ. ಅವರ ಹತ್ತಿರ ಕಪ್ಪು ಬಣ್ಣದ ಹಿಟ್ಟು ರುದ್ದಿ ಮಾಡಿದ ಮುದ್ದೆ ಅದಕ್ಕೆ ಕಂತಿ ಎನ್ನುತ್ತಿದ್ದರು ಮತ್ತು ಸ್ಥಾವರ ಲಿಂಗಾಕಾರದ ಶಾಲಿಗ್ರಾಮದ ಚಿಕ್ಕ ಲಿಂಗಗಳಿರುತ್ತಿದ್ದವು. ಲಿಂಗ ತಯಾರಿಸುವಾಗ ಆ ಮುದ್ದೆಯನ್ನು ದೀಪಕ್ಕೆ ಹಿಡಿದು ಬಿಸಿ ಮಾಡಿ ಮೆತ್ತಗಾದಾಗ ಅದರಲ್ಲಿಯ ಸ್ವಲ್ಪ ಭಾಗ ಕಡಿದು ಅದರ ಮಧ್ಯದಲ್ಲಿ ಸ್ಥಾವರಲಿಂಗ ಇಟ್ಟು ಒಂದು ಚಾಕುವಿನಿಂದ ಬಡೆಯುತ್ತ ಇಷ್ಟಲಿಂಗದ ಗೋಲಾಕಾರ ತಯಾರಿಸುತ್ತಿದ್ದರು. ಒಂದೆರಡು ದಿವಸ ಒಣಗಿದ ನಂತರ ಅದನ್ನು ಲಿಂಗದ ಬೆಳ್ಳಿಯ ಚೌಕದಲ್ಲಿಟ್ಟು ಧರಿಸಲು ಹೇಳುತ್ತಿದ್ದರು.

ಕಂತಿ ಯಾವ ವಸ್ತುಗಳಿಂದ ತಯಾರಿಸುತ್ತೀರಿ ಎಂದು ಕೇಳಿದರೆ ಎಣ್ಣೆ ಅಥವಾ ತುಪ್ಪದ ಕಾಡಿಗೆ ಅದರಲ್ಲಿ ಸ್ವಲ್ಪ ಕೇರೆಣ್ಣೆ ಮತ್ತು ಅಂಟಿನ ಜಿಗುಟು ಹಾಕುತ್ತೇವೆಂದು ತಿಳಿಸುತ್ತಿದ್ದರು. ಮುಂದೆ ನಾನು ಈ ವಿಷಯದಲ್ಲಿ ಅಧ್ಯಯನ ಮಾಡಿದಾಗ ಶರಣರ ವಚನಗಳಲ್ಲಿ ಲಿಂಗ ತಯಾರಿಸುವ ವಸ್ತುಗಳಾಗಲಿ ಅಥವಾ ತಯಾರಿಸುವ ವಿಧಿಯ ಬಗ್ಗೆ ಮಾಹಿತಿ ದೊರಕಲಿಲ್ಲ. ಬಸವಕಲ್ಯಾಣದಲ್ಲಿ ಕುಣಿ ಕೆದರುವವರಿಂದ ಸ್ಮಶಾನದಲ್ಲಿ ದೊರೆತ ಹಳೆ ಲಿಂಗಗಳನ್ನು ತರಿಸಿ ನೋಡಿದರೆ ಲಿಂಗಗಳ ಕಂತಿ ಉದುರಿ ಹೋಗಿರುತ್ತಿದ್ದವು. ನನ್ನ ಇಚ್ಛೆ ಬಸವಕಲ್ಯಾಣದಲ್ಲಿ ೧೨ನೇ ಶತಮಾನದಲ್ಲಿ ತಯಾರಿಸಿದ ಲಿಂಗ



ನೋಡುವದಿರುತ್ತಿತ್ತು. ಮುಂದೆ ನಿಲಂಗಾ ತಾಲುಕು ಮಹಾರಾಷ್ಟ್ರದ ಒಂದು ಚಿಕ್ಕ ಗ್ರಾಮ ದೇವಿಹಲ್ಲಾಳಿ ಗೌಡನ ಮನೆಯಲ್ಲಿ ಸಾಧಾರಣ ೧೦೦–೧೫೦ ವರುಷದ ಒಂದು ಲಿಂಗ ದೊರಕಿತ್ತು. ಆ ಲಿಂಗ ಸ್ವಲ್ಪ ಭಿನ್ನವಾಗಿತ್ತು. ಅದರ ಸಣ್ಣ ಚೂರು ತೆಗೆದು ಅದರಲ್ಲಿಯ ರಸಾಯನಿಕ ವಸ್ತುಗಳ ವಿಶ್ಲೇಷಣೆಗೆ ಕಳಿಸಬೇಕೆಂದರೆ ಚೂರು ಕೊಡಲು ಗೌಡ ಒಪ್ಪಲಿಲ್ಲ. ಈ ಲಿಂಗ ತಯಾರಿಸುವವರಿಗೂ ಕೇಳಿದರೆ ಮೇಲೆ ಮೇಲೆ ಉತ್ತರ ಹೇಳಿದರು. ನಿಜವಾಗಿ ಲಿಂಗ ತಯಾರಿಸಲು ಉಪಯೋಗಿಸುವ ವಸ್ತುಗಳು ಹೇಳುವದಿಲ್ಲ. ಕೊನೆಗೆ ವಚನಗಳ ಅಧ್ಯಯನದಿಂದಲೆ ನನ್ನ ಪ್ರಶ್ನೆಗೆ ಸಮಾಧಾನ ಸಿಗುತ್ತದೆಂದು ನಿರ್ಧರಿಸಿದೆ. ಶ್ರೀ ಬಸವಣ್ಣನವರ ಒಂದು ವಚನ ದೊರಕಿತು.

ಚಂದ್ರ ಶಿಲೆಯಲ್ಲಿ ಪಾವಕ ಹುಟ್ಟಿ
ಇಡಾ ಪಿಂಗಳಾ ಮಧ್ಯದಲ್ಲಿ ಅನಿಲತುಂಬಿ
ಅರಿದರಿದು ನಿಮ್ಮ ನೆನೆವ ಪರಿಕರ ಹೊಸತು
ಅರಿವಡೆ ತಲೆಯಿಲ್ಲ ಹಿಡಿವಡೆ ಒಡಲಿಲ್ಲ
ಕೂಡಲಸಂಗಮದೇವಾ
ನಿಮ್ಮ ಶರಣನ ಪರಿ ಇಂತುಂಟು ಅರಿದರಿದು
(ಸ.ವ.ಸಂ.೧ ಬಸವಣ್ಣ ೧೧೮೫)

ಈ ವಚನದ ಆಧಾರದ ಮೇಲೆ ಇಷ್ಟಲಿಂಗದ ಒಳಗೆ ಚಂದ್ರಶಿಲೆ ಇರಬೇಕು. ಅದರ ಸುತ್ತಲು ಆ ಚಂದ್ರಶಿಲೆಗೆ ಉಷ್ಣತೆ ತಲುಪಿಸಿ ಅದನ್ನು ಬಿಸಿಮಾಡುವ ಕಂತಿ ಇರಬೇಕು ಎಂದು ತೀರ್ಮಾನಿಸಬಹುದು. ಲಿಂಗ ಒಂದು ಬಟ್ಟೆಯ ಚೀಲದಲ್ಲಿಟ್ಟು **24x7** ತಾಸು ಎದೆಯ ಮೇಲೆ ಧರಿಸಿ ಪ್ರತಿನಿತ್ಯ ಲಿಂಗಕ್ಕೆ ಸ್ನಾನ ಮಾಡಿಸಿ ಲಿಂಗೋದಕ ಅಥವಾ ತೀರ್ಥ ಕುಡಿಯುತ್ತೇವೆ. ಅದಕ್ಕಾಗಿ ಲಿಂಗ ತಯಾರಿಸುವ ವಸ್ತುಗಳಲ್ಲಿ ಯಾವುದೆ ವಸ್ತು ಶರೀರಕ್ಕೆ ಯಾವುದೇ ಪ್ರಕಾರದ ಹಾನಿ ಮಾಡದಂತಿರಬೇಕು. ಅದರಲ್ಲಿ **Heavy metals, minerals, poisonous substances, mercury, Anti-mony, magnet** ಇಂಥ ಲೋಹ ಮತ್ತು ಖನಿಜಗಳು ಅದರಲ್ಲಿ ಹಾಕಬಾರದು. ಅಷ್ಟೇ ಅಲ್ಲ ಇದರಲ್ಲಿ ಉಪಯೋಗ ಮಾಡುವ ಎಲ್ಲ ವಸ್ತುಗಳು ವೈದ್ಯಕೀಯ ದೃಷ್ಟಿಯಿಂದ ಔಷಧ ಗುಣಮಟ್ಟ ನಿಯಂತ್ರಣ ಪ್ರಾಧಿಕಾರದಿಂದ

ಶರೀರದ ಮೇಲೆ ಧರಿಸಲು ಅನುಮೋದನೆ ಪಡೆಯಲು ಯೋಗ್ಯವಾಗಿದ್ದ ವಸ್ತುಗಳನ್ನೆ ಉಪಯೋಗಿಸಬೇಕು. ಇದರ ಹಿನ್ನೆಲೆಯಲ್ಲಿ ಲಿಂಗ ತಯಾರಿಸಲು

೧. ಆಕಳ ಸೆಗಣಿ ಒಣಗಿಸಿ ಅದನ್ನು ಸುಟ್ಟು ತಯಾರಿಸಿದ ಭಸ್ಮ.

೨. ಊಟದ ಎಣ್ಣೆ ಅಥವಾ ತುಪ್ಪದಿಂದ ತಯಾರಿಸಿದ ಕಾಡಿಗೆ.

೩. ಸ್ವಲ್ಪ ಕೇರೆಣ್ಣೆ

೪. ಈ ವಸ್ತುಗಳನ್ನು ಗಟ್ಟಿಯಾಗಿ ಹಿಡಿದಿಡಲು ರಾಸಾಯನಿಕವಾಗಿ ತಟಸ್ಥ ಜಡವಸ್ತು ಮತ್ತು ಸ್ವಲ್ಪ ಬಿಳಿ ಅಂಟಿನ ಪುಡಿ.

೫. ಇವುಗಳ ಮಿಶ್ರಣದಿಂದ ತಯಾರಿಸಿದ ಸಂಯುಕ್ತಕದ ಮಧ್ಯದಲ್ಲಿ ಇಡಲು ಚಂದ್ರಶಿಲೆಗಳನ್ನು ಉಪಯೋಗಿಸಬಹುದು.

**೪. ಇಷ್ಟಲಿಂಗದ ಆಕಾರ:**

ಇಷ್ಟಲಿಂಗದ ಆಕಾರದ ಬಗ್ಗೆ ವಿವೇಚನೆ ಮಾಡಲು ಇಷ್ಟಲಿಂಗದ ಸ್ವರೂಪದ ಬಗ್ಗೆ ಶರಣರ ಅನುಭಾವದ ವಚನಗಳನ್ನು ಮುಂದಿಡಬೇಕಾಗುತ್ತದೆ

ಅಲ್ಲಮಪ್ರಭುಗಳು ಹೇಳುತ್ತಾರೆ–

"ಲಿಂಗವನರಿಯದೆ ಎನ್ನನ್ನರಿದಡೆಯು ಫಲವಿಲ್ಲ"ವೆಂದು ಮನುಷ್ಯರ ಜ್ಞಾನ ಸಂಪಾದನೆಯ ಪರಂಪರೆಗೆ ಲಿಂಗಜ್ಞಾನದ ಪಾರಮ್ಯದ ಆಯಾಮ ಜೋಡಿಸುತ್ತಾರೆ. ನಿಜ ಜ್ಞಾನವೆಂದರೆ, ಮಹಾಘನಲಿಂಗ ಪರಮಾತ್ಮ ಆ ಪರಮಾತ್ಮನೆ ಲಿಂಗವೆಂದು ಸಾರುತ್ತಾರೆ. ಗುಹಲ್ಲಮರು.

ಶ್ರೀ ಬಸವಣ್ಣನವರು "ನಿತ್ಯ ನಿರಂಜನ ಪರಂಜ್ಯೋತಿವಸ್ತು ಉಪದೇಶವ ಕೊಟ್ಟು ಗುರುವಾದ ಕರಸ್ಥಲಕ್ಕೆ ಬಂದು ಲಿಂಗವಾದ" ಎಂದು ಲಿಂಗವನ್ನು ಅನಂತ ವಿಸ್ತಾರದ ಕಾಲಾತೀತವಾದ ಪರಮ ಪ್ರಕಾಶದ ಜ್ಯೋತಿಯ ರೂಪದಲ್ಲಿ ಕಂಡಿದ್ದಾರೆ.

ಚೆನ್ನಬಸವಣ್ಣನವರು ಲಿಂಗದ ಸ್ವರೂಪವನ್ನು ವರ್ಣಿಸುತ್ತಾ–



'ಲಿ ಕಾರವೆ ಶೂನ್ಯ, ಬಿಂದುವೆ ಲೀಲೆ 'ಗ' ಕಾರವೆ ಚಿತ್ತು' ಎಂದಿದ್ದಾರೆ ಅರ್ಥಾತ ಲೀಲೆ ಮತ್ತು ಚಿತ್ತವನೊಳಗೊಂಡ ಶೂನ್ಯ ಸ್ವರೂಪವೆ ಲಿಂಗ.

ಶಿವಯೋಗಿ ಸಿದ್ಧರಾಮೇಶ್ವರರು ಲಿಂಗತ್ರಯಗಳ ಸ್ವರೂಪ ತಮ್ಮ ವಚನದಲ್ಲಿ ವರ್ಣಿಸಿದ್ದಾರೆ.

"ವಾದಬುದ್ಧಿಯ ಬಲ...........
ಅರಿವು ಜ್ಞಾನದ ಬಲ, ಅರಿವು ಸಜ್ಜನ ಸಹವಾಸದ ಬಲ
ಅರಿವು ಬಾಹ್ಯದಲ್ಲಿ ಇಷ್ಟಲಿಂಗ
ಅರಿವು ಅಂತರಂಗದಲ್ಲಿ ಪ್ರಾಣಲಿಂಗ
ಅರಿವು ಭಾವದಲ್ಲಿ ಆತ್ಮಲಿಂಗವೆಂದು"

ಸ.ವ.ಸಂ.೪ ಸಿದ್ಧರಾಮೇಶ್ವರ ೯೮೬

ಅರಿವಿನ ಕುರುಹೆ ಇಷ್ಟಲಿಂಗವಾಗಿದೆ ಎಂದಿದ್ದಾರೆ. ಅದಕ್ಕಾಗಿ ಇಷ್ಟಲಿಂಗ ಮಾಡುವವರು ಅದರ ಆಕಾರ ನಿರ್ಧರಿಸುವಲ್ಲಿ ಇಷ್ಟಲಿಂಗದ ಸ್ವರೂಪದ ವಿಷಯದಲ್ಲಿ ಶರಣರ ದರ್ಶನದ ನೋಟವನ್ನು ಲಕ್ಷ್ಯದಲ್ಲಿಡುವದು ಅವಶ್ಯಕವಿದೆ.

* ಅಲ್ಲಮಪ್ರಭುಗಳು ಲಿಂಗಕ್ಕೆ ನಿಜಜ್ಞಾನ
* ಬಸವಣ್ಣನವರು ನಿತ್ಯನಿರಂಜನ ಪರಮಜ್ಯೋತಿ
* ಚೆನ್ನಬಸವಣ್ಣನವರು ಲೀಲೆ ಮತ್ತು ಚಿತ್ತು ಇಂಬಿಟ್ಟುಕೊಂಡ ಶೂನ್ಯ
* ಶಿವಯೋಗಿ ಸಿದ್ಧರಾಮರು 'ಅರಿವು'

ಎಂದು ತಮ್ಮ ದರ್ಶನಾನುಭಾವ ವ್ಯಕ್ತಪಡಿಸಿದ್ದಾರೆ.

ಶರಣರ ಅನುಭಾವವನ್ನು ಸೂಕ್ಷ್ಮವಾಗಿ ವಿಶ್ಲೇಶಿಸಿ ಕಂಡರೆ ಇಷ್ಟಲಿಂಗ ಸಕಲ ಬ್ರಹ್ಮಾಂಡದ ಅನಂತವನ್ನು ಶಾಶ್ವತವಾಗಿ ವ್ಯಾಪಿಸಿದ ಸಕಲ ಕಾರಣಕಾರಿ ಮಹದರಿವಿನ ಅಥವಾ ಮಹಾಪ್ರಜ್ಞೆಯ ಸೂಕ್ಷ್ಮವಾದ ಪ್ರತಿರೂಪವೆ ಆಗಿದೆ ಎಂದು ತೀರ್ಮಾನಿಸಬಹುದು.

ಪ್ರಜ್ಞೆಯನ್ನು ಭೌತಿಕ ರೂಪದಲ್ಲಿ ಮಹಾನುಭಾವಿ ಶರಣ ದೇಹಿಕ ದೇವರುಗಳಿಗಲ್ಲದೆ ಅನ್ಯರು ಕಾಣಲು ಸಾಧ್ಯವಿಲ್ಲ ॥ "ಕೊಡನೊಳಗಣ ಚಂದ್ರ

ಹಲವರೊಳಗೆ ವರ್ತಿಸುವಂತೆ ನಿನ್ನವರ್ರೊಳಗೆ ನೀನಿಪ್ಪುದನು ನಿನ್ನವರಲ್ಲದೆ ಬಲ್ಲವರಾರೆ ಕಪಿಲಸಿದ್ಧ ಮಲ್ಲಿಕಾರ್ಜುನ" ॥ (ಶ್ರೀ ಸಿ. ದೇವರ ಸ. ಮಹಾ ವಚನಾಗಮ ವ.೨೦೪ ಪ್ರ ೫೮ ಪಿ.ಎಂ. ಗಿರಿರಾಜು)

ಪ್ರಜ್ಞ ಕಾಣಲು ಪ್ರಜ್ಞೆಯಾಗಬೇಕಾಗುತ್ತದೆ.
"ಲೋಕ ಹದಿನಾಲ್ಕನು ಅನೇಕ ದೈವಂಗಳನು
ಒಂದಾಕಾರ ಕಿಂಚಿತನು ಹುಟ್ಟಿಸಿದನು
ಇಂತಪ್ಪ ಘನಲಿಂಗ ತಂದು ವಸಮಾಡಿದ
ನಿಶ್ಚಿಂತ ವಯನೈ ಗುರು ಯೋಗಿನಾಥ"

(ಶ್ರಿ.ಸಿ.ಮಹಾವಚನಾಗಮ ವ.೭೩೦ ಪು.೧೫೮ ಪಿ.ಎಂ. ಗಿರಿರಾಜು)

ಸಕಲ ಬ್ರಮ್ಮಾಂಡದ ಏಕಾಕಾರವಾದ ಮಹಾಪ್ರಜ್ಞೆಯ ನಿರಾಕಾರ ರೂಪ ಘನಲಿಂಗವನ್ನು ರೂಪಿಸುವದು ಹೇಗೆ?

"ರೂಪಿಲ್ಲದಾತನ ರೂಪಿಸಿ ಹಿಡಿವೆನು"

(ಶ್ರೀ ಸಿ.ಮಹಾ ವಚನಾಗಮ ವ.೭, ಪು–೪, ಪಿ.ಎಂ.ಗಿರಿರಾಜು)

ಎಂಬ ಶರಣರು ಕೊಟ್ಟ ಭರವಸೆಯಂತೆ"

ಬೆಂಜಾಮಿನ ಬೆಟಸ್(**Benjamin Betts**) ಎಂಬ (**Symbology and the morphogenetic procedure**) ವಾಸ್ತುಶಿಲ್ಪಿ ಮತ್ತು ಸಂಕೇತ ಶಾಸ್ತ್ರಜ್ಞನು ಪ್ರಜ್ಞೆನೆಯ ಗಣಿತದ ಮಾದರಿಯನ್ನು ನಿರ್ಮಿಸಿದ್ದಾನೆ.

ನಿಸ್ಸಂಶಯವಾಗಿ ಪ್ರಜ್ಞೆ ಮಿಗಿಲಾಗಿ ವೈಶ್ವಿಕ ಪ್ರಜ್ಞೆ ಆಕಾರ ಅಥವಾ ರೂಪವನ್ನು ಹೊಂದಿರುವದಿಲ್ಲ ಆದರು ಕೆಲವು ವಿಜ್ಞಾನಿಗಳು ಮಾನವ ಪ್ರಜ್ಞೆಯನ್ನು ಅದರ ವಿಭಿನ್ನ ಸ್ಥಿತಿಯಲ್ಲಿ ಚಿತ್ರಿಸಿದ್ದಾರೆ. ಅವರು ಜಾಗೃತ ಅವಸ್ಥೆಯಲ್ಲಿದ್ದ ಮನಸ್ಸಿನ ದೃಶೀಕರಣದ ಸಮಸ್ಯೆಗಳಿಗೆ ಗಣಿತವನ್ನು ಅನ್ವಯಿಸಿ ಗಮನಾರ್ಹವಾದ ಚಿತ್ರಗಳನ್ನು ನಿರ್ಮಿಸಿದರು. ಮಾನವ ಪ್ರಜ್ಞೆಯನ್ನು ನಾವು ನೇರವಾಗಿ ಅಧ್ಯಯನ ಮಾಡಬಹುದಾದ ಏಕೈಕ ವಿಷಯವಾಗಿದೆ. ಜ್ಞಾನದ ಇತರ ಎಲ್ಲಾ ವಸ್ತುಗಳನ್ನು ಅಗತ್ಯವಾಗಿ ಪ್ರಜ್ಞೆಯ ಮೂಲಕವೆ ಗ್ರಹಿಸಬೇಕಾಗುತ್ತದೆ



ಎಂದು ವಿಜ್ಞಾನಿಗಳು ನಂಬುತ್ತಾರೆ.

ಇಲ್ಲಿ ಕೆಳಗೆ ತೋರಿಸಿರುವ ಚಿತ್ರವು ಬೆಂಜಾಮಿನ ಬೆಟ್ಸರವರು ಚಿತ್ರಿಸಿದ ಮನುಷ್ಯ ಪ್ರಜ್ಞೆಯ ಗಣಿತದ ಮಾದರಿಯಾಗಿದೆ.



**(Mathematical model of consciousness)**

ಮೇಲ್ನೋಟಕ್ಕೆ ಚಿತ್ರವು ಅಮೂರ್ತ ಎಂದು ತೋರುತ್ತದೆ ಆದರೆ ಅದರ ಬಾಹ್ಯರೇಖೆಗಳಿಗೂ ಮತ್ತು ವಕ್ರಾಕೃತಿಗಳನ್ನು ಎಚ್ಚರಿಕೆಯಿಂದ ನೋಡುತ್ತ ಸಾಕಷ್ಟು ಸಮಯವನ್ನು ವ್ಯಯಿಸಿದರೆ, ಮೆಟಾಫಿಜಿಸಿಸ್ಟರು ಹೇಗೆ ಪ್ರಜ್ಞೆಯು ಒಂದು ಸ್ಥಿತಿಯಿಂದ ಪರಿಪೂರ್ಣವಾದ ಅರ್ಥವನ್ನು ನೀಡುತ್ತಾರೆ ಎಂದು ಉಹಿಸಲು ಸಾಧ್ಯವಿದೆ. ಪ್ರಜ್ಞೆ ಒಂದು ಸ್ಥಿತಿಯಲ್ಲಿ ಆಳವಾದ ಬಟ್ಟಲಿನಂತೆ ಮತ್ತು ಇನ್ನೊಂದು ಸ್ಥಿತಿಯಲ್ಲಿ ಕೊಳವೆಯಂತೆ ವರ್ತಿಸುತ್ತದೆ.

ನಮಗೆ ಅತ್ಯಂತ ಆಸಕ್ತಿದಾಯಕ ಸಂಗತಿಯೆಂದರೆ ಚಿತ್ರವನ್ನು ನೋಡಿ! ಪ್ರಜ್ಞೆಯ ತಳರಹಿತ ಅಂತ್ಯವಿಲ್ಲದ ಬಟ್ಟಲು ಅಥವಾ ಕೊಳವೆಗಳ ಮುಖದಲ್ಲಿ ಲಿಂಗಾಯತರು ಶತಶತಮಾನಗಳಿಂದ ಪ್ರಾರ್ಥಿಸುವ ಇಷ್ಟಲಿಂಗವನ್ನು ಹೋಲುವ ಮೂರು ಆಕಾರಗಳಿಂದ ಕಂಡುಬರುತ್ತವೆ. ಇವುಗಳಲ್ಲಿ ಎರಡು ಆಕಾರಗಳು ಶತಪ್ರತಿಶತ ಇಷ್ಟಲಿಂಗಕ್ಕೆ ಹೋಲುತ್ತವೆ. ಉಳಿದ ಒಂದು ಆಕಾರ ಹೆಚ್ಚು ಕಡಿಮೆ ಹಾಗೆಯೇ ಇದೆ. ನೆನಪಿರಲಿ ಪ್ರಜ್ಞೆ ಎಂದರೆ ಶರಣರು ಹೇಳುವ ಅರಿವು. ಇಷ್ಟಲಿಂಗ ಅರಿವಿನ ಕುರುಹು.

ಸ್ಪಷ್ಟವಾಗಿ ಹೇಳುವುದಾದರೆ ಇಷ್ಟಲಿಂಗವು ಸ್ವಯಂದ ವಾಸ್ತವದಲ್ಲಿ ಅಥವಾ

ಮಹದರಿವಿನಲ್ಲಿ ಹೋಗುವ ಪ್ರವೇಶ ದ್ವಾರದ ಬಾಗಿಲು ಇದೆ. ಅದನ್ನು ತೆರೆದರೆ ಮಾತ್ರ ಮಹಾಘನಲಿಂಗ ಪರಮಾತ್ಮನ ಜೊತೆಗೆ ಸಾಮರಸ್ಯ ಅಥವಾ ಅಸ್ತಿತ್ವದ ನಿಜ ಸತ್ಯದ ಜೊತೆ ಸಾಮರಸ್ಯ ಸಾಧ್ಯವಿದೆ. ಅದಕ್ಕಾಗಿಯೇ ಗುಹಲ್ಲಮರು "ಲಿಂಗವನರಿಯದೆ ಎನನ್ನರಿದರೆಯು ಫಲವಿಲ್ಲ" ಎಂದಿದ್ದಾರೆ.

ಇಷ್ಟಲಿಂಗದ ಆಕಾರ ವೈಜ್ಞಾನಿಕ ಮತ್ತು ಗಣಿತಶಾಸ್ತ್ರದ ಆಧಾರದ ಮೇಲೆ ಮಾನವ ಪ್ರಜ್ಞೆ ಅಥವಾ ಅರಿವನ್ನು ಪ್ರತಿನಿಧಿಸುತ್ತದೆ. ಆದರೆ ಸಾಮಾನ್ಯವಾಗಿ ಜನರು ಇಷ್ಟಲಿಂಗ ಆಕಾರದಲ್ಲಿ ಅಂಡಾಕಾರವಾಗಿದ್ದು ಅದು ವಿಶ್ವದಾಕಾರದ ಗೋಲಕ ಪ್ರತಿನಿಧಿಸುತ್ತದೆಂದು ನಂಬಿದ್ದಾರೆ. ಈ ಧಾರಣೆ ವೈಜ್ಞಾನಿಕ ಸತ್ಯಕ್ಕೆ ಹಿಡಿದಿಲ್ಲ, ವಾಸ್ತವದಲ್ಲಿ ವಿಶ್ವವು ಅಂಡಾಕಾರವಾಗಿರದೆ ಸಮತಟ್ಟಾಗಿದೆ ಎಂದು ವೈಜ್ಞಾನಿಕ ಪುರಾವೆಗಳಿಂದ ಸಿದ್ಧವಾಗಿದೆ.

ಐನ್‌ಸ್ಟೈನ್‌ನ ಸಾಪೇಕ್ಷತಾ ಸಿದ್ಧಾಂತದ ಪ್ರಕಾರ ಬಾಹ್ಯಾಕಾಶವನ್ನು ದ್ರವ್ಯರಾಶಿಯಿಂದ ವಕ್ರಗೊಳಿಸಬಹುದು. ಈ ಕಾರಣದಿಂದಾಗಿ ಬ್ರಹ್ಮಾಂಡದ ಸಾಂದ್ರತೆ(**Density**) ಬಾಹ್ಯಾಕಾಶದ ಆಕಾರ ನಿರ್ಧರಿಸುತ್ತದೆ. ಸಾಂದ್ರತೆ ದ್ರವ್ಯರಾಶಿಯನ್ನು ಪರಿಮಾಣದಿಂದ ಭಾಗಿಸಿದಾಗ ದೊರಕುತ್ತದೆ.(**D=m/v**) ಬ್ರಹ್ಮಾಂಡದ ನಿರ್ಣಾಯಕ ಸಾಂದ್ರತೆಯು ಹಬಲ್ ಸ್ಥಿರಾಂಕದ ವರ್ಗಕ್ಕೆ ಅನುಪಾತದಲ್ಲಿರುತ್ತದೆ. ಹಬಲ್‌ಸ್ಥಿರಾಂಕವನ್ನು ಬ್ರಹ್ಮಾಂಡದ ವಿಸ್ತರಣೆಯನ್ನು ಅಳೆಯಲು ಬಳಸಲಾಗುತ್ತದೆ.

ಸಾಮಾನ್ಯರ ಭಾಷೆಯಲ್ಲಿ ಹೇಳುವದಾದರೆ ಬ್ರಹ್ಮಾಂಡವು ಸತತವಾಗಿ ವಿಸ್ತಾರವಾಗುತ್ತಿದೆ. ಆದರೆ ಅದರಲ್ಲಿ ದ್ರವ್ಯರಾಶಿ ಸ್ಥಿರವಾಗಿರುವದರಿಂದ ಅದರ ಸಾಂದ್ರತೆ ಕಡಿಮೆಯಾಗುತ್ತದೆ. ಇದರ ಪರಿಣಾಮದಿಂದ ಬಾಹ್ಯಾಕಾಶ ಅರ್ಥಾತ ವಿಶ್ವವು ಅಂಡಾಕಾರವಾಗಿರದೆ ಸಮತಟ್ಟಾಗಿದೆ. ಇಷ್ಟಲಿಂಗವು ಆಕಾರದಲ್ಲಿ ವಿಶ್ವ ಪ್ರತಿನಿಧಿಸುತ್ತಿದ್ದರೆ ಅದು ಅಂಡಾಕಾರವಾಗಿರದೆ ಸಮತಟ್ಟಾಗಿರಬೇಕಾಗಿತ್ತು. ಅದಕ್ಕಾಗಿ ಇಷ್ಟಲಿಂಗದ ಗೋಲಾಕಾರದಲ್ಲಿ ವಿಶ್ವದ ಗೋಲಕ ಪ್ರತಿನಿಧಿಸುತ್ತದೆ ಎಂಬ ನಂಬಿಕೆ ಅವೈಜ್ಞಾನಿಕ ವಾದ ನಂಬಿಕೆಯಾಗಿದೆ.

ಇಷ್ಟಲಿಂಗ ಆಕಾರದಲ್ಲಿ ಪರಿಪೂರ್ಣವಾಗಿ ಮಾನವನ ಪ್ರಜ್ಞೆ ಅಥವಾ ಅರಿವನ್ನು ಪ್ರತಿನಿಧಿಸುತ್ತದೆ ಅಥವಾ ಅರಿವಿನ ಬಾಹ್ಯಾಭಿವ್ಯಕ್ತಿಯಾಗಿದೆ.



## ಇಷ್ಟಲಿಂಗದ ಆಯಾಮಗಳು ಅಥವಾ ಅಳತೆಗಳು:



**Model of Universe-NASA**

ಇಷ್ಟಲಿಂಗದ ಗಾತ್ರದ ವಿಷಯದಲ್ಲಿ ಶರಣರ ವಚನಗಳಲ್ಲಿ, ಸಂಬಂಧಪಟ್ಟ ಸಾಹಿತ್ಯದಲ್ಲಿ ಗಮನಾರ್ಹ ಉಲ್ಲೇಖಗಳು ಕಂಡು ಬಂದಿಲ್ಲ. ಅನೇಕ ಪುರಾತನ ಶರಣರ ಶಿಲಾಮೂರ್ತಿ ಶಿಲ್ಪಗಳಲ್ಲಿ, ಗ್ರಂಥಗಳಲ್ಲಿಯ ಚಿತ್ರಗಳಲ್ಲಿ ಗೋಡೆಯ ಮೇಲಿನ ವರ್ಣಚಿತ್ರಗಳಲ್ಲಿ ಶರಣರು ಇಷ್ಟಲಿಂಗಾರ್ಚನೆ ಮಾಡುತ್ತಿರುವ ಭಂಗಿಯಲ್ಲಿ ಕುಳಿತು ಎಡಗೈಯ ಅಂಗೈಯಲ್ಲಿ ಇಷ್ಟಲಿಂಗ ಹಿಡಿದು ಅದನ್ನು ಅನಿಮಿಷ ದೃಷ್ಟಿ ಇಟ್ಟು ನೋಡುತ್ತಿರುವದು ತೋರಿಸಲಾಗಿದೆ. ಆದರೆ ಅವುಗಳಲ್ಲಿ ತೋರಿಸಿದ ಇಷ್ಟಲಿಂಗದ ಗಾತ್ರಗಳು ಬೇರೆ ಬೇರೆಯಾಗಿದ್ದುದ್ದು ನಿದರ್ಶನಕ್ಕೆ ಬರುತ್ತದೆ. ಅದಕ್ಕಾಗಿ ನಾವು ಧರಿಸುವ ಇಷ್ಟಲಿಂಗದ ಆಯಾಮ ಅಥವಾ ಅಳತೆಗಳೇನಿರಬೇಕು? ಈ ಪ್ರಶ್ನೆ ಉದ್ಭವಿಸುತ್ತದೆ. ಈ ಸಂದರ್ಭದಲ್ಲಿ ಶ್ರೀ ಬಸವಣ್ಣನವರ ಒಂದು ವಚನ ನೋಡಬಹುದು.

ಆತ್ಮಲಿಂಗ ಪರಮಾತ್ಮ ಜಂಗಮ
ತನುಮಧ್ಯೆ ಪ್ರಸಾದವಾಯಿತು
ನಿಶ್ಚಿಂತ ನಿವಾಸವಾಯಿತು
ಕೂಡಲಸಂಗನ ಶರಣರ ಸಂಗದಿಂದ
ನಿಶ್ಚಿಂತ ನಿವಾಸವಾಯಿತ್ತು.
ಸ.ವ.ಸ.೧ ಬಸವಣ್ಣ ೮೩೮

ಇದರಿಂದ ಆತ್ಮವೆ ಲಿಂಗವಾಗಿದೆ ಎಂದು ಸಾರುತ್ತಾರೆ ಬಸವಣ್ಣ. ಆದರೆ ಆತ್ಮ ಸಮಯ, ಸ್ಥಳ ಮತ್ತು ವಸ್ತು ವಿರಹಿತವಾಗಿದೆ. ಅದಕ್ಕಾಗಿ ಅದರ ಗಾತ್ರಗಳು ನಿರ್ಧರಿಸುವದು ಹೇಗೆ,

ಮೂಲದಲ್ಲಿ ಶರಣರ ತತ್ವಜ್ಞಾನದಲ್ಲಿ ಆತ್ಮದ ಅಸ್ತಿತ್ವ ಸಂಧಿಗ್ಧವಾಗಿದೆ ಅಥವಾ ಪ್ರಶ್ನಾರ್ಥಕವಾಗಿದೆ.

ಆತ್ಮನೆ ಲಿಂಗವೆಂಬರು, ಆತ್ಮನ ದೇಹರಹಿತವಾಗಿ ಕಾಬವರುಂಟೆ? ಪ್ರಾಣವೆ ಲಿಂಗವೆಂಬರು

ಪ್ರಾಣವನು ಕಾಯಬಿಟ್ಟು ಬೇರೆ ಕಾಣಬಹುದೆ?
ಕಂಡೆಹೆನೆಂದಡೆ ಅದುನಿರವಯ ನಿರಾಕಾರವಾದುದು
ಭಾವಕ್ಕೆ ಬಾರದುದ ಪೂಜಿಸಬಹುದೆ?
ಅದು ಕಾರಣ ಕಾಯದ ಕರಸ್ಥಲದಲ್ಲಿ ಕ್ರಿಯಾಲಿಂಗವಿಡಿದು ನೋಡಲು
ಪ್ರಾಣ ಆತ್ಮನೆಂಬವು ಬೇರಿಲ್ಲ
ಇದು ಕಾರಣ, ಇಷ್ಟವ ಬಿಟ್ಟು ಬಟ್ಟಬಯಲೆ ವಸ್ತುವೆಂಬ
ಮಿಟ್ಟಿಯ ಭಂಡರ ನಮ್ಮ ಕೂಡಲಸಂಗನ ಶರಣರು ಮೆಚ್ಚರು

ಸ.ವ.ಸಂ.೧ ಬಸವಣ್ಣ ೧೦೩೮

ಈ ವಚನದಲ್ಲಿ ಶ್ರೀ ಬಸವರು ಪ್ರಾಣವೆ ಆತ್ಮವಿದೆ ಎನ್ನುತ್ತಾರೆ. ಅಂದರೆ ಪ್ರಾಣವೇ ಲಿಂಗವಾಯಿತು, ಪ್ರಾಣಕೂಡ ನಿರಾಕಾರವಾಗಿದೆ. ಅದರ ಗಾತ್ರಗಳನ್ನು ಗುರುತಿಸಲು ಸಾಧ್ಯವಿಲ್ಲ, ಅದಕ್ಕಾಗಿ ಧರಿಸುವ ಇಷ್ಟಲಿಂಗದ ಗಾತ್ರದ ಬಗ್ಗೆ ಸ್ಪಷ್ಟತೆ ಕಂಡುಬರುವದಿಲ್ಲ.

ಶ್ರೀ ಬಸವಣ್ಣನವರೆ ತಮ್ಮ ಇನ್ನೊಂದು ವಚನದಲ್ಲಿ ಇಷ್ಟಲಿಂಗದ ಗಾತ್ರ ವರ್ಣಿಸುತ್ತಾರೆ

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ........

ಸಮಗ್ರ ವ.ಸಂ.೧ ಬಸವಣ್ಣ ೭೪೪

ಇಲ್ಲಿ ಅನಂತ ವಿಸ್ತಾರದ ಲಿಂಗದ ಮಾತಿದೆ. ಇದೊಂದು ಆಧ್ಯಾತ್ಮಿಕ ಅನುಭೂತಿಯಾಗಿದೆ.

ಮಗ್ಗೆಯ ಮಾಯಿದೇವರು–

"ಅಂತರಸಾಕ್ಷಿ ಚಿದ್ಘನ ಪರದ್ವಯಾ



ಲಿಂಗವನಾಂದೇಶಿಕನು ಚಿಂತಿಸಿ ತಂದು
ಬಾಹ್ಯ ಕರುಣಕುಪದೇಶ ನೊಳ್ದು
ಮಾಡೆಮಾನೆಂತಿರುತಿರ್ದು ದಂತುಭಯಸಂಗ
ಶರೀರ ದೊಳೈಕ್ಯಮಾಗಿ ವಿಶ್ರಾಂತಿಯಾ
ನೆಯದಿದಲ್ಲಿ ಬಳಿಕೆನನ ಬರ್ಪುದದಮಶಿವಧವ"

ಇವರ ಲಿಂಗ ಸಾಕ್ಷಾತ್ಕಾರದ ವಚನದಲ್ಲಿಯೂ ಭೌತಿಕ ಲಿಂಗದ ಗಾತ್ರದ ವರ್ಣನೆ ಇಲ್ಲ.

ಸ್ವಭಾವತಃ ಇಷ್ಟಲಿಂಗವು ಭೌತಿಕ, ಬೌದ್ಧಿಕ ಮತ್ತು ಅಮೂರ್ತವಾಗಿದೆ. ಸಂಪೂರ್ಣ ವಾಸ್ತವ ಅಥವಾ ಶೂನ್ಯಕೆ ಚಿರಂತನ ಸಾಕ್ಷಿಯಾಗಿ ಹೃದಯ ದಲ್ಲಿರುವ ವಸ್ತುವೆ ಲಿಂಗವಾಗಿದ್ದು ಇದನ್ನೆ ಶ್ರೀ ಗುರು ಬಸವಣ್ಣನವರು ಕರುಣೆಯಿಂದ ಮನುಜರ ಇಂದ್ರಿಯ ಗ್ರಹಿಕೆಗೆ ಬರುವ ಇಷ್ಟಲಿಂಗವಾಗಿ ಪ್ರಕಟಿಸಿದ್ದಾರೆ. ಇಷ್ಟಲಿಂಗಯೋಗ ಸಾಧನೆಯಿಂದ ಅಂತರಾತ್ಮ ಮತ್ತು ವಸ್ತು ಪರಸ್ಪರ ಗ್ರಹಿಸಿ ಮಹಾಘನಲಿಂಗದ ಪ್ರಜ್ಞೆಯಲ್ಲಿ ಆನಂದದಿಂದ ಸಮರಸ ಹೊಂದಿ ಶಾಶ್ವತ ವಿಶ್ರಾಂತಿ ಪಡೆದುಕೊಳ್ಳುತ್ತದೆ. ಇಷ್ಟಲಿಂಗದ ಗಾತ್ರದ ಉಲ್ಲೇಖವಿರುವ ವಚನಗಳು ಮತ್ತು ಇತರ ಪುರಾವೆಗಳ ಅಭಾವದಿಂದಾಗಿ ಶ್ರೀ ಬಸವಣ್ಣನವರ "ಆತ್ಮಲಿಂಗ ಪರಮಾತ್ಮ ಜಂಗಮ"ವೆಂಬುದನ್ನೆ ಇಷ್ಟಲಿಂಗದ ಗಾತ್ರದ ಅಳತೆಗಳನ್ನು ನಿರ್ಧರಿಸಲು ಉಪಯೋಗಿಸಿಕೊಳ್ಳಬೇಕಾಗುತ್ತದೆ.

ಕಥಾ ಉಪನಿಷತ್ತು ಆತ್ಮದ ಗಾತ್ರವನ್ನು ವ್ಯಾಖ್ಯಾನಿಸುತ್ತದೆ. "ಅಂಗುಷ್ಠ ಮಾತ್ರಃ ಪುರುಷೋಂತರಾತ್ಮಾ ಸದಾ ಜನನಮ ಹೃದಯೇ ಸನ್ನಿವಿಷ್ಠ" ಮನಸ್ಸು ಬುದ್ಧಿ ಮತ್ತು ಭಾವನೆಯಿಂದ ಗುರುತಿಸಬಹುದಾದ ವ್ಯಕ್ತಿಯ ಎಡಗೈ ಹೆಬ್ಬರಿಳಿನ ಗಾತ್ರದಷ್ಟು ಆತನ ಅಂತರಾತ್ಮವಾಗಿರುತ್ತದೆ. ಅದು ಸದಾಕಾಲಕ್ಕೆ ವ್ಯಕ್ತಿಯ ಹೃದಯದಲ್ಲಿ ವಾಸವಾಗಿರುತ್ತದೆ. ಯಾರು ಇದನ್ನು ಅರಿದಿರುತ್ತಾರೆಯೋ ಅವರು ಅಮರರಾಗುತ್ತಾರೆ.

ಮನುಷ್ಯನ ಎಡಗೈ ಹೆಬ್ಬೆರಳನ್ನು ನೆಟ್ಟಗೆ ಹಿಡಿದು ಅಳತೆ ಮಾಡಿದಾಗ ಸಾಧಾರಣ ೬ ಸೆಂ.ಮೀ. ಇದ್ದುದ್ದು ಕಂಡುಬರುತ್ತದೆ. ಅಂದರೆ ನಿಂತಿರುವ ವ್ಯಕ್ತಿಯ ಆತ್ಮದ ಎತ್ತರ ೬ ಸೆಂ.ಮೀ. ಆಗುತ್ತದೆ. ಆದರೆ ಗುರು ಹಿರಿಯರ

ಅನುಭಾವಿಗಳ ಅಭಿಪ್ರಾಯದಲ್ಲಿ ಮತ್ತು ಶಿಲ್ಪ, ಚಿತ್ರ, ಮೂರ್ತಿಗಳಲ್ಲಿಯೂ ಇಷ್ಟು ದೊಡ್ಡ ಎತ್ತರದ ಇಷ್ಟಲಿಂಗ ಕಂಡುಬರುವದಿಲ್ಲ, ಇದಕ್ಕೆ ಕಾರಣವೇನೆಂದರೆ ಅಪವಾದಗಳು ಬಿಟ್ಟರೆ ಇಷ್ಟಲಿಂಗಯೋಗ 'ಪಶ್ಚಿಮ ಪದ್ಮಾಸನ'ದಲ್ಲಿ ಕುಳಿತು ಮಾಡಲಾಗುತ್ತದೆ.

ಮನುಷ್ಯರ ಕುಳಿತ ಎತ್ತರ ಮತ್ತು ನಿಂತ ಎತ್ತರದ ಅನುಪಾದ ೦.೫೧ ರಿಂದ ೦.೫೩೯ ಇರುತ್ತದೆ. ಮನುಷ್ಯರ ಕುಳಿತ ಎತ್ತರ ಕೋಕ್ಸಿಕ್ಸ್ ಮೂಳೆ(ಆಧಾರದ ಎಲುಬು)ಯಿಂದ ತಾಳಿಗೆಯವರೆಗೆ ಅಳಿಯಲಾಗುತ್ತದೆ. ಕುಳಿತ ಭಂಗಿಯಲ್ಲಿ ಆತ್ಮವು ಶರೀರದ ಭಂಗಿಯನ್ನೆ ಧರಿಸುತ್ತದೆ ಎಂದು ಗ್ರಹಿಸಿದರೆ ಇಷ್ಟಲಿಂಗದ ಎತ್ತರ ಸಾಧಾರಣ ೬ ಸೆಂ.ಮೀx೦.೫೧೮ ಸೆಂ.ಮೀ. ಆಗುತ್ತದೆ. ೩.೧೦೮ ಸೆಂ.ಮೀ. ಒಂದು ಮಾತು ಖಚಿತವಾಗಿ ತಿಳಿದಿರಬೇಕು. ಧರಿಸುವ ಇಷ್ಟಲಿಂಗದ ಎತ್ತರ ಆ ವ್ಯಕ್ತಿಯ ಎಡ ಅಂಗುಷ್ಠದ ಉದ್ದದ ಅರ್ಧದಷ್ಟು ಅಥವಾ ಸ್ವಲ್ಪ ಕಡಿಮೆ ಇರಬೇಕು.

ಇನ್ನು ಪ್ರಶ್ನೆ? ತಳದಲ್ಲಿ ಲಿಂಗದ ಸುತ್ತಳತೆ ಮತ್ತು ಅದರ ವ್ಯಾಸ ಎಷ್ಟಿರಬೇಕು? ಪುರುಷರ ಎಡಗೈ ಅಂಗುಷ್ಠದ ಸುತ್ತಳತೆ ಸುಮಾರು ೭. ಸೆಂ.ಮೀ. ಇದ್ದುದ್ದು ಕಂಡುಬರುತ್ತದೆ. ಹೆಣ್ಣುಮಕ್ಕಳಲ್ಲಿ ಸ್ವಲ್ಪ ಕಡಿಮೆ. ತಳದಲ್ಲಿ ಲಿಂಗದ ಸುತ್ತಳತೆ ೭ ಸೆಂ.ಮೀ. ಇರುತ್ತದೆ. ಅದರ ವ್ಯಾಸ:




= ಸುತ್ತಳತೆ

= ೨೨/೭

= ವ್ಯಾಸ

ಸುತ್ತಳತೆ=೭ ಸೆಂ.ಮೀ.

ಅದಕ್ಕಾಗಿ ೭=೨೨/೭

ತಳದಲ್ಲಿ ಲಿಂಗದ ವ್ಯಾಸ ೨.೨೨ ಸೆಂ.ಮೀ.

ಲಿಂಗದ ಎತ್ತರ ೩.೧೦೮ ಸೆಂ.ಮೀ. ಮತ್ತು ಅದರ ವ್ಯಾಸ ೨.೨೨ ಸೆಂ.ಮೀ ತಳದಲ್ಲಿ ಅದರ ಸುತ್ತಳತೆ



೭ ಸೆಂ.ಮೀ. ಈ ಬಿಂದುಗಳನ್ನು ಹಿಡಿದು ಅರ್ಧ ಅಂಡಾಕಾರದ ಲಿಂಗ ತಯಾರಿಸಬೇಕು. ಈ ಅಳತೆಗಳು ವಯಸ್ಕ ಪುರುಷರಿಗೆ ಲಾಗು ಇವೆ. ಮಕ್ಕಳಿಗೆ ಹಿರಿಯರಿಗೆ, ಹೆಣ್ಣುಮಕ್ಕಳಲ್ಲಿ ಈ ಅಳತೆಗಳು ಅವರವರ ಅನುಪಾತದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತವೆ.

ಇಷ್ಟಲಿಂಗವು ಅತೀಂದ್ರಿಯ ಅಂತರಿಕ ಪ್ರಜ್ಞಾಪ್ರಕಾಶದ ಬಾಹ್ಯ ಅಭಿವ್ಯಕ್ತಿಯಾಗಿದೆ ಮತ್ತು ಅತೀಂದ್ರಿಯ ಅಂತರಿಕ ಪ್ರಕಾಶವು ಬ್ರಹ್ಮಾಂಡ ವ್ಯಾಪ್ತ ಮಹಾಪ್ರಕಾಶದ ತದ್ರೂಪವೆ ಆಗಿದ್ದ ಕಾರಣ ಇಷ್ಟಲಿಂಗದ ಆಕಾರ ವಿಶ್ವದಾಕಾರವಾಗುತ್ತದೆ ಮತ್ತು ಅದು ವಿಶ್ವದಂತೆ ಸಮನಾಂತರ ಪ್ರಜ್ಞಾ ಪ್ರಕಾಶ ಕಿರಣಗಳಿಂದ ತುಂಬಿರುತ್ತದೆ. ಶ್ರೀ ಬಸವರು ನುಡಿದಂತೆ "ಎತ್ತ ನೋಡಿದರತ್ತ ನೀನೆ ದೇವಾ" ಸಂಪೂರ್ಣ ವಿಶ್ವವು ಕೂಡಲ ಸಂಗಮದೇವ ಅಥವಾ ಲಿಂಗದಿಂದ ತುಂಬಿದೆ. ಇಷ್ಟಲಿಂಗದಾಕಾರವು ಬ್ರಹ್ಮಾಂಡವನ್ನು ಹೋಲುತ್ತದೆ ಎಂಬುದು ಅವೈಜ್ಞಾನಿಕ ಕಲ್ಪನೆಯಾಗಿದೆ. ಪ್ರಸ್ತುತ ಬ್ರಹ್ಮಾಂಡದ ಪ್ರಮಾಣಿತ ಮಾದರಿಯನ್ನು ಆರಂಭಿಕ ಬ್ರಹ್ಮಾಂಡದ ಉಬ್ಬರದ ಮಾದರಿ ಎಂದು ಪರಿಗಣಿಸಲಾಗಿದೆ. ಈ ಮಾದರಿಯೂ ಬಿಗಬ್ಯಾಂಗ್ ಲ್ಯಾಂಬ್ಡಾ ಸಿ.ಎಮ್.ಡಿ ಮಾದರಿಗೆ ಅವಕಾಶ ಕಲ್ಪಿಸುತ್ತದೆ. ಆದರೂ ಅದು ಕೂಡ ಆಕಾರದಲ್ಲಿ ಸಮತಟ್ಟಾಗಿದೆ.

ಅಮೇರಿಕಾದ **NASA** ಸಂಸ್ಥೆಯ ಮತ್ತು ಹಬಲ್ ಟೆಲೆಸ್ಕೋಪದಿಂದಾದ ಖಗೋಳ ಸಂಶೋಧನೆಗಳು ವಿಶ್ವವು ಅಮಿತೀಯವಾಗಿ ಸಮತಟ್ಟಾಗಿದೆ ಎಂದು ಸಿದ್ಧ ಪಡಿಸಿವೆ. ಅದಕ್ಕಾಗಿ ಇಷ್ಟಲಿಂಗದ ಆಕಾರ ವಿಶ್ವದ ಆಕಾರವಾಗಿದೆ ಎಂಬುದು ಅವೈಜ್ಞಾನಿಕವಾಗಿದೆ. ಆದರೆ ಇಷ್ಟಲಿಂಗ ಆಕಾರದಲ್ಲಿ ಬೆಂಜಾಮಿನ ಬೆಟ್ಸ್(**Benjamin Betts**) ಎಂಬ ವಿಜ್ಞಾನಿ ತೆಗೆದ ಮನುಷ್ಯ ಪ್ರಜ್ಞೆಯ ಗಣಿತದ ಗಣತೀಯ ಮಾದರಿಯ ಚಿತ್ರಕ್ಕೆ ಪರಿಪೂರ್ಣವಾಗಿ ಹೋಲುತ್ತದೆ

ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಲಿಂಗ ಅರಿವು (**Conscious-ness**) ಆಗಿದೆ ಎಂದು ಸಾರಿದ್ದಾರೆ. ಅದಕ್ಕಾಗಿ ಇಷ್ಟಲಿಂಗದ ಆಕಾರ ಮತ್ತು ಗಾತ್ರ ಅರಿವಿನ ಗಣತೀಯ ಮಾದರಿಯಿಂದ ತೆಗೆಯಬೇಕು.

ಇಷ್ಟಲಿಂಗದ ಗಣತಿಯ ನಮೂನೆಯ ತಳ ಸಪಾಟವಾಗಿದ್ದು ಅದರ

ವ್ಯಾಸ ಸಾಧಾರಣ ೪.೦೦ ಸೆಂ.ಮೀ ಮಧ್ಯದಲ್ಲಿ ಅದರ ಎತ್ತರ ೩.೫ ಸೆಂ.ಮೀ.

ತಳದಿಂದ ೧ ಸೆಂ.ಮೀ ಎತ್ತರದಲ್ಲಿ ಅದರ ವ್ಯಾಸ ೪.೨ ಸೆಂ.ಮೀ. ತಳದಿಂದ ೨ ಸೆಂ.ಮೀ. ಎತ್ತರದಲ್ಲಿ ೪.೧ ಸೆಂ.ಮೀ.

ಹೀಗೆ ಸಪಾಟ ತಳದ ಮೇಲೆ ಅಂಡದ ತರಹದ ೩.೫ ಸೆಂ.ಮೀ. ಎತ್ತರದ ಲಿಂಗ ನೊಡಲು ಅದ್ಭುತವಾಗಿ ಕಾಣುತ್ತದೆ. ಗಾತ್ರದಲ್ಲಿ ಇದು ಸ್ವಲ್ಪ ದೊಡ್ಡದಾಗಿದ್ದ ಕಾರಣ ಅದರ ಅಳತೆಗಳನ್ನು ಗಾತ್ರದ ಪ್ರಮಾಣ ಹಿಡಿದು ಆಕಾರದಲ್ಲಿ ಚಿಕ್ಕಲಿಂಗ ಮಾಡಬೇಕು.

ಇಷ್ಟಲಿಂಗದಲ್ಲಿ ೨ ಭಾಗಗಳಿರುತ್ತವೆ.

೧. ಲಿಂಗದ ತಿರುಳಿನಲ್ಲಿ ಚಂದ್ರಶಿಲೆ-ಪಾಣಿಪೀಠ

೨. ಹೊರಭಾಗ ಇದು ಕಪ್ಪು ಬಣ್ಣದ ಆವರಣ-ಕಂತಿ

೧. ಚಂದ್ರಕಾಂತ ಶಿಲೆ (**Moon stone**) : (**Adularia or Selenite**)

ಚಂದ್ರಶಿಲೆ ಎಂಬುದು ಫೆಲ್ಡ್ ಸ್ಟಾರ ಗುಂಪಿನ ಸೋಡಿಯಂ ಪೊಟ್ಯಾಸಿಯಮ್ ಅಲ್ಯೂಮಿನಿಯಂ ಸಿಲಿಕೇಟ್(**(Na.K)** $AlSi_3O_8$) ಆಗಿದ್ದು ಅದು ಮುತ್ತಿನ ಮತ್ತು ಅಪಾರದರ್ಶಕ ಸ್ಕಿಲರ್ ಅನ್ನು ಪ್ರದರ್ಶಿಸುತ್ತದೆ. ಇದರ ಪರ್ಯಾಯ ಹೆಸರು ಹೆಕಾಟೋಲೈಟ (ಹೆಕಾಟೆ ದೇವತೆಯಿಂದ) ಇದೆ. ಇದು ಹಾಲಿನ ತರಹವಿದ್ದು ನೀಲಿ ಬಣ್ಣದ ಅಂತರಿಕ ಬೆಳಕನ್ನು ಉತ್ಪಾದಿಸುತ್ತದೆ. ಈ ಪರಿಣಾಮವು ಬೆಳಕಿನ ವಿವರ್ತನೆಯಿಂದ **defraction** ಉಂಟಾಗುತ್ತದೆ.

ಪುರಾತನ ರೋಮನರು ಚಂದ್ರಕಾಂತ ಶಿಲೆಯನ್ನು ಸಹಾಯಕಾರಿ ನವೀಕರಣಗೊಳಿಸುವ, ಶಾಂತತೆ, ಹುಟ್ಟಿಸುವ, ಭಾವನಾತ್ಮಕ ಬುದ್ಧಿವಂತಿಕೆ ಯನ್ನು ಹೆಚ್ಚಿಸುವ ಮತ್ತು ಅದೃಷ್ಟಕಾರಕ ಸಮೃದ್ಧಿ ಕೊಡುವ ರತ್ನವೆಂದು ನಂಬಿದ್ದರು.

ಆಯುರ್ವೇದದಲ್ಲಿ ಚಂದ್ರಕಾಂತ ಶಿಲೆಗೆ ಅದರ ಔಷಧ ಗುಣಕ್ಕಾಗಿ



ಮಹತ್ವವಿದೆ. ವಿಶೇಷವಾಗಿ ಭಾವನಾತ್ಮಕ ಮತ್ತು ಹಾರ್ಮೋನಗಳ ಅಸಮತೋಲನದಿಂದ ಉದ್ಭವಿಸುವ ರೋಗಗಳನ್ನು ಗುಣಪಡಿಸುವಲ್ಲಿ.

ಚಂದ್ರಕಾಂತ ಶಿಲೆ ರಾಸಾಯನಿಕವಾಗಿ, ಸಿಲಿಕಾನ್ ಡೈಆಕ್ಸೈಡ್ ಅಲ್ಯುಮಿನಿಯಮ ಮತ್ತು ಪೊಟ್ಯಾಸಿಯಮ ಹೊಂದಿರುವ ಸಂಯುಕ್ತವಾಗಿದೆ. ಪೃಥ್ವಿಯ ಮೇಲೆ ಹೇರಳವಾಗಿ ಉಪಲಬ್ದವಿದ್ದು ಅದರ ಮೇಲ್ಪದರಿನ ೨೬% ಸಿಲಿಕಾನನಿಂದ ತುಂಬಿರುತ್ತದೆ. ಇದು ಎರಡು ರೂಪದಲ್ಲಿ ಉಪಲಬ್ದವಿದೆ. ಸಿಲಿಕಾ ಮತ್ತು ಸಿಲಿಕೇಟ. ಸಿಲಿಕಾನ ಕೆಲವು ರಸಾಯನಿಕ ಪ್ರಕ್ರಿಯೆಗಳಲ್ಲಿ ಎಲಾಕ್ಟ್ರಾನ ಕೊಡುತ್ತದೆ. ಇನ್ನು ಕೆಲವದರಲ್ಲಿ ಎಲೆಕ್ಟ್ರಾನ ಪಡೆದುಕೊಳ್ಳುತ್ತದೆ. ಇದು ಸಾಮಾನ್ಯವಾಗಿ ವಿದ್ಯೂತ್ತ ವಾಹಕವಾಗಿ ಕಾರ್ಯ ಮಾಡುವದಿಲ್ಲ. ಆದರೆ ಅದನ್ನು ಬಿಸಿಮಾಡಿದಾಗ ಅದು ಸೆಮಿಕಂಡಕ್ಟರ ಅಂದರೆ ಕಂಪೂಟರ್‌ದ ಚಿಪ್ಪಿನ ತರಹ ಕಾರ್ಯ ಮಾಡುತ್ತದೆ. ಚಂದ್ರಕಾಂತ ಶಿಲೆಯಲ್ಲಿ ಬಹುವಿಧದ ಶಿಲೆಗಳಿದ್ದು ಶ್ರೀಲಂಕಾ, ಮೈನಮಾರ, ಭಾರತ ಮತ್ತು ಬ್ರಾಜಿಲ್‌ದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉಪಲಬ್ಧವಿದೆ. ಭಾರತದಲ್ಲಿ ಶ್ರೀಶೈಲಮದಲ್ಲಿ ದಕ್ಷಿಣ ಭಾರತದ ಇತರ ಭಾಗದಲ್ಲಿ ಚಂದ್ರಶಿಲೆ ದೊರಕುತ್ತದೆ.

ಚಂದ್ರಕಾಂತ ಶಿಲೆ ಧರಿಸುವದರಿಂದಾಗುವ ಮನೋವೈಜ್ಞಾನಿಕ ಲಾಭಗಳು ಧಾರಾಳವಾಗಿದ್ದುದ್ದು ನೋಡಬಹುದು.

೧. ಅಂತರಂಗದ ಸಮತೋಲ ಪ್ರಸ್ತಾಪಿಸುತ್ತದೆ,
೨. ಸ್ವಯಂ ಅನಾರೋಗ್ಯ ಸರಿಪಡಿಸಲು ಸಹಾಯ ಮಾಡುತ್ತದೆ.
೩. ಅಪಘಾತಗಳನ್ನು ತಡೆಯುವ ಗುಣಹೊಂದಿದೆ.
೪. ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯಮಾಡುತ್ತದೆ.
೫. ಸ್ವಯಂ ಸೂಕ್ಷ್ಮತೆ ಮತ್ತು ಸ್ವಯಂ ಧೈರ್ಯ ಹೆಚ್ಚಿಸುತ್ತದೆ.
೬. ನಿದ್ರಾಹೀನತೆ, ದೈಹಿಕ ಲಯಗಳನ್ನು ಸುಧಾರಿಸುತ್ತದೆ. ಅಂತಃಪ್ರಜ್ಞೆ ಹೆಚ್ಚಿಸುತ್ತದೆ.

ಹೀಗೆ ಅನೇಕ ಒಳ್ಳೆಯ ಪ್ರಭಾವ ಹೊಂದಿರುವ ಶಿಲೆ ಇದೆ ಎಂದು ನಂಬಲಾಗಿದೆ. ಅದಕ್ಕಾಗಿ ಶರಣರು ಇಷ್ಟಲಿಂಗದ ತಿರುಳಿನಲ್ಲಿ ಚಂದ್ರಕಾಂತ ಶಿಲೆ ಇಡಲು ಹೇಳುತ್ತಾರೆ. ಶಾಲಿಗ್ರಾಮದ (ಕಲ್ಲಿನ) ಸ್ಥಾವರ ಲಿಂಗದಾಕಾರದ

ಪಿಂಡ ಇಡಬಾರದು.

ಚಂದ್ರಶಿಲೆಯಲ್ಲಿ ಪಾವಕಹುಟ್ಟಿ
ಇಡಾಪಿಂಗಳ ಮಧ್ಯದಲ್ಲಿ ಅನಿಲ ತುಂಬಿ
ಅರಿದರಿದು! ನಿಮ್ಮ ನೆನೆವ ಪರಿಕರ ಹೊಸತು
ಅರಿವಡೆ ತಲೆಯಿಲ್ಲ, ಹಿಡಿವಡೆ ಒಡಲಿಲ್ಲ,
ಕೂಡಲಸಂಗಮದೇವಾ,
ನಿಮ್ಮ ಶರಣನ ಪರಿ ಇಂತುಂಟು ಅರಿದರಿದು
ಸ.ವ.ಸಂ.೧. ಬಸವಣ್ಣ ೧೧೮೫

ಒಳಗೆ ಚಂದ್ರಶಿಲೆ ಇಟ್ಟು ತಯಾರಿಸಿದ ಇಷ್ಟಲಿಂಗವನ್ನೇ ಧರಿಸಬೇಕು ಮತ್ತು ಚಂದ್ರಶಿಲೆಯ ಲಿಂಗದ ಯೋಗ ಮಾಡಬೇಕು.

೨. ಕಂತಿ:

ಗೋವಿನ ಸೆಗಣಿಯ ಕುಳ್ಳನ್ನು ಸುಟ್ಟು ತಯಾರಿಸಿದ ಭಸ್ಮ, ಸಿಹಿ ಎಣ್ಣೆ ಅಥವಾ ತುಪ್ಪ ಸುಟ್ಟು ತಯಾರಿಸಿದ ಕಾಡಿಗೆ, ಸ್ವಲ್ಪ ಕೇರೆಣ್ಣೆ ಮತ್ತು ಅಂಟು ಸೇರಿಸಿ ರುದ್ದಿ ಸರಿಯಾಗಿ ಮಿಶ್ರಣ ಮಾಡಿ ಈ ವಸ್ತುಗಳನ್ನು ಕಟ್ಟಿಹಿಡಿಯುವ ರಸಾಯನಿಕ ಪೂರ್ಣವಾಗಿ ತಟಸ್ಥ ಇರುವ ಪುಡಿ ಮತ್ತು ತತ್ಸಮವಾದ ನೀರಿನಂತಃ ದ್ರವ ಹಾಕಿ ತಯಾರಿಸಿದ ಕಪ್ಪು ಬಣ್ಣದ ಹಿಟ್ಟಿನ ಗಂಜಿ ಅಥವಾ ಸರಿಯನ್ನು ತಯಾರಿಸಿ ಲಿಂಗದ ಅಚ್ಚಿನಲ್ಲಿ ತುಂಬಬೇಕು. ಅಚ್ಚಿನ ಮಧ್ಯದಲ್ಲಿ ತಲುಪುವಂತೆ ಯೋಗ್ಯ ಗಾತ್ರದ ಚಂದ್ರಶಿಲೆ ಅದರಲ್ಲಿ ಇಡಬೇಕು. ಅಚ್ಚಿನ ಮುಖ ಮುಚ್ಚಬೇಕು. ಸ್ವಲ್ಪ ಸಮಯದ ನಂತರ ಅಚ್ಚಿನ ಮುಖ ತೆರೆದು ಒಳಗಿನ ಲಿಂಗ ಹೊರಗೆ ತೆಗೆದು ಅದನ್ನು ಒಣಗಿಸಬೇಕು. ನಂತರ ಲಿಂಗವನ್ನು ಹತ್ತಿ ಬಟ್ಟೆಯಿಂದ ವರೆಸಿ ಇಡಬೇಕು. ಈ ತರಹ ತಯಾರಿಸಿದ ಲಿಂಗದ ಕಂತಿಯಲ್ಲಿ ಶರೀರಕ್ಕೆ ಹಾನಿಕಾರಕವಾದ ಯಾವುದೇ ವಸ್ತುಗಳಿರುವದಲ್ಲಿ. ಲಿಂಗ ಶರೀರದ ಮೇಲೆ ಧರಿಸುತ್ತಿರುವುದರಿಂದ ಮತ್ತು ಪ್ರತಿನಿತ್ಯ ಲಿಂಗೋದಕ ಕುಡಿಯುವದರಿಂದ ಲಿಂಗವನ್ನು ಆರೋಗ್ಯಕ್ಕೆ ಸುರಕ್ಷಿತವಾಗಿರುವ ವಸ್ತುಗಳಿಂದಲೇ ತಯಾರಿಸಬೇಕು.



ಕಾಡಿಗೆಯನ್ನು ತಯಾರಿಸಲು ಸುಡುವ ವಸ್ತುವಿನ ಆಧಾರದ ಮೇಲೆ ವಿವಿಧ ಕಾಂತಿಯ ಪ್ರಕಾರಗಳನ್ನು ಹೆಸರಿಸಲಾಗಿದೆ.

೧. ಸಾದಾ ಕಂತಿ: ಇದರಲ್ಲಿ ಸಿಹಿಎಣ್ಣೆ ಅಥವಾ ಊಟದ ಎಣ್ಣೆ ಸುಟ್ಟು ಕಾಡಿಗೆ ತಯಾರಿಸಲಾಗುತ್ತದೆ.

೨. ತುಪ್ಪದ ಕಂತಿ: ಇದರಲ್ಲಿ ತುಪ್ಪ ಸುಟ್ಟು ಕಾಡಿಗೆ ಮಾಡಲಾಗುತ್ತದೆ.

೩. ಕರ್ಪುರದ ಕಂತಿ: ಇದು ಕೇವಲ ಹೇಳುವ ಮಾತು

ಕರ್ಪುರ ಸುಟ್ಟು ಕಾಡಿಗೆ ಮಾಡುವದು ಅಸಾಧ್ಯವಾದ ಮಾತಾಗಿದೆ.

ಯಾವದೆ ವಸ್ತು ಪೂರ್ಣವಾಗಿ ಗಾಳಿಯಲ್ಲಿ ಸುಟ್ಟರೆ ಅದು ಅಂತಿಮವಾಗಿ ಬಿಡುವದು ಕಾರ್ಬನ್ ಡೈ ಆಕ್ಸೈಡ($Co_2$) ಆಗಿರುತ್ತದೆ. ಅದಕ್ಕಾಗಿ ಬೇರೆ ಬೇರು ವಸ್ತುವಿನ ಕಾಂತಿ ಎಂಬುದು ಒಂದು ಭ್ರಮೆ ಎಂದು ಹೇಳಬಹುದು. ಶರಣರು ತಮ್ಮ ಹಲವು ವಚನಗಳಲ್ಲಿ ಇಷ್ಟಲಿಂಗಕ್ಕೆ ಕ್ರಿಯಾಲಿಂಗವೆಂದು ಸಂಬೋಧಿಸುತ್ತಾರೆ. ವಾಸ್ತವದಲ್ಲಿ ಲಿಂಗದಲ್ಲಿಯ ಚಂದ್ರಕಾಂತ ಶಿಲೆಯಾಗಿರಲಿ ಅಥವಾ ಅದರ ಕಂತಿಯನ್ನು ತಯಾರಿಸಲು ಉಪಯೋಗಿಸುವ ವಸ್ತುಗಳಾಗಲಿ ತಟಸ್ಥ ವಸ್ತುಗಳಾಗಿವೆ. ಅದಕ್ಕಾಗಿ ಕರಸ್ಥಲದಲ್ಲಿಯ ಇಷ್ಟಲಿಂಗ ಕ್ರಿಯಾಲಿಂಗ ಹೇಗಾಗುತ್ತದೆ. ತಟಸ್ಥವಾಗಿದ್ದುದ್ದು ಸಕ್ರೀಯ ಹೇಗಾಗುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಇಷ್ಟಲಿಂಗ ಸಕ್ರೀಯವಾಗಿ ಕ್ರಿಯಾಲಿಂಗವಾಗುವದು ಸತ್ಯ. ಇಷ್ಟಲಿಂಗ ಜೀವಂತ, ಸಂವೇದನಶೀಲ ಸಕ್ರೀಯ ಲಿಂಗವಿದೆ. ಇಷ್ಟಲಿಂಗವು ಎಡ ಅಂಗೈಯಲ್ಲಿ ಹಿಡಿದು ದೃಷ್ಟಿನೆಟ್ಟು ನೋಡುವಾಗ ಲಿಂಗ ಹಿಡಿದ ಅಂಗೈಯಲ್ಲಿ ರಕ್ತ ಪ್ರವಾಹ ಹೆಚ್ಚಾಗುತ್ತದೆ. ಸಾಮಾನ್ಯವಾಗಿಯೂ ಅಂಗೈಗಳಿಗೆ ರಕ್ತ ಪ್ರವಾಹ ಬೇರೆ ಅಂಗಗಳಿಕ್ಕಿಂತ ಹೆಚ್ಚಾಗಿರುತ್ತದೆ. ಲಿವ್ಹರ, ಕಿಡ್ನಿ ಹಾರ್ಟ್ ಇನ್ನಿತರ ಕೆಲವು ಅಂಗಗಳಿಗೆಯೂ ರಕ್ತ ಹರಿಯುವಿಕೆ ಹೆಚ್ಚಾಗಿರುತ್ತದೆ.

ರಕ್ತ ಬಿಸಿಯಾಗಿರುವದರಿಂದ ಅದು ಹರಿಯುವಾಗ ಅದರ ಉಷ್ಣತೆಯನ್ನು ಅಂಗೈಯ ತ್ವಚಕ್ಕೆ ವರ್ಗಾವಣೆ ಮಾಡುತ್ತದೆ. ಇದರಿಂದ ಅಂಗೈ ತ್ವಚ

ಬಿಸಿಯಾಗುತ್ತದೆ. ಇಷ್ಟಲಿಂಗಾರ್ಚನೆ ಮಾಡುವವರು ಇದನ್ನು ಪ್ರತ್ಯಕ್ಷ ಅನುಭವಿಸಬಹುದು. ಇಷ್ಟಲಿಂಗಕ್ಕೆ ದೃಷ್ಟಿ ಇಟ್ಟು ನೋಡಿ ಲಿಂಗೋದಕ ಮಾಡಿಕೊಳ್ಳದ ಮುನ್ನ ಅಂಗೈಯಿಂದ ಲಿಂಗ ಎತ್ತಿ ಹಿಡಿದು ಅದರ ತಳದಲ್ಲಿದ್ದ ತ್ವಚೆಗೆ ಮುಟ್ಟಿ ನೋಡಿ ಅದೆ ಅಂಗೈಯ ಬೇರೆ ಭಾಗದಕಿಂತ ಬಿಸಿಯಾಗಿದ್ದುದ್ದು ಕಂಡುಬರುತ್ತದೆ. ಇದರ ಅರ್ಥ ಸ್ಪಷ್ಟವಿದೆ. ಇಷ್ಟಲಿಂಗಾರ್ಚನೆ ಮಾಡುವಾಗ ಲಿಂಗದ ತಳದ ಕೆಳಗಿದ್ದ ಕೈ ತ್ವಚದ ಉಷ್ಣತೆ ತಲುಪಿದಾಗ ಹೆಚ್ಚಾಗುತ್ತದೆ. ಲಿಂಗದ ಕಂತಿ ಕಪ್ಪು ಬಣ್ಣದಾಗಿದೆ ಮತ್ತು ಅದು ಕಾಡಿಗೆಯಿಂದ ಅಂದರೆ ಕಾರ್ಬನದಿಂದ ತಯಾರಿಸಲಾಗಿದೆ. ಅದಕ್ಕಾಗಿ ಲಿಂಗ ಒಂದು ಬ್ಲ್ಯಾಕ ಬಾಡಿ(**Black body**)ಯಂತೆ ವರ್ತಿಸುತ್ತದೆ ಮತ್ತು ಅಂಗೈ ಉಷ್ಣತೆ ಹೀರಿಕೊಳ್ಳುತ್ತದೆ. ಇದರಿಂದ ಸ್ವತಃ ಲಿಂಗ ಬಿಸಿಯಾಗುತ್ತದೆ.

ಬಿಸಿಯಾದ ಲಿಂಗದ ಉಷ್ಣತೆ ಅದರ ಮಧ್ಯದಲ್ಲಿದ್ದ ಚಂದ್ರಕಾಂತ ಶಿಲೆಗೆ ತಲುಪುತ್ತದೆ.ಸಾಮಾನ್ಯವಾಗಿ ಚಂದ್ರಶಿಲೆ ವಿದ್ಯುತ್ ವಾಹಕವಾಗಿರುವುದಿಲ್ಲ (**Non conductor**) ಅದು ಬಿಸಿ ಆದಾಗ ಅಥವಾ ಉಷ್ಣತೆ ಅದು ಅರೆವಿದ್ಯೂತ್ ವಾಹಕ(**Semiconductor**) ಆಗಿ ವರ್ತಿಸುತ್ತದೆ ಅಂದರೆ ಕಂಪ್ಯೂಟರ್‌ದ ತರಹ ವರ್ತಿಸುತ್ತದೆ. ಕಂಪ್ಯೂಟರದ ಇಷ್ಟಲಿಂಗಾರ್ಚನೆ, ಇಷ್ಟಲಿಂಗಯೋಗ ಮಾಡುವಾಗ ಇಷ್ಟಲಿಂಗ ಕಂಪ್ಯೂಟರ ಚಿಪ್‌ದ ತರಹ ಸಕ್ರೀಯವಾಗಿ ಕಾರ್ಯ ಮಾಡುತ್ತದೆ. ಅದಕ್ಕಾಗಿ ಶರಣರು ಇಷ್ಟಲಿಂಗಕ್ಕೆ ಕ್ರೀಯಾಲಿಂಗವೆಂದಿದ್ದಾರೆ.

ಇಷ್ಟಲಿಂಗವು ಯೋಗ ಮಾಡುವಾಗ ಸಕ್ರಿಯವಾಗುವ ದರಿಂದಲೇ ಇಷ್ಟಲಿಂಗಯೋಗ ಮಾಡುವವರು ಪರಿವರ್ತನವಾಗುತ್ತಾರೆ ಅವರಿಗೆ ಅದ್ಭುತ ಫಲಗಳು ಪ್ರಾಪ್ತವಾಗುತ್ತವೆ. ಅವರ ಜೀವನ ಸುಖ ಶಾಂತಿಯಿಂದ ತುಂಬುತ್ತದೆ. ಅವರಿಗೆ ಜ್ಞಾನೋದಯವಾಗಿ ಅವರು ಆಧ್ಯಾತ್ಮಿಕ ಅನುಭೂತಿಯ ಮಹಾಮೇರುವಿಗೆ ತಲುಪುತ್ತಾರೆ.





ಇಷ್ಟಲಿಂಗ ಮಾಡಲು ನಾನು ಉಪಯೋಗಿಸುತ್ತಿರುವ ಲೋಹದ ಅಚ್ಚು

## ೩. ಇಷ್ಟಲಿಂಗೋಪಾಸನೆ ಮನೋವೈಜ್ಞಾನಿಕ ದೃಷ್ಟಿಕೋನ

### ೧. ಇಷ್ಟಲಿಂಗ ಯೋಗದ ಮನೋವೈಜ್ಞಾನಿಕತೆ:

ವೈಯಕ್ತಿಕ ಪ್ರಜ್ಞೆಯನ್ನು ಅದರ ಮೂಲವಾದ ಸಕಲ ಬ್ರಹ್ಮಾಂಡ ವ್ಯಾಪ್ತ ಮಹಾಪ್ರಜ್ಞೆಗೆ ಕೊಂಡೊಯ್ಯುವದು ಇಷ್ಟಲಿಂಗ ಯೋಗದ ಮುಖ್ಯ ಗುರಿಯಾಗಿದೆ.

ಎಲ್ಲ ವಿಶ್ವಗಳನ್ನು ಮತ್ತು ಅಲ್ಲಿಯ ಅಸ್ತಿತ್ವಗಳನ್ನು ತನ್ನ ಒಡಲಲ್ಲಿ ಇಂಬಿಟ್ಟುಕೊಂಡ ವಿರಾಟ, ಶಾಶ್ವತ ಪ್ರಜ್ಞೆಯೆ ಎಲ್ಲ ಸಜೀವ ಅಸ್ತಿತ್ವಗಳ ಸಹಿತ ಮನುಷ್ಯರ ಅಂತರಂಗದ ಆಳವನ್ನು ಆವರಿಸಿರುತ್ತದೆ. ಈ ಮಹಾಪ್ರಜ್ಞೆಯೆ ಬಾಹ್ಯದಲ್ಲಿ ಇಷ್ಟಲಿಂಗವೆಂಬ ಸೂಕ್ಷ್ಮರೂಪ ತಾಳಿ ಕರಸ್ಥಲದಲ್ಲಿ ಚುಳುಕಾಗುತ್ತದೆ.




ವಿಶ್ವಪ್ರಜ್ಞೆಯಲ್ಲಿ ವೈಯಕ್ತಿಕ ಪ್ರಜ್ಞೆಯ ನೆಲೆ ಮಾಡುವಿಕೆಗೆ ಶ್ರೀ ಬಸವಣ್ಣ ನವರು ‘ಅರಿವು’ ಎಂದಿದ್ದಾರೆ. ಅರಿವಿನ ಪ್ರಕ್ರಿಯೆ ದೇಹ ಮತ್ತು ಅದರ ಅಂತರಂಗದಲ್ಲಿದ್ದ ಪ್ರಜ್ಞೆಯ ಸಾಮರಸ್ಯದಿಂದ ಆರಂಭ ವಾಗುತ್ತದೆ. ಇದನ್ನು ಅಂಗ-ಲಿಂಗದ ಸಾಮರಸ್ಯ ವೆಂದು ಗುರುತಿಸುತ್ತಾರೆ. ಇಷ್ಟಲಿಂಗ



ಯೋಗ ಸಾಧನೆ ಮುಂದುವರಿದಂತೆ ಸರ್ವಾಂಗವೆ ಪ್ರಜ್ಞೆಯಾಗುತ್ತದೆ. ಆವಾಗ ಸಾಧಕ ಸರ್ವಾಂಗಲಿಂಗಿಯಾಗುತ್ತಾನೆ. ಇದುವೆ ಆತನ ಪರಿಪೂರ್ಣ ಜಾಗೃತ ಅವಸ್ಥೆಯಾಗಿದೆ. ಇಷ್ಟಲಿಂಗಯೋಗದ ವಿಶಿಷ್ಟ ಗುಣವೆಂದರೆ ಅದು ನಮ್ಮನ್ನು ಶಬ್ದ ಮೀರಿದ ವಿಶ್ವಕ್ಕೆ ದೃಶ್ಯಮಾರ್ಗದ ಮೂಲಕ ಒಂದು ರೀತಿಯ ಶಾಶ್ವತ ಮೌನದ ಅಸ್ತಿತ್ವಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ಎಲ್ಲ ಅಸ್ತಿತ್ವದ ಸಾರ ವಾಸಿಸುತ್ತಿರುವದು ಅರಿವಿಗೆ ಬರುತ್ತದೆ. ಶರಣರ ನಂಬಿಕೆ ಇದೆ ಶಬ್ದಗಳು ಪೂರ್ಣ ಅಸ್ತಿತ್ವವನ್ನು ಹಿಡಿಯುಲು ಸಾಧ್ಯವಿಲ್ಲ. ಆದರೆ ಮೌನ ಹಿಡಿಯಬಹುದು.

ಇಷ್ಟಲಿಂಗವು ದೃಷ್ಟಿಪ್ರಜ್ಞೆ ಮತ್ತು ದೃಶ್ಯಗ್ರಹಿಕೆಯನ್ನು ಸಂಯೋಜಿಸುತ್ತದೆ. ಇದರಿಂದಾಗಿ ದೇಹಪ್ರಜ್ಞೆ ಕರಗಿಹೋಗಿ ಅದರ ಬದಲಾಗಿ ಸಂಪೂರ್ಣ ತಾನೆಂಬುದು ವಿಶ್ವಪ್ರಜ್ಞೆಯಲ್ಲಿ ಮುಳುಗುತ್ತದೆ. ವೈಯಕ್ತಿಕ ಪ್ರಜ್ಞೆಯು ಕಣ್ಮರೆಯಾಗುತ್ತದೆ ಮತ್ತು ಶಾಶ್ವತ ಪ್ರಜ್ಞೆಯು ನಿಮ್ಮ ಅಭಿವ್ಯಕ್ತಿಯನ್ನು ವ್ಯಾಪಿಸುತ್ತದೆ. ಈ ಅವಸ್ಥೆಗೆ ಅಲ್ಲಮಪ್ರಭುಗಳು “ಅರಿವು ಲಿಂಗವಾಗಿ ಮರಹು ಗೆಟ್ಟಿತು” ಎಂದಿದ್ದಾರೆ. ಈ ಯೋಗವು ನಿಮ್ಮೊಳಗಿನ ಯಾವುದೆ ಹೊಸ ಆಧ್ಯಾತ್ಮಿಕ ಸತ್ಯವನ್ನು ತಿಳಿಸುವದಿಲ್ಲವಾದರೂ ನೀವು ಜನ್ಮದಿಂದ ಮರೆತು ಕುಳಿತಿದ್ದ ಮಹಾಪ್ರಜ್ಞೆಯ ಸ್ವರೂಪ ನಿಮ್ಮ ಮುಂದೆ ಪ್ರಕಟಮಾಡುತ್ತದೆ.

> “ಅರಿವಿಂದರಿಯಬಾರದು ಕುರುಹುವಿಡಿದ ಪರಿಯೆಂತಯ್ಯಾ
> ತೆರಹಿಲ್ಲದ ಘನವನರಿದೆಹೆನೆಂದಡೆ, ಅರಹು ಮರಹು ನಷ್ಟವಾದ
> ಮಹದರಿವು ತಾನಾಗಿ ಗುಹೇಶ್ವರಲಿಂಗವನರಿಯದಂತಿರಬೇಕು
> ಕಾಣಾ ಸಿದ್ಧರಾಮಯ್ಯಾ”
>
> (ಸ.ವ.ಸ.೨. ಅಲ್ಲಮಪ್ರಭುದೇವರು ವ-೮೩೬)

ಇಷ್ಟಲಿಂಗಯೋಗದಿಂದ ಬರುವ ಸಂಪೂರ್ಣ ಅರಿವು ತನ್ನ ನಿಜವಾದ ಅಸ್ತಿತ್ವದ ಸಂಪೂರ್ಣ ಅಜ್ಞಾನ ಹೊರಗೆ ಹಾಕುತ್ತದೆ. ಇಷ್ಟಲಿಂಗವು ನಮಗೆ ಆಯುಧವನ್ನು ನೀಡುತ್ತದೆ. ಅದರಿಂದ ರೂಪದ ಗೋಡೆಯನ್ನು ಭೇದಿಸಲು ಮತ್ತು ವೈಶ್ವಿಕ ಪ್ರಜ್ಞೆಯ ನೋಟ ಹೊಂದಲು ಸಹಾಯ ಮಾಡುತ್ತದೆ ಮತ್ತು ನಮಗೆ ಎಷ್ಟೇ ಕತ್ತಲು ಕವಿದಿರಲಿ, ಆ ಚಿಕ್ಕ ರಂಧ್ರದಿಂದ ಒಳಗೆ ಪ್ರವೇಶಿಸಿದ

ಮಹಾಪ್ರಜ್ಞೆ ಅದನ್ನು ತಳ್ಳಿ ನಮ್ಮ ತುಂಬ ಬೆಳಕು ತುಂಬುತ್ತದೆ. ಆಗ ನಮ್ಮ ಪೂರ್ಣವನ್ನೆ ಬೆಳಕನ್ನಾಗಿ ಪರಿವರ್ತಿಸುತ್ತದೆ. 'ಅರಿವು' ಎನ್ನುವದು ತಾನು ಎಲ್ಲವನ್ನು ಒಳಗೊಳ್ಳುವ ಮತ್ತು ವ್ಯಾಪಿಸಿರುವ ವೈಶ್ವಿಕ ಪ್ರಜ್ಞೆಯ ಒಂದು ಭಾಗವಾಗಿದ್ದೇನೆ ಎಂಬ ಅನುಭಾವ ಮತ್ತು ವರ್ತನೆ ಇದೆ.

ವ್ಯಕ್ತಿ ಪ್ರಜ್ಞೆ ಎಂದರೆ ವೈಯಕ್ತಿಕ ಪಾತಳಿಯಲ್ಲಿ ಮನುಷ್ಯನ ತಿಳುವಳಿಕೆಗೆ ಬರುವ ಪ್ರಜ್ಞೆಯಾಗಿದ್ದು ಅದು ಆತನ ಇಂದ್ರಿಯಗಳ ಪ್ರಚೋದನೆಗಳಿಗೆ ಅವನ ಪ್ರತಿಕ್ರಿಯೆಯಾಗಿರುತ್ತದೆ. ಇನ್ನೊಂದು ವಿಧದಲ್ಲಿ ಹೇಳುವದೆಂದರೆ ಮನುಷ್ಯನ ಮನದಲ್ಲಿ ಏನೇನು ಆಗುತ್ತಿದೆ ಅವುಗಳ ತಿಳುವಳಿಕೆಯ ಮೊತ್ತವೆ ಆತನ ಪ್ರಜ್ಞೆಯಾಗಿದೆ. ಆದರೆ ನಿಜದಲ್ಲಿ ಅದು ಮಹಾಪ್ರಜ್ಞೆಯ ಒಂದು ಭಾಗವಾಗಿರುತ್ತದೆ. ಈ ತರಹದ ಮೊಟಕುಗೊಳಿಸಲಾದ ವ್ಯಕ್ತಿ ಪ್ರಜ್ಞೆಯೇ 'ನಾ'ನೆಂಬ, 'ನನ್ನ'ದೆಂಬ ಅಹಂಕಾರ ಮತ್ತು ಮನುಷ್ಯನ ಪ್ರಮಾದಗಳಿಗೆ ಕಾರಣವಾಗಿದೆ. ನಿಜದಲ್ಲಿ ಮನುಷ್ಯನ ಇರುವಿಕೆ ಅಸ್ತಿತ್ವದ ಪ್ರಬುದ್ಧ ಸ್ಥಿತಿಯಾಗಿದ್ದು ಮಾನವ ಮನದ ಆಚೆಗೆ ವ್ಯಾಪಿಸಿದೆ.

ಒಂದು ವೇಳೆ ನಮ್ಮ ಪರಿಪೂರ್ಣ ಅಸ್ತಿತ್ವದ ತಿಳುವಳಿಕೆಯನ್ನು ಕೇವಲ ಮನಕ್ಕೆ ಸೀಮಿತವಾಗಿದ್ದರೆ ಮನುಷ್ಯನೆಂದರೆ ಮತ್ತೇನಾಗಿರದೆ ಅವನ ಮನಸ್ಸೇ ಆಗಿರುತ್ತದೆ (**Man is nothing but his mind**) ಎಂದು ಹೇಳಬಹುದು. ಮನಸ್ಸಿನ ಅವಯವ ಆತನ ಮೆದುಳು ಆಗಿದೆ. ಇದರ ಅರ್ಥ ಮನುಷ್ಯನ ಅಸ್ತಿತ್ವವೆಂದರೆ ಕೇವಲ ಮೆದುಳಿನ ಅಸ್ತಿತ್ವವಾಗಿರುತ್ತದೆ. ಆದರೆ ಈ ಧಾರಣೆಪೂರ್ಣ ಸತ್ಯವಲ್ಲ.

ಜೀವ ಚಿರಂತನ ಮಹಾಪ್ರಜ್ಞೆಯ ಭಾಗವಾಗಿದ್ದ ಕಾರಣ ಅದು ಚಿರಂತನವಾಗಿದೆ. ಮನುಷ್ಯನ ಅಸ್ತಿತ್ವ ಅವಿನಾಶಿಯಾಗಿದೆ.

ಎಮ್ಮವರಿಗೆ ಸಾವಿಲ್ಲ ಎಮ್ಮವರು ಸಾವನರಿಯರು
ಸಾವೆಂಬುದು ಸಯವಲ್ಲ
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ

ಸ.ವ.ಸಂ.೧ ಬಸವಣ್ಣ ವ–೧೧೦೩



ಮಹಾಪ್ರಜ್ಞೆಯಲ್ಲಿ ಹುಟ್ಟಿದವರು ಅದರಲ್ಲಿಯೇ ಸಾಮರಸ್ಯ ಪಡೆಯುತ್ತಾರೆ, ನಾಶವಾಗುವದಿಲ್ಲ. ಇಷ್ಟಲಿಂಗಯೋಗ ವ್ಯಕ್ತಿಯ ಪ್ರಜ್ಞೆಯನ್ನು ಬದಲಾಯಿಸುತ್ತದೆ. ಬೀಜದಲ್ಲಿ ವೃಕ್ಷ, ರಾತ್ರಿಯಲ್ಲಿ ದಿವಸ ಕಾಣುವಂತೆ ಮಾಡುತ್ತದೆ. ಹೀಗೆ ಪ್ರಜ್ಞೆ ಪರಿವರ್ತನವಾದ ಮನುಷ್ಯರೆ ಶಾಂತಿ ಸಮೃದ್ಧಿ ಮತ್ತು ಪ್ರಗತಿಯ ಭರವಸೆ ಯಾಗಿದ್ದಾರೆ. ಏಕೆಂದರೆ ಅವರು ಸಮಯದ ಭಾರ ಮತ್ತು ಸ್ವರೂಪದ ವಿಭಾಜನೆಯಿಂದ ಸ್ವತಂತ್ರ ಅಸ್ತಿತ್ವ ಹೊಂದಿದವರಾಗಿರುತ್ತಾರೆ. ಇಂಥವರು ಮನುಷ್ಯತ್ವ ಮತ್ತು ಮಾನವೀಯತೆ ಎಂಬ ಅನಂತ ನಂಬಿಕೆಯ ಸದಸ್ಯರಾಗಿರುತ್ತಾರೆ.

ಮನಸ್ಸು ಪ್ರಜ್ಞೆಯ ಹೊರತು ಇರುವದಿಲ್ಲ. ವ್ಯಕ್ತಿ ನಾಲ್ಕು ಪ್ರಜ್ಞಾವಸ್ಥೆಯಲ್ಲಿ ಇರುವುದನ್ನು ಸಹಜವಾಗಿ ಕಾಣಬಹುದು.

೧. ಜಾಗೃತ ಅವಸ್ಥೆಯ ಪ್ರಜ್ಞೆ
೨. ನಿದ್ರಾವಸ್ಥೆಯಲ್ಲಿದ್ದ ಪ್ರಜ್ಞೆ
೩. ಸ್ವಪ್ನಾವಸ್ಥೆಯಲ್ಲಿದ್ದ ಪ್ರಜ್ಞೆ
೪. ತೂರ್ಯಾವಸ್ಥೆ ಅಥವಾ ಕೋಮಾದಲ್ಲಿಯ ಪ್ರಜ್ಞೆ.

ಕಾರ್ಲಗುಸ್ತಾವ ಯುಂಗ(**Karl Gustav Jung**) ಮತ್ತು ಸಿಗಮಂಡ ಫ್ರೂಯಿಡ(**Sigmund Frued**) ಎಂಬ ಮನೋವಿಜ್ಞಾನಿಗಳು ಮನುಷ್ಯನ ಪ್ರಜ್ಞೆ ನಾಲ್ಕು ಅವಸ್ಥೆಯಲ್ಲಿದ್ದುದನ್ನು ಪ್ರಸ್ತಾಪಿಸಿದ್ದಾರೆ. ೧. ಪ್ರಜ್ಞಾ ಅವಸ್ಥೆ (**Conscious state**) ೨. ಪ್ರಜ್ಞಾಪೂರ್ವ ಅವಸ್ಥೆ(**Preconscious state**) ೩. ಪ್ರಜ್ಞಾಹೀನ ಅವಸ್ಥೆ (**unconscious state**) ೪. ಸಾಮೂಹಿಕ ಪ್ರಜ್ಞಾಹೀನ ಅವಸ್ಥೆ (**Collective unconscious state**) ಯಾವ ಅವಸ್ಥೆಯಲ್ಲಿ ನಾವು ಜಾಗೃತವಾಗಿದ್ದೇವೆ ಎಂದು ನಮ್ಮ ತಿಳುವಳಿಕೆಗೆ ಬರುತ್ತದೆಯೋ ಅದು ಪ್ರಜ್ಞಾ ಅವಸ್ಥೆ ಇದರಲ್ಲಿ ನಿರ್ಣಯ ಶಕ್ತಿ, ಯೋಜನಾಶಕ್ತಿ, ಚಿಂತೆ, ಗ್ರಹಿಕೆ, ವಿವೇಚನೆಗಳಂಥ ಮಾನಸಿಕ ಗುಣಗಳಿರುತ್ತವೆ.

ಮನುಷ್ಯರ ಕಾರ್ಯಗಳು ಮತ್ತು ವರ್ತನೆಗಳು, ಅವನ ಉದ್ದೇಶ ಮತ್ತು ಅದರ ಪೂರ್ತಿಗಾಗಿ ಮಾಡುವ ಕಾರ್ಯಗಳು, ಅನೇಕ ಮನೋವಿಕಾರದ ಕಾರಣಗಳು ಪ್ರಜ್ಞಾಹೀನ ಅವಸ್ಥೆಯ ಮನದಲ್ಲಿ ಹುದುಗಿರುತ್ತವೆ. ಅದಕ್ಕಾಗಿ

ನಾವು ಅನೇಕ ಕಾರ್ಯಗಳು ನಮ್ಮ ಪ್ರಜ್ಞಾ ಮನವು ಬೇಡ ಬೇಡವೆಂದರು ಮಾಡುತ್ತೇವೆ. ಉದಾ: ಒಬ್ಬ ತರುಣ ಹುಡುಗಿ ಅವಳ ಪ್ರಜ್ಞಾಮನದ ಸೂಚನೆಯ ವಿರುದ್ಧವಾಗಿ ಹೋಗಿ ಅನ್ಯ ಸಮಾಜದ ಹುಡುಗನ ಜೊತೆಗೆ ಓಡಿ ಹೊಗುತ್ತಾಳೆ. ಇದು ಅವಳ ಪ್ರಜ್ಞಾಹೀನ ಮನದ ಕಾರ್ಯವಾಗಿರುತ್ತದೆ.

ಇದೇ ತರಹ ಸಾಮೂಹಿಕ ಪ್ರಜ್ಞಾಹೀನ ಮನದ ಕಾರ್ಯದ ಉದಾಹರಣೆ ನಾವು ಸಹಭಾಗಿಯಾದಾಗ ನೋಡಬಹುದು. ನಾವು ಒಬ್ಬರೆ ಇದ್ದಾಗ ಬಸ್ಸಿನಲ್ಲಿ ಕುಳಿತಾಗ ಅದು ರಾಷ್ಟ್ರೀಯ ಸಂಪತ್ತು ಅದರ ರಕ್ಷಣೆ ಮಾಡಬೇಕು ಎನ್ನುತ್ತೇವೆ. ಆದರೆ ನಾವು ಒಂದು ಮುಷ್ಕರದಲ್ಲಿದ್ದಾಗ ಅದೇ ಬಸ್ಸಿನ ಮೇಲೆ ಕಲ್ಲು ತೂರುತ್ತೇವೆ.

ಶರಣರ ವಿಚಾರದಲ್ಲಿ ಮನುಷ್ಯ ಮನದ ಪ್ರಜ್ಞಾ ಅವಸ್ಥೆಯ ದೃಷ್ಟಿಯಿಂದ ೭ ಅಂತಸ್ತಿನ ಕಟ್ಟಡದ ತರಹ ಇದ್ದಾನೆ. ಅವನ ಪ್ರಜ್ಞಾ ಅವಸ್ಥೆಯ ಅಂತಸ್ತಿನ ಕೆಳಗೆ ಮೂರು ಅಂತಸ್ತು ಮತ್ತು ಅದರ ಮೇಲೆ ಮೂರು ಅಂತಸ್ತುಗಳಿವೆ.

೭. ವೈಶ್ವಿಕ ಅತಿಪ್ರಜ್ಞೆ
೬. ಸಾಮೂಹಿಕ ಅತಿಪ್ರಜ್ಞೆ
೫. ಅತಿಪ್ರಜ್ಞೆ

೧. ಪ್ರಜ್ಞಾ ಅವಸ್ಥೆ
೨. ಪ್ರಜ್ಞಾಹೀನ ಅವಸ್ಥೆ
೩. ಸಾಮೂಹಿಕ ಪ್ರಜ್ಞಾಹೀನ ಅವಸ್ಥೆ
೪. ವೈಶ್ವಿಕ ಪ್ರಜ್ಞಾಹೀನ ಅವಸ್ಥೆ

ನಾವು ೧ನೇ ಪ್ರಜ್ಞಾ ಅವಸ್ಥೆಯ ಮನದಲ್ಲಿ ಉಳಿಯುತ್ತೇವೆ ಆದರೆ ನಮ್ಮ ಅಸ್ತಿತ್ವಕ್ಕೆ ಕಾರಣವಾದ ಅವಸ್ಥೆಗಳು ನಮ್ಮ ತಿಳುವಳಿಕೆಗೆ ಬಾರದೆ ಪ್ರಜ್ಞಾಹೀನ ಅವಸ್ಥೆಗಳ ಒಳಗೆ ಹುದುಗಿವೆ.

ವೈಶ್ವಿಕ ಮಹಾಪ್ರಜ್ಞೆ ಅಥವಾ ಮಹಾಘನಲಿಂಗ ಪರಮಾತ್ಮ ನಮ್ಮ ಆಳದ ೪ನೇ ಅಂತಸ್ಥಿನಲ್ಲಿ ಹುದುಗಿರುತ್ತಾನೆ. ನಾವು ಇಷ್ಟಲಿಂಗವಿಡಿದು ನಮ್ಮೊಳಗಿದ್ದ ಪ್ರಜ್ಞಾಹೀನ ಅವಸ್ಥೆಗಳಿಗೆ ಇಳಿಯುತ್ತಾ ಹೋದಂತೆ ನಮ್ಮ ಅಸ್ತಿತ್ವದ ನಿಜ



ಅವಸ್ಥೆ ಬೆಳಕಿಗೆ ಬರುತ್ತಾ ಹೋಗುತ್ತವೆ. ಕೊನೆಗೆ ೪ನೇ ಅಂತಸ್ತಿಗೆ ಇಳಿದಾಗ ನಮ್ಮ ಅಂಗ ಮತ್ತು ಲಿಂಗದ ಸಾಮರಸ್ಯವಾಗಿ ನಮ್ಮ ಅಸ್ತಿತ್ವ ಸಂಪೂರ್ಣವಾಗಿ ಮಹಾಪ್ರಜ್ಞೆಯ ಬೆಳಕಾಗುತ್ತದೆ.

ನಮ್ಮ ಪ್ರಜ್ಞಾಹೀನ ಅವಸ್ಥೆಯ ಆಳಕ್ಕೆ ಇಳಿಯುತ್ತಾ ಹೋದಂತೆ ಬಾಹ್ಯದಲ್ಲಿ ನಮ್ಮ ಪ್ರಜ್ಞಾವಸ್ಥೆ ಮೇಲೆ ಬೆಳೆಯುತ್ತ ಜಗದಲ್ಲಿ ವ್ಯಾಪಿಸುತ್ತಾ ಹೋಗುತ್ತದೆ. ಮಹಾನುಭಾವಿ ಶರಣರು, ಸಿದ್ಧರು ತಮ್ಮ ಅಂತರಂಗದ ಆಳಕ್ಕೆ ಇಳಿದವರು ಆಗಿರುತ್ತಾರೆ. ಅದಕ್ಕಾಗಿ ಹೊರಗು ಸಮಾಜದಲ್ಲಿ ಎತ್ತರಕ್ಕೆ ಬೆಳೆದವರಾಗಿರುತ್ತಾರೆ. ಪ್ರೇಶಿತರ, ದಾರ್ಶನಿಕರ ಮಹಾತ್ಮರ ಕಾರ್ಯಗಳು ಅವರ ಅಂತರಂಗದ ಆಲದಲ್ಲಿ ೪ನೇ ಅಂತಸ್ತಿನಲ್ಲಿದ್ದ ಮಹಾಪ್ರಜ್ಞೆಯಿಂದಲೆ ಹೊರಹೊಮ್ಮುತ್ತವೆ.

ಅಮೇರಿಕದ ಖ್ಯಾತ "ವ್ಯಕ್ತಿ ಅತೀಂದ್ರಿಯ ಮನೋವಿಜ್ಞಾನಿ (**Transpersonal psychologist**) ಕೆನೆಥ್ ಅರ್ಲ್‌ವಿಲಬರ. ತನ್ನ ವಿಲಬರ-ಕೂಂಬ ಪ್ರಜ್ಞಾ ಮಾದರಿ (**Wilber-Comb model of consciosness**) ಎಂಬ ಗ್ರಂಥದಲ್ಲಿ ಬರೆಯುತ್ತಾನೆ. "ಮಾನವರ ಆಳದ ಒಳಗಿನ ಪ್ರಜ್ಞೆಯು ಬ್ರಹ್ಮಾಂಡದ ಸಂಪೂರ್ಣ ಮತ್ತು ಅಂತಿಮ ವಾಸ್ತವತೆಗೆ ಹೋಲುತ್ತದೆ. ಅದು ಸ್ಥಳರಹಿತವಾಗಿದೆ ಆದ್ದರಿಂದ ಅದು ಅನಂತವಾಗಿದೆ. ಅದು ಸಮಯಾತೀತವಾಗಿದೆ ಆದ್ದರಿಂದ ಶಾಶ್ವತವಾಗಿದೆ ಅದರ ಹೊರಗೆ ಯಾವದೆ ಅಸ್ತಿತ್ವಗಳಿಲ್ಲ"

ಶ್ರೀ ಅರವಿಂದ ಮಹರ್ಷಿಗಳು ಸಹ ಬರೆದಿದ್ದಾರೆ "ಕೇವಲ ಪ್ರಜ್ಞೆಯೆ ಅಸ್ತಿತ್ವದಲ್ಲಿರುವ ಮೂಲಭೂತ ವಸ್ತುವಾಗಿದೆ. ಅದು ಶಕ್ತಿ ಚಲನೆ ಎಲ್ಲವೂ ಇದೆ. ಪ್ರಜ್ಞೆಯ ಚಲನೆಯೆ ಬ್ರಹ್ಮಾಂಡವನ್ನು ಮತ್ತು ಅದರಲ್ಲಿರುವ ಎಲ್ಲವನ್ನು ಸೃಷ್ಟಿಸುತ್ತದೆ."

"ಮಹಾಪ್ರಜ್ಞೆಯೆ ಪರಮಾತ್ಮ" ಶರಣರು ಇದಕ್ಕೆ ಲಿಂಗವೆಂದರು. ಲಿಂಗದ ವಾಸ ಮನುಜನಂಗದಲ್ಲಿಯೇ ಇದೆ. ನೋಡುವ ದೃಷ್ಟಿ ಬೇಕು ಅದಕ್ಕಾಗಿ ಶ್ರೀ ಬಸವಣ್ಣನವರು "ಎನ್ನ ಕಾಲೆ ಕಂಬ ದೇಹವೆ ದೇಗುಲ ಶಿರ ಹೊನ್ನದ ಕಳಸ"ವೆಂದರು. ಶ್ರೀ ಬಸವರ ಸಮಕಾಲಿನ ಶರಣ ಅಂಬಿಗರ ಚೌಡಯ್ಯ

“ಅಷ್ಟ ತನುವಿನೊಳಗೆ ಹುದುಗಿದ್ದ ಲಿಂಗ
ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ”

ಸಂಕೀರ್ಣ ವ.ಸಂ.೧ ಅಂಬಿಗರ ಚೌಡಯ್ಯ ೨೬

ದೇಹದಲ್ಲಿಯೇ ಪ್ರತ್ಯಕ್ಷ ಲಿಂಗವನು ಕಂಡ ಮಹಾನುಭಾವಿ ಶರಣ ಅಂಬಿಗರ ಚೌಡಯ್ಯನವರು.

ಇದರ ಅರ್ಥ ವಿಶ್ವದ ದೇವರು ನಿಮ್ಮೊಳಗೆ ಇದ್ದಾನೆ. ಹಾಗಾದರೆ ನಾವು ಈ ಜಗತ್ತಿನಲ್ಲಿ ನಮ್ಮನ್ನು ಇಷ್ಟು ಅಸಹ್ಯ ಪರಕೀಯರೆಂದು ಏಕೆ ಭಾವಿಸುತ್ತೇವೆ? ಇಲ್ಲಿ ನಮಗೆ ಎಲ್ಲವು ಇಷ್ಟು ಪ್ರತಿಕೂಲವಾಗಿ ಏಕೆ ಕಾಣುತ್ತದೆ? ಜೀವನ ಸಂಪೂರ್ಣವಾಗಿ ಅನುಪಯುಕ್ತವಾಗಿದೆ ಎಂದು ಏಕೆ ಭಾವಿಸುತ್ತೇವೆ? ಕೆಲವರಿಗಂತೂ ಅವರ ಅಸ್ತಿತ್ವದ ಬಗ್ಗೆಯೇ ಆಳವಾದ ಅಸಹ್ಯ ಭಾವನೆ ಬರುತ್ತದೆ. ಕೆಲವರು ಈ ದುಃಖದ ಹೊರೆಯೊಂದಿಗೆ ಬದುಕುವದನ್ನು ಮುಂದುವರಿಸುವದರಲ್ಲಿ ಏನು ಅರ್ಥವಿದೆ ಎಂದು ಪ್ರಶ್ನಿಸುತ್ತಾರೆ. ಅನೇಕರು ಸ್ವಯಂವಿನಾಶ ಮತ್ತು ತಮ್ಮ ಅಸ್ತಿತ್ವದ ಅಳಿವಿನ ಹಂಬಲವನ್ನು ಅನುಭವಿಸುತ್ತಾರೆ. ಮಾನವ ಸಂಕಟದ ಸಮಸ್ಯೆಯ ಮೂಲ ಬಾಹ್ಯ ದೈವಿಕ ಅಸ್ತಿತ್ವ ಮತ್ತು ಅದರ ಸರ್ವಶಕ್ತ ಶಕ್ತಿಯನ್ನು ನಂಬುವದರಲ್ಲಿದೆ. ಇದು ತಪ್ಪುನಂಬಿಕೆಯಿಂದ ಹುಟ್ಟಿಕೊಂಡ ಅಸ್ತಿತ್ವವಾದದ (**Existential Crisis**)ಬಿಕ್ಕಟ್ಟು ಆಗಿದೆ. ಎಲ್ಲವು ಪರದೈವವೇ ನಿಶ್ಚಯಿಸಿ ಮಾಡುತ್ತಿದ್ದರೆ ತಾನು ಮಾಡುವದೇನು? ತನ್ನ ಅಸ್ತಿತ್ವದ ಅವಶ್ಯಕತೆ ಏನು? ಇದು ಮನಸ್ಸನ್ನು ಪಲಾಯನವಾದದ ಕಡೆಗೆ ಮುನ್ನಡೆಸಲು ದಾರಿ ಮಾಡಿಕೊಡುತ್ತದೆ ಮತ್ತು ಜೀವನದ ಅಸ್ತಿತ್ವದಲ್ಲಿ ಭರವಸೆಯ ಅಭಾವ ಹುಟ್ಟಿಸುತ್ತದೆ.

ಇಷ್ಟಲಿಂಗಯೋಗವು ನಿಮಗೆ ಹೊಸ ದೃಷ್ಟಿಯನ್ನು ನೀಡುತ್ತದೆ. ಅದು ನಿಮಗೆ ನಿಮ್ಮ ಆಳವಾದ ಪ್ರಜ್ಞೆಯನ್ನು ಭೇದಿಸಲು ಅನುವು ಮಾಡಿಕೊಡುತ್ತದೆ ಮತ್ತು ನಿಮ್ಮನ್ನು ಅಸ್ತಿತ್ವದ ತಿರುಳಿಗೆ ಕೊಂಡೊಯ್ಯುತ್ತದೆ. ಅಲ್ಲಿ ನೀವು ಇಲ್ಲಿಯವರೆಗೆ ಯಾವ ದೇವರು ತನ್ನಿಂದ ಭಿನ್ನವಾಗಿದ್ದಾನೆ ಎಂದು ಭಾವಿಸುತ್ತಿದ್ದಿರೋ ಅದೇ ದೇವರ ಪ್ರಜ್ಞೆಯನ್ನು ಹೊಂದಿದ್ದೀರಿ ಎಂದು ನೀವು ಸ್ವತಃ ಅನುಭವಿಸುತ್ತೀರಿ.



“ನಾ ದೇವನಲ್ಲದೆ ನೀ ದೇವನೆ?......
ನಾ ದೇವ ಕಾಣಾ ಗುಹೇಶ್ವರ”

(ಸ.ವ.ಸಂ.೨. ಅಲ್ಲಮಪ್ರಭು ೫೫೮)

ಎಂಬ ಆಶ್ವಾಸನ ನೀವಾಗುತ್ತೀರಿ. ಇಲ್ಲಿ ಏನಾಗುತ್ತಿದೆಯೋ ಅದೆಲ್ಲ ನಿಮ್ಮಿಂದಲೆ ಆಗುತ್ತಿದೆ. ನೀವೇ ಯಜಮಾನರೆಂದ ಬಳಿಕ ನಿಮ್ಮ ಇಡೀ ಜೀವನ ಉತ್ಸವ ಮತ್ತು ಉತ್ಸಾಹದ ಆಚರಣೆಯಾಗುತ್ತದೆ. ನಿಮ್ಮ ವರ್ತನೆ ಮತ್ತು ವ್ಯವಹಾರ ಸಂಪೂರ್ಣ ಪರಿವರ್ತನವಾಗುತ್ತದೆ.

೨. ವರ್ತನೆ:

ವರ್ತನೆ ಎಂದರೇನು? ಒಂದು ಆಲೋಚನಾ ವಿಧಾನ, ಮಾನಸಿಕ ನೋಟ. ಮನೋವಿಜ್ಞಾನವು ವರ್ತನೆಯನ್ನು[೧೭] “ವ್ಯಕ್ತಿಯ ಕ್ರಿಯೆಯನ್ನು ವಿವರಿಸುವ ಅಂತರಿಕ ಪರಿಣಾಮಕಾರಿ ದೃಷ್ಟಿಕೋನ”ವೆಂದು ವಾಖ್ಯಾನಿಸುತ್ತದೆ. ಅದಕ್ಕಾಗಿ ವರ್ತನೆ ಕೇವಲ ಆಲೋಚನೆಯ ವಿಧಾನವಾಗಿರದೆ ಭಾವನಾತ್ಮಕ ಸ್ವಭಾವವಾಗಿದೆ.

ಭಾವನಾತ್ಮಕ ಸ್ವಭಾವದ ಪ್ರಚೋದನಾತ್ಮಕ ಅಥವಾ ಪ್ರೇರಣಾತ್ಮಕ ಶಕ್ತಿಯೇ ಕ್ರಿಯೆಯನ್ನು ನಿರ್ಧರಿಸುತ್ತದೆ. ವರ್ತನೆಗೆ ಮೂರು ಅಂಗಗಳಿವೆ.

೧. ಅರಿವು ಅಥವಾ ಆಲೋಚನೆ (**Thinking**)
೨. ಪರಿಣಾಮಕಾರಿ ಭಾವನೆ
(**Effective emotional motivation**)
೩. ಸಂಯೋಜಕತ್ವ ಅಥವಾ ಸಿದ್ಧತೆ
(**Planning and implementation**)

ಸಾದಾ ಭಾಷೆಯಲ್ಲಿ ಇದನ್ನು ಆಲೋಚನೆ, ಸಂವೇದನೆ, ಸಮ್ಮತಿ (**Thinking, feeling and willing**) ಎಂದು ಹೇಳಬಹುದು. ಮನೋವಿಜ್ಞಾನ **mind** ಎಂದು ಮನುಷ್ಯನ “ಎಲ್ಲ ಮಾನಸಿಕ ಕಾರ್ಯಗಳ ಸಂಯೋಜಿತ ಘಟಕಕ್ಕೆ” ಗುರುತಿಸುತ್ತದೆ ಮತ್ತು ಮನುಷ್ಯರ ಮೆದುಳು ಇದರ ಅಂಗವೆಂದು ಪ್ರಸ್ತಾಪಿಸುತ್ತದೆ.

ಶರಣರ ಪ್ರಕಾರ ಮನುಷ್ಯರ ಸ್ವಭಾವ ವ್ಯಕ್ತಿನಿಷ್ಠವಾಗಿರುತ್ತದೆ. ಅದಕ್ಕಾಗಿ ಆತನ ಮನಸ್ಸು ಮತ್ತು ಸ್ವಭಾವ ಪರಸ್ಪರ ಭಿನ್ನವಾಗಿರದೆ ಸಂಯೋಜಿತವಾಗಿದೆ. ಸ್ವಭಾವದಲ್ಲಿ ಪರಸ್ಪರ ಕ್ರಿಯೆಗಳ ಭಾಗಗಳಿರುತ್ತವೆ. ಪ್ರತಿಯೊಂದು ಭಾಗ ತನ್ನದೆ ಆದ ವಿಶಿಷ್ಠ ಮನ ಮತ್ತು ಪ್ರಜ್ಞೆ ಹೊಂದಿರುತ್ತದೆ. ಇದರಿಂದಾಗಿ ಶರಣರ ಮನೋಭಾವದ ಪರಿಕಲ್ಪಪನೆಗಳಿಗೆ ಅನುಸರಿಸಿ ತಮ್ಮ ವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಬಹಳ ಸರಳವಾಗುತ್ತದೆ. ವಿಭಿನ್ನ ವರ್ತನೆಗಳು ಅವರವರ ಸ್ವಭಾವದಲ್ಲಿ ಪ್ರಬಲವಾದ ಭಾಗಕ್ಕೆ ಸಂಬಂಧಿಸಿರುತ್ತವೆ.

ವ್ಯಾಪಕವಾಗಿ ಕಂಡರೆ ಮನುಷ್ಯನ ಅಸ್ತಿತ್ವದ ಎರಡು ಭಾಗಗಳಿವೆ.

೧. ಬಾಹ್ಯ ಅಸ್ತಿತ್ವ(**personality**)

೨. ಅಂತರಿಕ ಅಸ್ತಿತ್ವ

– ಇದೆ ನಿಜವಾದ ಜೀವಿಯಾಗಿರುತ್ತದೆ. ಈ ಅಸ್ತಿತ್ವವೆ ವ್ಯಕ್ತಿಯನ್ನು ರೂಪಿಸುತ್ತದೆ.

ವಾಸ್ತವದಲ್ಲಿ ಬಾಹ್ಯ ಅಸ್ತಿತ್ವವು ಅಂತರಿಕ ಅಸ್ತಿತ್ವದ ಅಭಿವ್ಯಕ್ತಿಯ ಸಾಧನೆಯಾಗಿದೆ. ಬಾಹ್ಯ ಅಸ್ತಿತ್ವದ ಮೂರು ಭಾಗಗಳಿವೆ.

೧. ಭೌತಿಕ ಜೀವಿ:

ಶರಣರ ಕಲ್ಪನೆಯಲ್ಲಿ ದೇಹದ ಸರ್ವಾಂಗೀಣ ಆಗುಹೋಗುಗಳ ಶ್ರೇಷ್ಠ ಕೇಂದ್ರ ಮನಸ್ಸು ಆಗಿದ್ದರು ದೇಹ ತನ್ನದೇ ಆದ ವಿಶೇಷ ಪ್ರಜ್ಞೆ ಮತ್ತು ಬುದ್ಧಿವಂತಿಕೆ ಹೊಂದಿರುತ್ತದೆ. ದೇಹದ ಸ್ಮರ್ಣ ಕೂಡ ಒಂದು ಪೀಡಿಯಿಂದ ಇನ್ನೊಂದು ಪೀಡಿಗೆ, ಖಚಿತವಾಗಿ ಹೋಗುತ್ತದೆ. ಉದಾ. ಮಕ್ಕಳ ಮುಖದ ನೋಟ ತಾಯಿ ತಂದೆಗೆ ಹೋಲುತ್ತದೆ.

೨. ಪ್ರಾಣಜೀವಿ ಅಥವಾ ಮರ್ಮಾಂಗಳ ಜೀವಿ:

ಇದರಲ್ಲಿ ಪ್ರಾಣಶಕ್ತಿ, ಪ್ರವೃತ್ತಿ ಮತ್ತು ಪ್ರಚೋದನೆಗಳಿರುತ್ತವೆ. ಆನಂದ ತತ್ವ ಸುಖವಾದ ದೃಷ್ಟಿಕೋನವಿರುತ್ತದೆ.



೩. ಮಾನಸಿಕಜೀವಿ:

ಆಲೋಚನೆಗಳು, ಕಲ್ಪನೆಗಳು ಜ್ಞಾನ ಮತ್ತು ಸತ್ಯಗಳು.

ಮನುಷ್ಯರ ವರ್ತನೆಗಳು ಅವರ ತ್ರಿವಿಧ ಅಸ್ತಿತ್ವದ ಮೇಲೆ ಪರಿವರ್ತನಾತ್ಮಕ ಪರಿಣಾಮ ಬೀರುತ್ತವೆ ಮತ್ತು ಆತ ತನ್ನ ಜೀವದೆಡೆಗೆ, ತನ್ನೆಡೆಗೆ ಮತ್ತು ಇತರರ ಕಡೆ ತನ್ನ ಕೆಲಸದ ಕಡೆ ಹಾಗು ತನಗುಂಟಾಗುವ ದುಃಖದೆಡೆಗೆ ನೋಡುವ ನೋಟಗಳ ಮೇಲೆ ಪ್ರಭಾವ ಬೀರಿ ಅವುಗಳನ್ನು ಪರಿವರ್ತಿಸುತ್ತವೆ.

ಮನುಷ್ಯರು ದುಃಖದ ಪ್ರಸಂಗಗಳನ್ನು ಎದುರಿಸುತ್ತಿದ್ದಾಗ ಅವರ ವರ್ತನೆಯಲ್ಲಿ ಬದಲಾವಣೆ ಆಗುತ್ತವೆ. ಜೀವನದ ಕಠಿಣ ಬಿಕ್ಕಟ್ಟಿಗೆ ಮನುಷ್ಯನ ಪ್ರತಿಕ್ರಿಯೆಯಲ್ಲಿ ಐದು ಹಂತಗಳು ಕಂಡುಬರುತ್ತವೆ.

೧. ದಿಗಿಲು ಅಥವಾ ಗಾಬರಿ (**panic**)

೨. ಜಡತ್ವ (**inertia**)

೩. ಶ್ರಮಿಸುವದು(**striving**)

೪. ನಿಭಾಯಿಸುವದು(**coping**)

೫. ಪರಿಸ್ಥಿತಿಯ ಮೇಲೆ ನಿಯಂತ್ರಣ ಸಾಧಿಸುವದು(**mastery**)

ಅಂತರಿಕ ಅಸ್ತಿತ್ವ:

ಮನುಷ್ಯರು ಸ್ವತಂತ್ರವಾಗಿ ಸ್ವನಿಯಂತ್ರಿತ ಜೀವನವನ್ನು ರೂಪಿಸುವದಕ್ಕಾಗಿ ಅವರ ಆಳವಾದ ಅಂತಃಪ್ರಜ್ಞೆ ಪರಿಣಾಮಕಾರಿ ಸಾಧನವಾಗಿದೆ. ಆಂತರಿಕ ಪ್ರಜ್ಞೆಯಿಂದ ವ್ಯಕ್ತಿ ಜೀವನದಲ್ಲಿ ಎಲ್ಲವನ್ನು ನೋಡುತ್ತಾನೆ ಮತ್ತು ಅವುಗಳಿಗೆ ಪ್ರತಿಕ್ರಿಯಿಸುತ್ತಾನೆ.

ಮನೋವೈಜ್ಞಾನಿಕ ಪಾತಳಿಯಿಂದ ಹೇಳಬೇಕಾದರೆ ಮನುಷ್ಯನ ನೋಟ ಅವನ ಹೃದಯಕ್ಕಿಳಿದು ನೋಡುವವರೆಗೆ ಪರಿಶುದ್ಧವಾಗಲಾರದು. ಯಾರು ಹೊರಗೆ ನೋಡುತ್ತಾರೆಯೋ ಅವರು ಸ್ವಪ್ನ ಕಾಣುತ್ತಾರೆ. ಯಾರು ಒಳಗೆ ನೊಡುತ್ತಾರೆಯೋ ಅವರು ಜಾಗೃತವಾಗಿ ಎದ್ದೇಳುತ್ತಾರೆ. ಇಷ್ಟಲಿಂಗೋಪಾಸನೆ ಮನುಷ್ಯರಿಗೆ ತಮ್ಮ ಹೃದಯದಲ್ಲಿಳಿದು ನೋಡಲು ಪ್ರವೃತ್ತ ಮಾಡುತ್ತದೆ. ಇದರಿಂದ ಮನುಷ್ಯನ ಭೌತಿಕ ಶರೀರದ ಪ್ರಜ್ಞೆ ಜಾಗೃತವಾಗುತ್ತದೆ. ಹೀಗೆ

ಜಾಗೃತವಾದ ಪ್ರಜ್ಞೆ ಮೆಲ್ಲಮೆಲ್ಲನೆ ಏಳುತ್ತ ಮಹಾಘನಲಿಂಗದ ಪ್ರಜ್ಞೆಯ ಕಡೆಗೆ ಹೋಗಿ ಸಮರಸಹೊಂದುತ್ತದೆ.

ಸಾಮಾನ್ಯವಾಗಿ ಮನುಷ್ಯನಿಗೆ ನಾನು ಇದ್ದೇನೆ, ನನ್ನ ಅಸ್ತಿತ್ವ ಇದೆ ಮತ್ತು ನಾನು ಜೀವಂತವಾಗಿದ್ದೇನೆ ಎಂಬ ಧೃಡ ವಿಶ್ವಾಸವಿರುತ್ತದೆ. ಇದಕ್ಕೆ ಕಾರಣ ಪ್ರಜ್ಞೆ ಅಥವಾ ಅರಿವು. ದೇಹದ ಹೊರತಾಗಿ ತನ್ನ ಪ್ರಜ್ಞೆ ಅಥವಾ ಅರಿವು ಹೊಂದಿರಲು ಸಾಧ್ಯವಿಲ್ಲ. ಶರಣರು ಅಂಗ-ಲಿಂಗ ಸಮರಸದ ಸತ್ಯವನ್ನು ಸಾರುತ್ತಾರೆ. ಇಷ್ಟಲಿಂಗ ಸಂಪೂರ್ಣ ಬ್ರಹ್ಮಾಂಡವನ್ನಾವರಿಸಿ ವ್ಯಾಪಿಸಿದ ಮಹದರಿವು ಅಥವಾ ಮಹಾಪ್ರಜ್ಞೆಯ ಸೂಕ್ಷ್ಮ ಸ್ವರೂಪವಾಗಿದೆ. ವೈಜ್ಞಾನಿಕ ಸತ್ಯ ಆಧಾರಿತ ಆಧ್ಯಾತ್ಮಿಕ ಅನುಭಾವ ಪರಿಪೂರ್ಣ ಇಷ್ಟಲಿಂಗೋಪಾಸನೆಯಾಗಿದ್ದ ಕಾರಣ ಅಂಗದ ಮೇಲೆ ಲಿಂಗ ಧರಿಸಿ ಉಪಾಸನೆ ಮಾಡಿದ ಸಾಧಕ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಫಲಪ್ರಾಪ್ತಿ ಪಡೆಯಲಾರದೆ ಇರಲಾರ. ತನ್ನ ದಿವ್ಯಫಲದೃಪಿ ಪರಿಣಾಮದಿಂದಾಗಿ ಇಷ್ಟಲಿಂಗಯೋಗ ೧೨ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಬಸವಣ್ಣನವರು ರಚಿಸಿದ  ಮಹಾಕಮ್ಮಟದಲ್ಲಿ ದೇಶದ ಮೂಲೆ ಮೂಲೆಯಿಂದ ಬಂದ ಲಕ್ಷಾವಧಿ ಜನರು ಸಹಭಾಗಿಯಾಗಿ ಜೀವನದಲ್ಲಿ ಮಹಾಸಾಫಲ್ಯ ಪಡೆದುಕೊಂಡು ಶರಣರಾಗಿ ಬಾಳಿದರು.

ಇಷ್ಟಲಿಂಗೋಪಾಸನೆ ಕೋಟಿಕೋಟಿ ಜನರನ್ನು ತನ್ನೆಡೆ ಆಕರ್ಷಿಸಿ ಹಿಡಿದಿಡಲು ಕಾರಣವೆಂದರೆ ಭಕ್ತಿ, ವಿಶ್ವಾಸ ಮತ್ತು ನಿಷ್ಠೆಯನ್ನು ಆಧಾರ ವಾಗಿಟ್ಟುಕೊಂಡು ಮಾಡುವ ಉಪಾಸನೆ ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಫಲಕೊಟ್ಟು ಮನುಷ್ಯನನ್ನು ಪರಿವರ್ತನೆ ಮಾಡುತ್ತದೆ.

ಇಷ್ಟಲಿಂಗೋಪಾಸನೆ ಆರಂಭ ಮಾಡಿದಂದಿನಿಂದ ಮನುಷ್ಯನ ಆಲೋಚನೆಗಳು ಪರಿವರ್ತನವಾಗುತ್ತವೆ. ಋಣಾತ್ಮಕ ವಿಚಾರಗಳ ಬದಲಾಗಿ ಧನಾತ್ಮಕ ವಿಚಾರಗಳು ಉದ್ಭವಿಸುತ್ತವೆ ಅರ್ಥಾತ **Thinking** ಬದಲಾಗುತ್ತದೆ. ವಿಚಾರ ಬದಲಾದಂತೆ ಮೆದುಳಿನಲ್ಲಿಯ ನರಸಂಪರ್ಕಗಳ ಹೊಸ ಮಾರ್ಗನಿರ್ಮಾಣವಾಗಿ ಕ್ರಮೇಣವಾಗಿ ಹೊಸ ಆಯಾಮಹೊಂದಿದ್ದ ನವ ಮೆದುಳು ನಿರ್ಮಾಣವಾಗುತ್ತದೆ.

ಮನುಷ್ಯನ ಭಾವನೆಗಳು ಪರಿವರ್ತನವಾಗುತ್ತವೆ. (**change in**



**emotions**) ಮನುಷ್ಯರಲ್ಲಿ ಮೆದುಳಿನ ಕ್ರಿಯಾ ಬದಲಾವಣೆಯಿಂದ ೬ ಪ್ರಕಾರದ ಮೂಲ ಭಾವನೆಗಳು ಉದ್ಭವಿಸುತ್ತವೆ. ೧. ಸಂತೋಷ ೨. ದುಃಖ ೩. ಭಯ ೪. ಅಸಡ್ಯ ೫. ಕೋಪ ೬. ಆಶ್ಚರ್ಯ

ಈ ಮೂಲ ಭಾವನೆಗಳು ವಿವಿಧ ಪ್ರಮಾಣದಲ್ಲಿ ಸೇರಿ ಹೊಸ ಭಾವನೆಯ ಅನುಭವ ಕೊಡುತ್ತವೆ. ಭಾವನೆಗಳು ದೇಹ ಮತ್ತು ಮನಸ್ಸು ಎರಡು ಆಯಾಮದ ಮೇಲೆ ಕಾರ್ಯ ಮಾಡುತ್ತವೆ. ಭಾವನೆಗಳ ತೀವ್ರತೆ ಮುಖ್ಯವಾಗಿ ಎರಡು ಅಂಶಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಭಾವನೆಯನ್ನು ಪ್ರಚೋದಿಸುವದಕ್ಕೆ ಕಾರಣವಾದುದರ ಸಂಭಾವ್ಯ ಫಲಿತಾಂಶ ಮತ್ತು ಇವುಗಳನ್ನು ಸಾಧಿಸುವದರ ವಿರುದ್ಧ ಗ್ರಹಿಸದ ತಡೆ,. ಭಾವನೆಗಳನ್ನು ಪ್ರಭಾವ ಮಾಡುವ ಇತರ ವಸ್ತುಗಳೆಂದರೆ ವ್ಯಕ್ತಿತ್ವ, ಸಂಸ್ಕೃತಿ ಲೈಂಗಿಕ ಶಕ್ತಿ, ಸಾಮಾಜಿಕ ಸಮಾವೇಶಗಳು, ಬಹಿರಂಗಪಡಿಸುವ ಭಯ, ಭಾವನಾತ್ಮಕ ಸೊಂಕುಗಳು. ಇಷ್ಟಲಿಂಗೋಪಾಸನೆ ಆಲೋಚನೆಗಳ ಜೊತೆ ಮನುಷ್ಯರ ಭಾವನೆಗಳನ್ನು ಪರಿವರ್ತಿಸುತ್ತದೆ. ಇದರ ಜೊತೆಗೆ ಮನುಷ್ಯನ ವರ್ತನೆಗಳು ಬದಲಾಗುತ್ತವೆ. ಅಂತಿಮವಾಗಿ ಆತನಲ್ಲಿಯ ಹಳೆಯ ಸ್ಮರಣಗಳ ಬದಲಾಗಿ ನವ ಆಲೋಚನೆ, ಭಾವನೆ ಮತ್ತು ವರ್ತನೆಯ ಸ್ಮರಣಗಳು ನಿರ್ಮಿತವಾಗುತ್ತವೆ.

ಇಷ್ಟಲಿಂಗೋಪಾಸನೆ ಆರಂಭಿಸಿದ ಕೆಲವೆ ಸಮಯದಲ್ಲಿ ಸಾಧಕ ಸಂಪೂರ್ಣವಾಗಿ ಪರಿವರ್ತನೆ ಹೊಂದಿ ಹೊಸ ಮನುಷ್ಯನಾಗಿ ಹೊರಹೊಮ್ಮುತ್ತಾನೆ. ಜಂಬುದ್ವೀಪ ನವಖಂಡದ ಶ್ರೀ ಬಸವ ಗುರುವಿನಿಂದ ಸ್ವಯಂಸಿದ್ಧವಾಗಿ ಉದಯಕ್ಕೆ ಬಂದ ಇಷ್ಟಲಿಂಗೋಪಾಸನೆ ಕೇವಲ ಅವರೊಬ್ಬರೆ ಅಥವಾ ಕೇವಲ ನಿಷ್ಠಾವಂತ ಅನುಯಾಯಿಗಳು ಸಾಧನೆ ಮಾಡಿ ಹೇಳಿದ ಮಾತಲ್ಲ

೧೨ನೇ ಶತಮಾನದ ಮಧ್ಯ ಕಾಲದ ಕಲ್ಯಾಣದಲ್ಲಿ ಒಂದೇ ಕಾಲಘಟ್ಟದಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ ಸಮಕಾಲಿನ ಮಹಾ ಮೇಧಾವಿಗಳು, ಸುಪ್ರಸಿದ್ಧ ಧಾರ್ಮಿಕ ಪುರುಷರು, ಯೋಗಿಗಳು ಸಂತರು, ಕಲ್ಪನೆಗೂ ಮೀರಿದ ಬಹುದೊಡ್ಡ ಪ್ರಮಾಣದಲ್ಲಿ ಇಷ್ಟಲಿಂಗೋಪಾಸನಾ ಪ್ರಯೋಗ ಮಾಡಿ ಅದರ ಸಿದ್ಧಿಫಲವನ್ನು ಪಡೆದು ಜಗಕ್ಕೆ ಅದರ ಮಹತ್ವವನ್ನು ಸಾರಿದರು. ಇಂಥ

ಘಟನೆ ಜಗತ್ತಿನ ಇತಿಹಾಸದಲ್ಲಿ ಮತ್ತೊಂದು ಆಗಿಲ್ಲ. ಈ ಪ್ರಯೋಗದಲ್ಲಿ ಸಹಭಾಗಿಯಲ್ಲರೊಬ್ಬರಾದ ಮಹಾನುಭಾವಿ ಶರಣ ಸಿದ್ಧರಾಮರು ಹೇಳುತ್ತಾರೆ. "ಬಸವ ನಿಜಯೋಗದಲಿ ಬಸವನಾ ನೀನಾದೆ"

ಈ ಮಹಾಕಮ್ಮಟದ ಪರಿಣಾಮವಾಗಿ ಜನರು ಪೂರ್ವದ ಯೋಗ ಮಾರ್ಗ ಬಿಟ್ಟು ಶುದ್ಧ ಶರಣ ಸಂಪ್ರದಾಯವನ್ನು ಸ್ವೀಕರಿಸಿದರು. ಜಗದಲ್ಲಿ ಶರಣರ ಆಗಮನವಾಯಿತು. ಶರಣಯುಗ ಆರಂಭವಾಯಿತು. ಶರಣರು ಸೀಮಿತ ಸಂಸಾರ ವಿರತರಾಗಿದ್ದರು. ಅಸೀಮಿತ ಜ್ಞಾನ ಭಕ್ತಿ ಸಾಧಕರಾಗಿದ್ದ ಕಾಯಕನಿರತ ಪರೋಪಕಾರಿ ಪರಿಶುದ್ಧ ಜೀವಿಗಳಾಗಿದ್ದರು. ಇವರಿಂದ ಮಧ್ಯ ಮತ್ತು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಹರಡಿದ ಶರಣ ಧರ್ಮ ಮತ್ತು ಸಂಸ್ಕೃತಿ ಅಸ್ತಿತ್ವಕ್ಕೆ ಬಂದಿತು.

ಲಿಂಗಾಯತದ ನೂರಕ್ಕೆ ನೂರು ಪ್ರಾಚೀನ ತಾಳೆ ಓಲೆಯ ಗರಿಯ ಹಸ್ತಪ್ರತಿಗಳಲ್ಲಿ "ಶ್ರೀ ಗುರು ಬಸವ ಲಿಂಗಾಯ ನಮಃ" ಎಂದೆ ಲೇಖನ ಪ್ರಾರಂಭಗೊಂಡುದ್ದನ್ನು ಕಂಡು ಶ್ರೀ ಬಸವಣ್ಣನವರೆ ಗುರು, ಇಷ್ಟಲಿಂಗವೆ ನಿತ್ಯನಿರಂಜನ ಪರಂಜ್ಯೋತಿ ವಸ್ತು ಪರಮಾತ್ಮನೆಂದು ಹೇಳಬೇಕಾಗುತ್ತದೆ.

ಆದಿಪ್ರಮಥ[೧೮] ಶ್ರೀ ಬಸವರು ವಿಶ್ವಕಂಡ ಬಹು ಅಪರೂಪದ ದಾರ್ಶನಿಕರಾಗಿದ್ದರು. ಜೊತೆಗೆ ಮಹಾನ ಮೇಧಾವಿ ಮುತ್ಸದ್ದಿಗಳು ಆಗಿದ್ದರು. ತಾವು ಕಟ್ಟಿದ ಧರ್ಮ ಸಾಮ್ರಾಜ್ಯದ ಚತುರ್ಮುಖ ವಿಸ್ತಾರಕ್ಕಾಗಿ ಬಸವರು ನಾನಾದೇಶ, ನಾನಾ ಭಾಷೆಗಳ ಸೂದೂರ ಸ್ಥಾನಗಳಿಂದ ಸಮಕಾಲೀನ ಮಹಾಮೇಧಾವಿಗಳನ್ನು ಪ್ರಸಿದ್ಧ ಧಾರ್ಮಿಕ ಮಹಾಪುರುಷರನ್ನು ಕಲ್ಯಾಣಕ್ಕೆ ಆಕರ್ಷಿಸಿದರು. ಅವರ ಮನ ಮತ ಪರಿವರ್ತನೆ ಮಾಡಿ ಸಾಮಾಜಿಕ-ಧಾರ್ಮಿಕ-ಆಧ್ಯಾತ್ಮಿಕ ಕ್ರಾಂತಿ ಮಾಡಿದರು.




ಬೆಂಜಾಮಿನ ಬೆಟ್ಟಸ್ ಎಂಬ ಗಣಿತಜ್ಞನ **'The science of representationn'** ಎಂಬ ಗ್ರಂಥದಲ್ಲಿಯ ಪ್ರಜ್ಞೆಯ ಗಣಿತದ ಮಾದರಿಯ ಚಿತ್ರ ಇದಾಗಿದೆ. ಇದರ ಮಧ್ಯದಲ್ಲಿಯ ಕಪ್ಪು ಗೋಳಾಕಾರಗಳು ಪ್ರಜ್ಞೆಯಲ್ಲಿ ಪ್ರವೇಶಿಸುವ ದ್ವಾರಗಳಿಂತಿವೆ ಮತ್ತು ಈ ದ್ವಾರಗಳ ಪ್ರವೇಶವನ್ನು ಇಷ್ಟಲಿಂಗದಾಕಾರದ ಆಕೃತಿಗಳು ಕಾವಲು ಮಾಡುತ್ತಿದ್ದಂತೆ ತೋರುತ್ತವೆ. ಬೆಟ್ಟಸ್ **"Felt that consciousness is the only fact that we can study directly since all other objects of knowledge must be perceived through consciousness"** ಜ್ಞಾನದ ಎಲ್ಲ ಇತರ ವಸ್ತುಗಳನ್ನು ಪ್ರಜ್ಞೆಯ ಮೂಲಕ ಗ್ರಹಿಸಬೇಕಾಗುವುದರಿಂದ ನಾವು ನೇರವಾಗಿ ಅಧ್ಯಯನ ಮಾಡುವ ಏಕೈಕ ಸತ್ಯವೆಂದರೆ ಪ್ರಜ್ಞೆಯಾಗಿದೆ. ಅದನ್ನು ಪ್ರವೇಶಿಸುವ ದ್ವಾರವನ್ನೆ ಇಷ್ಟಲಿಂಗ ಸ್ವರೂಪದ ಆಕೃತಿಗಳು ರಕ್ಷಿಸುತ್ತಿರುವದು ಕಾಣುತ್ತೇವೆ. ಶರಣರು ಇಷ್ಟಲಿಂಗದ ಮುಖಾಂತ ಮಹಾಘನಲಿಂಗ ಪರಮಾತ್ಮನ ಮಹಾ ಪ್ರಜ್ಞೆಯನ್ನು ಪ್ರವೇಶಿಸಿದರು.

## ೪. ಲಿಂಗವಂತದ ಜನಪ್ರಿಯತೆಗೆ ಕಾರಣಗಳು

೧೨ನೇ ಶತಮಾನದಲ್ಲಿ ಅಷ್ಟು ದೊಡ್ಡ ಪ್ರಮಾಣದಲ್ಲಿ ಲಿಂಗವಂತ ಧರ್ಮಕ್ಕೆ ಜನರನ್ನು ಆಕರ್ಷಿಸಿದ ಪ್ರಮುಖ ಕಾರಣಗಳೆಂದರೆ–

ಲಿಂಗವಂತ ಧರ್ಮ: ಜಾತಿವಾದ, ವರ್ಣವಾದ, ಕುಲವಾದ ಆಶ್ರಮವಾದ, ಗೋತ್ರವಾದ, ನಾಮವಾದ, ವರ್ಗವಾದ ಮೇಲರಿಮೆ, ಕೀಳರಿಮೆ, ಕರ್ಮಕಾಂಡ, ಶಾಸ್ತ್ರಜಾಲ ವೈದಿಕತೆ, ಜ್ಯೋತಿಷ್ಯ, ಅಷ್ಟಾಂಗ ಕರ್ಮಯೋಗ ಜನ್ಮಾಂತರ, ಲೋಕಾಂತರ, ವಿಗ್ರಹಾರಾಧನೆ, ತೀರ್ಥಯಾತ್ರೆ ಮಡಿ ಮೈಲಿಗೆ, ಯಜ್ಞಾಧಿಕ ದುಷ್ಪ್ರಭಾವ, ಅನಾಚಾರ, ಅವಿಚಾರ ಶೋಷಣೆಗಳನ್ನು ವಿರೋಧಿಸಿ ಪರಿಶುದ್ಧ ತಿಳುವಳಿಕೆ ನಡೆವಳಿಗೆ ನೋಟಗಳುಳ್ಳ ಸಕಲ ಮಾನವ ಸಮಾನತೆಯ ಆಧಾರದ ಮೇಲೆ ನಿಂತ ಪರಿಶುದ್ಧ ಆಚರಣೆ, ಕಾಯಕ ದಾಸೋಹಗಳಂತಹ ಉದಾತ್ತ ತತ್ವಗಳ ಮೇಲೆ ನಿಂತ ಧರ್ಮ, ಮಾನವ ಜನಾಂಗದ ಕಲ್ಯಾಣಮಾಡುವ ಮಹಾ ಮಳೆಯನ್ನು ಸುರಿಸುವ ಲೋಸುಗ ಮಹಾಘನಲಿಂಗ ಪರಮಾತ್ಮನಲ್ಲಿ ನಿಷ್ಠೆವುಳ್ಳ ಮಾನವರೆಲ್ಲರು ಒಂದಾಗಿ ಕಟ್ಟಿದ ಧರ್ಮ. ಅದರ ಪ್ರಮುಖ ದೇಣಿಗೆ

### ಇಷ್ಟಲಿಂಗೋಪಾಸನೆ:

ಇಷ್ಟಲಿಂಗದ ಭೇದ ದೃಷ್ಟವಪ್ಪಿಮುಕ್ತಿ
ಬಚ್ಚಬರ್ರಿಯಾನತದ ನಿರ್ಗುಣದಲಿ
(ಸ.ವ.ಸ. ೪ ಸಿದ್ಧರಾಮೇಶ್ವರ ಪು–೨೬೨)

ಇಷ್ಟಲಿಂಗ ಗೂಢವೇನಿದೆ ಎಂದರೆ ಅದರ ಮೇಲೆ ಕೇವಲ ದೃಷ್ಟಿ ಇಟ್ಟು ನೋಡಿದರೆ ಸಾಕು ಎಲ್ಲ ಬಂಧನಗಳ ಬಹುಪಾಶದಿಂದ ಮುಕ್ತಿ ದೊರಕಿ ಬಚ್ಚಬಯಲಿನ ನಿರ್ಗುಣದಲ್ಲಿ ಬಯಲಾಗುತ್ತಾನೆ ಮನುಷ್ಯ.



ಒಪ್ಪಿಪ್ಪ ಕಮಳದಲಿ ತಪ್ಪದಿಹ ದೀಪ್ತಿಯಲಿ
ಒಪ್ಪಿಪ್ಪ ನಿತ್ಯದಿಂ ದಿಪ್ಪತರ್ರಲಿ
ಸಕಲ ಬ್ರಹ್ಮಾಂಡಗಳನ್ನೊಳಗು ಮಾಡಿ ಮೇಲೆ
ತೊಳಗಿ ಬೆಳಗುತ್ತಿಪ್ಪ ಎಮ್ಮ ಶರಣರ ಕರಸ್ಥಲದಲ್ಲಿ ಸಿಕ್ಕಿ
ಮಹಾದಿಪ್ತಿಯ ನಿಂಬುಗೊಂಡಂಥಾ ಕರಸ್ಥಳವು
ಆ ಕರಸ್ಥಳಕ್ಕೆ ಆವ ಬ್ರಹ್ಮಾಂಡಗಳು ಸರಿಯೆಂದೆಂಬೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯ
ಶರಣರ ಕರಸ್ಥಳವಪ್ರಮಾಣು

ಇಷ್ಟಲಿಂಗಕ್ಕೆ ಪೀಠವಾದ ಉಪಾಸಕನ ಕರಸ್ಥಲದ ಘನತೆ ವರ್ಣಿಸುತ್ತಾರೆ. ಸಿದ್ಧರಾಮೇಶ್ವರರು. ಸಹಜ ಸರಳವಾಗಿ ಪಂಡಿತ ಪಾಮರರೆಲ್ಲರು ಮಾಡಬಲ್ಲ ಇಷ್ಟಲಿಂಗೋಪಾಸನೆ ಮಂದಿರಕ್ಕೆ ಹೋಗುವದಿಲ್ಲ ಮಧ್ಯವರ್ತಿಗಳ ಕಾಟವಿಲ್ಲ, ಮಂತ್ರಜಾಲ ಕರ್ಮಕಾಂಡದ ಕಾಟವಿಲ್ಲ, ಮಾಡಿದರೆ ಫಲನಿಶ್ಚಿತ.

### ಅನುಭವ ಮಂಟಪ:

ಜಗತ್ತಿನಲ್ಲಿ ಮೊಟ್ಟಮೊದಲಿಗೆ ಬಡವ, ಹೆಣ್ಣು, ದೀನ ದಲಿತರ ಧ್ವನಿಯನ್ನು ಆಲಿಸಿ ಅದಕ್ಕೆ ಸ್ಪಂಧಿಸುವ, ಅವರ ಅನುಭವವನ್ನು ಪರಿಷ್ಕರಿಸಿ ಯೋಗ್ಯತೆ ಅನುಸಾರ ತಾಳೆಗೆರೆ ಮೇಲೆ ಬರೆಸಿ ಪವಿತ್ರ ವಚನಗ್ರಂಥಗಳ ಕಟ್ಟುಗಳನ್ನು ನಿರ್ಮಿಸಿ ಸಮಾಜಕ್ಕೆ ತಲುಪಿಸುವ ಕಾರ್ಯ ಅಷ್ಟೇ ಅಲ್ಲ ಲೋಕದಿಚ್ಛೆಯಂತೆ ಲೋಕದ ಹಿತಕ್ಕಾಗಿ ಪ್ರಮಾಣಿಕವಾಗಿ ದುಡಿಯುವ ಪ್ರಶಾಸನದ ಸ್ಥಾಪನೆಯಾಗಿ, ಶೋಷಣ ಮುಕ್ತ ಸರ್ವರು ಸಮಾನರು, ಸರ್ವರಿಗೆ ನ್ಯಾಯ ಮನುಷ್ಯರು ಸ್ವತಂತ್ರರು, ಎಲ್ಲರಿಗೂ ಸ್ವತಂತ್ರ್ಯದ ಹಕ್ಕು ಬಂಧುತ್ವ, ಸಕಲ ಜೀವಾತ್ಮರ ಹಿತ ಸಾಧಿಸುವ ಸರ್ಕಾರದ ಸ್ಥಾಪನೆ.

ಅಲ್ಲಿಯವರೆಗೆ ಪ್ರಜೆಗಳ ಮೇಲೆ ನಿರಂಕುಶ ಪ್ರಭುತ್ವ, ಸರ್ವಾಧಿಕಾರದ ರಾಜರು ಆಳುತ್ತಿದ್ದರು. ಮಹತ್ವದ ವಿಷಯವೆಂದರೆ ಪುರೋಹಿತಶಾಹಿಗಳ ಉಪದೇಶದ ಪ್ರಭಾವದಿಂದ ಜನರು ರಾಜಶಾಹಿಯನ್ನು ದೈವದತ್ತವೆಂದು ತಿಳಿದುಬಾಳುತ್ತಿದ್ದರು. ಪುರೋಹಿತಶಾಹಿ–ರಾಜಶಾಹಿ ಮತ್ತು ಕ್ಷತ್ರಿಯರ ಅಪವಿತ್ರಕೂಟ ತಮ್ಮ ಸ್ವಾರ್ಥಕ್ಕಾಗಿ ರಾಜರ ನಿರಂಕುಶ ಆಳ್ವಿಕೆಯನ್ನು

ನಡೆಸಿಕೊಂಡು ಮುನ್ನಡಿಯುತ್ತಿದುದನ್ನು ಅರಿದು ಈ ಕೂಟವನ್ನು ಮುರಿಯಲು ಜಗತ್ತಿನಲ್ಲಿ ಪ್ರಥಮವಾಗಿ ದೇಶದ ಆಳ್ವಿಕೆವಾಗಿ ಪ್ರಜಾತಂತ್ರವನ್ನು ಹುಟ್ಟುಹಾಕಿ ಅದರ ಸಂಸತ್ತ(ಪಾರ್ಲಿಮೆಂಟ್)ನ್ನು ಕಲ್ಯಾಣದಲ್ಲಿ ಕಟ್ಟಿದರು. ಇದಕ್ಕೆ ೭೭೦ ಸದಸ್ಯರನ್ನು ನಿಯಮಿಸಿದರು. ಅದರಲ್ಲಿ ೩೨ ಸ್ತ್ರೀಯರಿದ್ದರು. ಇದಕ್ಕೆ ಮಹಾಮನೆ ಎಂದು ಕರೆಯುತ್ತಿದ್ದರು. ಕೆಲವರು ಅದಕ್ಕೆ ಅನುಭವ ಮಂಟಪವೆಂದು ಕರೆದರು. ಈ ಸಂಸತ್ತು ಕ್ರಿ.ಶ. ೧೧೬೦ರಿಂದ ಕ್ರಿ.ಶ. ೧೧೬೭ರವರೆಗೆ ಕಾರ್ಯಗತವಿತ್ತು. ಕ್ರಿ.ಶ. ೧೧೬೭ರ ಕಲ್ಯಾಣದ ಪ್ರತಿಕ್ರಾಂತಿಯಲ್ಲಿ ಅದನ್ನು ನಷ್ಟ ಮಾಡಲಾಯಿತು.

**ದಾಸೋಹ:**

ಕಾಯಕವೆ ಕೈಲಾಸವೆಂದು ದುಡಿದು ಯೋಗ್ಯತೆಗನುಸಾರ ಸಂಪಾದಿಸಿ, ಅವಶ್ಯತೆಗನುಸಾರ ಖರ್ಚು ಮಾಡಿ ಉಳಿಸಿದ್ದನ್ನು ಸಮಾಜಕ್ಕೆ ಅರ್ಪಿಸುವುದು ಪಡೆಯುವವನು ಕೊಡುವವನಕ್ಕಿಂತ ದೊಡ್ಡವನು ಎಂಬ ಭಾವನೆಯಿಂದ ಅನ್ನದಾಸೋಹ, ಜ್ಞಾನದಾಸೋಹ ಶ್ರಮದಾಸೋಹ ಮಾಡುವದು.



೧೨ನೆ ಶತಮಾನದ ಅನುಭವ ಮಂಟಪ ಬಸವಕಲ್ಯಾಣ



**ವಚನ ಸಾಹಿತ್ಯ:** ಲಿಂಗವಂತದ ಇನ್ನೊಂದು ಅಭೂತಪೂರ್ವ ಕೊಡುಗೆ ಎಂದರೆ ಜಗತ್ತು ಕಂಡ ವಿರಳ ಸಾಹಿತ್ಯವೆಂದರೆ ೭೭೦ ಅಮರಗಣಂಗಳು ಒಂದೇ ಕಾಲಘಟ್ಟದಲ್ಲಿ ಸಾಮೂಹಿಕವಾಗಿ ರಚಿಸಿದ ಅತಿ ವಿಶಾಲವಾದ ದರ್ಶನ ಸಾಹಿತ್ಯ ವಚನ ಸಾಹಿತ್ಯವಾಗಿದೆ.



ಮ.ಘ.ಚ. ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ನಿರ್ಮಿಸಿದ
ಅನುಭವ ಮಂಟಪ ೨೦ನೆಯ ಶತಮಾನ ಬಸವಕಲ್ಯಾಣ



ಹೊಸ ಅನುಭವ ಮಂಟಪ

# ೫. ಲಿಂಗವಂತರ ಉಪಾಸನಾ

ಹನ್ನೆರಡನೆಯ ಶತಮಾನದಿಂದ ಇಲ್ಲಿಯವರೆಗೆ ಅಂದರೆ ಸುಮಾರು ೯೦೦ ವರುಷಗಳ ಕಾಲ ಲಿಂಗವಂತರು ಸತತವಾಗಿ ಲಿಂಗವಂತ ಧರ್ಮದ ಅನುಯಾಗಿಯಾಗಿ ಉಳಿದು ಧರ್ಮಾಚರಣೆಯನ್ನು ಜೀವಂತವಾಗಿಟ್ಟಿದ್ದಾರೆ. ಅಷ್ಟೇ ಅಲ್ಲ ಅದರ ಮೇಲೆ ಬಂದ ಅನಂತ ಸಂಕಟಗಳನ್ನು ತೊಡೆದು ಹಾಕಿ ಧರ್ಮ ಬಾಳಿಸಿದ್ದಾರೆ. ಕಾಲಾಂತರದಲ್ಲಿ ಧರ್ಮದ ಕಲ್ಪನೆ, ಅನುಭವಮಂಟಪದ ಸ್ಥಿತಿ, ದಾಸೋಹದ ಪರಿಕಲ್ಪನೆ ಮತ್ತು ಆಚರಣೆಗಳಲ್ಲಿ ಸ್ಥಿತ್ಯಂತರವಾದರು. ಇಷ್ಟಲಿಂಗೋಪಾಸನೆ ಸ್ಥಿರವಾಗಿ ಉಳಿದಿದೆ. ಆದರು ಇಷ್ಟಲಿಂಗೋಪಾಸನೆಯ ನಾಮದಲ್ಲಿ ಮತ್ತು ಉಪಾಸನಾವಿಧಿಯ ಮೇಲೆ ಕಾಲದ ಪರಿಣಾಮದಿಂದಾಗಿ ಉಪಾಸನಾ ಪದ್ಧತಿಯ ವಿಷಯದಲ್ಲಿ ಬಹುವಿದ, ಬಹುನಾಮದ ಆಚರಣೆ ಕಂಡುಬರುತ್ತವೆ.

ಲಿಖಿತ ರೂಪಗೊಂಡ ಧಾರ್ಮಿಕ ಜ್ಞಾನವಾದರು ಆದಿಯಲ್ಲಿ ಸದೃಢ ಕ್ರಮಾನ್ವಿತ ಗ್ರಂಥರೂಪದಲ್ಲಿ ಇರುವದಿಲ್ಲ. ಆದೆ ಧರ್ಮಬೋಧ ಜ್ಞಾನವು, ಕಾಲಾಂತರದಲ್ಲಿ ಅಕ್ಷರರೂಪಗೊಂಡು ಗದ್ಯ, ಪದ್ಯ ವಚನಾತ್ಮಕವಾಗಿ ವಿಸ್ತೃತವಾಗಿ ಹರಡಿ ಹಂಚಿದ್ದು ಕಾಣುತ್ತೇವೆ. ವ್ಯಕ್ತಿಗತ ಅಗತ್ಯಗಳು ಉಂಟಾದಾಗ ಯೋಗ್ಯಗುರುಗಳು ತಮ್ಮ ನಿಷ್ಠ ಜಿಜ್ಞಾಸು ಅನುಯಾಯಿಗೆ ಅಥವಾ ಅವಶ್ಯವೆನಿಸಿದರೆ ಸಮಾಜದ ವ್ಯಾಪಕ ಹಿತದಲ್ಲಿ ಧರ್ಮಬೋಧೆಯ ವಿಶಾಲ ರಾಸಿಯಿಂದ ಯಾವದೆ ಒಂದು ನಿರ್ಧಿಷ್ಠ ಅಂಶವನ್ನು ತೆಗದು ಬೋಧಿಸುತ್ತಾರೆ. ಶುದ್ಧ ಸಂಪ್ರದಾಯ ಕಲಿಸುವ ಪರಂಪರೆ ಶಿಥಿಲವಾಗಿದ್ದಾಗ ಧರ್ಮವಾಙ್ಮಯ ರಾಶಿಯಲ್ಲಿ ಬೆರಕೆ ಬದಲಾವಣೆಗಳು ಆಗುವದೇನು ಅಸಹಜವಲ್ಲ. ಆವಾಗ ಈ ವಾಙ್ಞಮಯ ರಾಶಿಯನ್ನು ಸಧೃಡ ವ್ಯವಸ್ಥೆಯುಳ್ಳ ನಿಶ್ಚಿತ ಕ್ರಮದಲ್ಲಿ



ಆಯೋಜಿಸಿ ಕ್ರಮಾನ್ವಿತ ಗ್ರಂಥಗಳಾಗಿ ಪರಿವರ್ತಿಸಿ ಪ್ರಕಟ ಮಾಡುವದು ಅನಿವಾರ್ಯವಾಗಿರುತ್ತದೆ.

ಮೂಲ ಜ್ಞಾನವು ಮೂಲಮಹಾನುಭಾವಿಯಲ್ಲಿ ಅಂಕುರಿಸಿ ಅರಳಿ ಗಟ್ಟಿಗೊಂಡು ಅಕ್ಷರಾತ್ಮಕವಾದಾಗ ನಿರಾಕಾರ ಸಾಕಾರವಾಗುತ್ತದೆ. ಜ್ಞಾನದಿಂದ ತಲುಪಲು ಮೀರಿದ ಅದೃಶ್ಯವಾದ ಸರ್ವವ್ಯಾಪ್ತ ಸಕಲ ನಿರ್ಮಾಪಕ ಶಕ್ತಿ ದರ್ಶನದಲ್ಲಿ ಸಾಕಾರವಾಗುತ್ತದೆ. ಹೀಗೆ ನಿಷ್ಕಲ ಅರುಹು ಸಕಲ ಕುರುಹಾಗಿ ಗೋಚರಗೊಳ್ಳುತ್ತದೆ.

ಅನಂತಕೋಟ ಬ್ರಹ್ಮಾಂಡಗಳ ನಿರ್ಮಾಪಕಶಕ್ತಿ ಅನಂತ ವಿಸ್ತಾರದ ಮಹಾದರಿವಿನ ಮನುಷ್ಯನಲ್ಲಿಯ ಅವತರಣವನ್ನು ಶಿರಸ್ಥಲ-ಭಾವಸ್ಥಲ-ಮನಸ್ಥಲ-ನೇತ್ರಸ್ಥಲ-ಕರಸ್ಥಲ, ಲಿಂಗ ಮತ್ತು ಶ್ರೋತ್ರ ಸ್ಥಲ ಹೀಗೆ ಷಟಸ್ಥಲಗಳ ಆರು ಭೂಮಿಕೆಯಲ್ಲಿ ಶ್ರೀ ಬಸವಗುರುಗಳು ಗುರುತಿಸಿದ್ದಾರೆ. (ಸ.ವ.ಸಂ.-೧ ಬಸವಣ್ಣ-೯೮೬)

ಮನುಷ್ಯನಲ್ಲಿ ಅವತರಣಗೊಂಡ ಮಹಾದರಿವಿನ ಸ್ವರೂಪವನ್ನು ಗುರುತಿಸುವ ಶಬ್ದ 'ಶೂನ್ಯವಾಗಿದೆ' ಅದಕ್ಕಾಗಿ ಶ್ರೀ ಬಸವೋದಿತ ಮತಕ್ಕೆ 'ಶೂನ್ಯಮತ'ವೆಂದು ಕರೆದಿದ್ದಾರೆ. ಇನ್ನು ಕೆಲವರು ಅದಕ್ಕೆ 'ಸಕಲಹಿತಮತ' ಅನುಭವ ಮಂಟಪದ ಪೀಠಕ್ಕೆ 'ಶೂನ್ಯಪೀಠ' ಪೀಠಾಧಿಪತಿಗೆ 'ಶೂನ್ಯ ಸಿಂಹಾಸನಾಧಿಶ ಅಥವಾ ಶೂನ್ಯಪೀಠಾಧಿಪತಿ' ಎಂದು ಕರೆದಿದ್ದಾರೆ. ಶಿವಯೋಗಿ ಸಿದ್ಧರಾಮರು ಈ ಮಹದರಿವನ್ನು ಉದ್ದೇಶಿಸಿ ಹೇಳುತ್ತಾರೆ.

ಶಬ್ದ ನೋಡುವಡೆ ನಪುಂಸಕ(ಶೂನ್ಯ)
ಅದರ ಕಾರ್ಯ ನೋಡುವಡೆ
ಹರಿಹರ ಬ್ರಹ್ಮಾದಿಗಳನ್ನೆಲ್ಲ ಮುರಿದಿಕ್ಕಿತ್ತು
ಅದರಂತೆ ಹೋದಡೆ ತನ್ನನ್ನು ಬಿಡದು
ತಾ ತಿಳಿದು ಹೋದಡೆ ತನ್ನ ಕಡೆ ಬರದು ನೋಡಾ
ಕಪಿಲಸಿದ್ಧ ಮಲ್ಲಯ್ಯಾ
(ಸ.ವ.ಸ. ೪ ಸಿದ್ಧರಾಮೇಶ್ವರ ವ.ಸಂ.೧೨೨೩)

ತನ್ನಲ್ಲಿ ಅವತರಣಗೊಂಡ ಮಹಾದರಿವಿನ ಶೂನ್ಯಸ್ವರೂಪದ ಸ್ವಾನುಭವವನ್ನು ಜ್ಞಾನಸಂಜ್ಞೆಯಾಗಿಸಿ ಅಂತರಂಗದಲ್ಲಿ ತುಂಬಿಕೊಂಡು ಗ್ರಹಿಸಿ ಬಾಹ್ಯದಲ್ಲಿ ಅದರ ಕ್ರಿಯಾಸಂಜ್ಞೆಯಾಗಿದ್ದ ಇಷ್ಟಲಿಂಗದ ಶುದ್ಧ-ಸಿದ್ಧ-ಪ್ರಸಿದ್ಧ ಅರಿವಾಚರಣವೆ ಶ್ರೀಗುರು ಬಸವ ವಚನೋದಿತ ಇಷ್ಟಲಿಂಗೋಪಾಸನೆ ಯಾಗಿದೆ.

ಉಪಾಸಕನಿಗೆ ಗುರುಕರುಣೆ ಮಾಡುವಾಗ ಹಸ್ತಮಸ್ತಕ ಸಂಯೋಗಿಸಿ ಮಂತ್ರೋಪದೇಶ ಮಾಡುತ್ತಾನೆ ಮತ್ತು ಅಂತರಂಗದಲ್ಲಿ ಅವತರಣವಾದ ಅರುಹಿನ ಕುರುಹು ಇಷ್ಟಲಿಂಗವನ್ನು ಉಪಾಸಕನ ಕೈಗೆ ಹಿಡಿಸುತ್ತಾನೆ. ಆ ಉಪಾಸಕ ಕುರುಹನ್ನು ಮೇಲಕ್ಕೆ ಎತ್ತಿದ ಕೈಯಲ್ಲಿ ಇರಿಸಿ ಕಣ್ಣಿನಿಂದ ನೊಡಬೇಕು. ನೋಡಿದುದನ್ನು ಉದ್ದೀಪನಗೊಳಿಸಬೇಕು. ಉದ್ದೀಪನಗೊಳಿಸಿದುದ್ದನ್ನು ಸುಮಂತ್ರ ಮಾಡಿ ಅಂತರಂಗಕ್ಕೆ ಇಳಿಸಿ ನೆನೆದು ಭಾವದಲ್ಲಿ ತುಂಬಿಕೊಳ್ಳಬೇಕು ಭಾವಭರಿತವಾದ ಕುರುಹನ್ನು ಮಹದರಿವಿನಲ್ಲಿ ಏಕರೂಪವಾಗಿಸಿ ತಾನು ಮಹದಾಕಾರವಾಗಿ ಮಹದಲ್ಲಿ ನಲಿದು ಮಹವಾಗಿ ಆನಂದಿಸಬೇಕು. ಇವು ಹಸ್ತಪರುಷ, ದೃಷ್ಟಿ ಪರುಷ, ವಾಕ್‌ಪರುಷ, ಭಾವ ಪರುಷ, ಮನ ಪರುಷಗಳೆಂಬ ಪಂಚಪರುಷಗಳು ಮತ್ತು ಪಂಚಸ್ಪರ್ಶಗಳು, ಪಂಚಸ್ಪರ್ಶಗಳಾಚೆಯ ಮನದ ಕೊನೆಯಾಚೆ ಶೂನ್ಯವಿದೆ. ಮನಶೂನ್ಯ ಕ್ರಿಯಾ ಅವತಾರವೆ ಬಯಲು. ಈ ಘನತತ್ವದ ಅರಿವು ವಸ್ತು ಸ್ವರೂಪ ಅದರ ಮರುಹು ಮಾಯಾಸ್ವರೂಪ. ತಾನು ನಿರ್ವಯಲ ಸ್ವರೂಪವಾಗುವ ಮಹಾನುಭಾವದ ಮಹತಿಯ ಸಿದ್ಧಿ ಮನುಜರಿಗೆ ಅಲ್ಲಮ ಪ್ರಭುಗಳು ತಮ್ಮ ವಚನದಲ್ಲಿ ತಿಳಿಸುತ್ತಾರೆ.

"ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದರೆ ಆಯತಲಿಂಗ
ಆ ಇಷ್ಟಲಿಂಗದಲ್ಲಿ ಭಾವಮನೋವೇದ್ಯವಾದಲ್ಲಿ ಸ್ವಾಯತಲಿಂಗ
ಆ ಇಷ್ಟಲಿಂಗದ ಭಾವಮನೋವೇದ್ಯವಾದ ಸುಖವು
ಭಿನ್ನವಾಗಿ ತೋರದೆ ಅನುಪಮ ಪರಿಣಾಮ
ಭರಿತವಾದಲ್ಲಿ ಸನ್ನಿಹಿತಲಿಂಗ
ಇಂತು ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಯ
ಭಾವಲಿಂಗಗಳೆಂಬ ಲಿಂಗತ್ರಯಂಗಳು
ತನು ತ್ರಯಂಗಳ ಮೇಲೆ ಆಯತ ಸ್ವಾಯತ ಸನ್ನಹಿತಂಗಳಾದ



ಶರಣನ ಪಂಚಭೂತಂಗಳಳಿದು ಲಿಂಗತತ್ವಂಗಳಾಗಿ
ಆತನ ಜೀವಭಾವವಳಿದು ಪರಮಾತ್ಮನೆನಿಸಿದಲ್ಲಿ
ಷಡಂಗ ಯೋಗವಾದುದು ಕಾಣಾ ಗುಹೇಶ್ವರಾ"
(ಸ.ವ.ಸ. ೨ ಅಲ್ಲಮಪ್ರಭುದೇವರು-೯೪೪)

ಇಷ್ಟಲಿಂಗದ ಮೇಲೆ ವಿಶ್ವಾಸವಿಟ್ಟು ಆರಂಭಿಸಿದ ಇಷ್ಟಲಿಂಗೋಪಾಸನೆ ಮನುಷ್ಯನಿಗೆ ಪರಮಾತ್ಮನನ್ನಾಗಿ ಪರಿವರ್ತಿಸುವ ಮಹಾಶಕ್ತಿ ಹೊಂದಿರುತ್ತದೆ. ಈ ಇಷ್ಟಲಿಂಗೋಪಾಸನೆ ಎಷ್ಟು ಪ್ರಭಾವಿಯಾಗಿರುತ್ತದೆ ಎಂದರೆ ಅದನ್ನು ಆರಂಭಿಸುವವರೆಗೆ ಅಪರಾಧಿಕ ಭಾವದಿಂದ ಮಾನಸಿಕ ಗುಲಾಮಗಿರಿಯ ಅಂಧಕಾರದಲ್ಲಿ ಮುಳುಗಿದ್ದ ಮನುಜರನ್ನು ಪರಿವರ್ತನದ ದಾರಿಯಲ್ಲಿ ತಂದು ಸ್ವಾತಂತ್ರ್ಯದ ತೇಜೋಮಯ ಸೂರ್ಯನ ಬೆಳಕಿನಲ್ಲಿ ಆತನು ಮುಕ್ತನಾಗಿ ನಡೆದುಬಾಳಲು ಕಲಿಸುವ ಮಹಾಸಾಧನೆ ಇದಾಗಿದೆ.

ಅದಕ್ಕಾಗಿ ಯಾವ ಕಾಲದಲ್ಲಿ ನಡೆಯಲು ದಾರಿಗಳೇ ಬಹಳ ವಿರಳವಾಗಿದ್ದು, ಎತ್ತನೋಡಿದರತ್ತ ದಟ್ಟ ಅರಣ್ಯ, ತುಂಬಿ ಹರಿಯುವ ನದಿ ಕೊಳ್ಳ ಹಿಂಸ್ರ ಪ್ರಾಣಿಗಳ ಹಾವಳಿ, ಒಂದೂರಿನಿಂದ ಇನ್ನೊಂದೂರಿಗೆ ಸಂಪರ್ಕ ಸಾಧಿಸುವದೆ ಮಹಾಕಠಿಣವಾಗಿದ್ದಾಗ, ಜಂಬುದ್ವೀಪ ನವಖಂಡದ ಸುದೂರದ ಭಾಗಗಳಿಂದ ಸಾವಿರಾರು ಮೈಲು ನಡೆದು ತಮ್ಮ ಜೀವಕ್ಕೆ ತೊರೆದು ಲಕ್ಷ ಲಕ್ಷ ಜನರು ಶ್ರೀ ಬಸವಣ್ಣನ ಕಲ್ಯಾಣಕ್ಕೆ ಬಂದರು. ಅವರ ಉದ್ದೇಶ ಏನಾಗಿದ್ದಿತು. ಶ್ರೀ ಬಸವಣ್ಣನ ದರ್ಶನ ಪಡೆಯುವದು, ಇಷ್ಟಲಿಂಗೋಪಾಸನೆ ಮಾಡುವದು, ಅನುಭವ ಮಂಟಪದಲ್ಲಿ ಶರಣರ ಅನುಭಾವ ಚರ್ಚೆಯಲ್ಲಿ ಭಾಗಿಯಾಗುವದು ಜ್ಞಾನೋದಯ ಮಾಡಿಕೊಂಡು ಸ್ವತಃ ಪ್ರಕಾಶಿತರಾಗುವದು ಇತರರನ್ನು ಪ್ರಕಾಶಮಯವಾಗಿ ಪರಿವರ್ತಿಸುವದು

ನಿಮ್ಮ ಸಂಗನಬಸವಣ್ಣ ಬಂದು ಕಲ್ಯಾಣದಲ್ಲಿ ಮನೆ ಕಟ್ಟಿದಡೆ
ಮರ್ತ್ಯ ಲೋಕವೆಲ್ಲವು ಭಕ್ತಿ ಸಾಮ್ರಾಜ್ಯವಾಯಿತು
ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರು
ನಿಜಲಿಂಗ ಫಲವ ಪಡೆದರು
(ಸ.ವ.ಸ. ೪ ಸಿದ್ಧರಾಮೇಶ್ವರ ವ.ಸಂ. ೧೪೦೦)

ಸಂಗನಬಸವಣ್ಣ ಇಡಿ ಮಾನವಕುಲಕ್ಕಾಗಿ ಕಲ್ಯಾಣದಲ್ಲಿ ಮಹಾಮನೆ ಅಥವಾ ಅನುಭವ ಮಂಟಪ ಕಟ್ಟಿದರು. ಆ ಮನೆಗೆ ಬಂದವರಿಗೆ ಲಿಂಗಕೊಟ್ಟರು ಎಂದು ಶಿವಯೋಗಿ ಸಿದ್ಧರಾಮರು ನಮೂದಿಸಿದ್ದಾರೆ ಮುಂದೆ ತಮ್ಮ ಇನ್ನೊಂದು ವಚನದಲ್ಲಿ

ಶ್ರೀ ಗುರು ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ
ಕರಸ್ಥಲದಲ್ಲಿ ಕೊಟ್ಟ ಬಳಿಕ ಬೇರೆಯೋಗ ಉಂಟೆ
..........................................................
ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯುಪ್ರಾಣಿ
ಯಾಗಿರ್ದುದು ಕೊಂದು
ಲಿಂಗ ಪ್ರಾಣಿಯ ಮಾಡಿದ ಬಳಿಕ
ಅಕ್ಷರವೈದರಲಿ ಮುಕ್ತನ ಮಾಡಿದ ಬಳಿಕ
ಮರಳಿಯೋಗ ಉಂಟೆ ಶಿವಯೋಗವಲ್ಲದೆ
(ಸ.ವ.ಸ. ೪ ಸಿದ್ಧರಾಮೇಶ್ವರ-೧೨೯೦)

ಇದೆ ವಚನದಲ್ಲಿ ಮುಂದುವರಿದು ಅವರು ಸಾರುತ್ತಾರೆ. ಚನ್ನಬಸವಣ್ಣನ ಕರುಣದಿಂದ ಅಭ್ಯಾಸ ಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾದೆ. ಷಡಸ್ಥಲಕ್ಕೆ ಅಧಿಕಾರಿಯಾದೆನು ಎಂದು. ಮೊದಲು ಶಿವಯೋಗಿ ಸಿದ್ಧರಾಮರು ಅಷ್ಟಾಂಗ ಯೋಗಗಳಾಗಿದ್ದರು(ವಾಯುಪ್ರಾಣಿ) ಚೆನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆಯಾದ ಮೇಲೆ (ಲಿಂಗ ಪ್ರಾಣಿ) ತನ್ನಲ್ಲಿಯ ಅಷ್ಟಾಂಗ ಯೋಗದ ನೆಲೆಗಳನ್ನು ನಷ್ಟಮಾಡಿದ್ದೇನೆಂದು ಸಾರುತ್ತಾರೆ. ಶಿವಯೋಗಿ ಸಿದ್ಧರಾಮರ ವಚನದಿಂದ ಶಿವಲಿಂಗವೇ ಕರಸ್ಥಲದಲ್ಲಿಟ್ಟು ಪೂಜಿಸುವ ಇಷ್ಟಲಿಂಗವಾಗಿದ್ದು ಅದರ ಉಪಾಸನೆಯೇ ಶಿವಯೋಗವಿದೆ ಎಂದು ಸ್ಪಷ್ಟವಾಗುತ್ತದೆ.

ಬಸವಾದಿ ಪ್ರಮಥರ ಶರಣಸದ್ಬೋಧೆಗಳನ್ನು ಸೂತ್ರೀಕರಿಸಿ ಅಷ್ಟಾವರಣವೆ ಅಂಗ, ಷಟಸ್ಥಲವೇ ಆತ್ಮ ಪಂಚಾಚಾರವೆ ಪ್ರಾಣವೆಂಬ ಸುತ್ರಾಧಾರಿತ ಧರ್ಮದ ಮೂಲ ಅರಿವು-ಆಚಾರ-ಅನುಭವಗಳಲ್ಲಿ ಅಡಗಿದ್ದುದ್ದು ಕಾಣುತ್ತೇವೆ. ಮಾನವ ಜೀವನದ ಮೂಲದಲ್ಲಿದ್ದ ಈ ತ್ರಿವಿಧ ತತ್ವಗಳಲ್ಲಿ ವ್ಯಾಪಿಸಿದ್ದ ಏಕತತ್ವವೆಂದರೆ



ಮಹಾಲಿಂಗ(**Universal consciousness**) ಅದರ ಸೂಕ್ಷ್ಮ ರೂಪವೆ ಕರಸ್ಥಲದಲ್ಲಿ ಉದಯವಾದ ಇಷ್ಟಲಿಂಗವಿದೆ. ಇಷ್ಟಲಿಂಗದ ಆಧ್ಯಾತ್ಮಿಕ, ಧಾರ್ಮಿಕ ಮತ್ತು ವೈಜ್ಞಾನಿಕ ಉಪಾಸನೆಯೇ ಲಿಂಗವಂತ ಧರ್ಮಿಯರ ಪ್ರಮುಖ ಪ್ರಾಥಮಿಕ ಮೂಲಭುತವಾದ ಉಪಾಸನೆಯಾಗಿದೆ.

೯೦೦ ವರ್ಷಗಳ ಮಹಾಕಾಲಗರ್ಭದಲ್ಲಿ ಮಾನವನ ಪರಿಪೂರ್ಣ ಮಹಾಮಣಿಹದ ಸತ್ಫಲವಾದ ಇಷ್ಟಲಿಂಗೋಪಾಸನೆ ಕೊಟ್ಯಾನು ಕೋಟಿ ಜನರ ಆಲೋಚನಾಶಕ್ತಿ(**Thinking**) ಭಾವನೆ(**Emotions**) ವರ್ತನೆ(**Attitude**) ಮತ್ತು ಸ್ಮರ್ಣ(**Memory**) ಗಳನ್ನು ಪರಿವರ್ತಿಸಿ



ಹೀನ ಮನಸ್ಸು, ಶೋಷಿತ ಭಾವನೆ, ನಿರಾಶೆ ತುಂಬಿದ ಜನರನ್ನು ನ್ಯಾಯ, ಸಮಾನತೆ, ಭಾತೃತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬುವ, ಶಾಂತಿಯುತ ಪ್ರಗತಿಪರ, ಪ್ರಬುದ್ಧ ಸಮಾಜದ ಜವಾಬ್ದಾರ ನಾಗರಿಕನನ್ನಾಗಿ ಪರಿವರ್ತಿಸುತ್ತಿದೆ.

ಲಿಂಗಾಯತ ಧರ್ಮಾಚರಣೆಯ ಮೂಲದಲ್ಲಿದ್ದ ಇಷ್ಟಲಿಂಗೋಪಾಸನಾ ವಿಧಿ ಮತ್ತು ಅದರ ನಾಮದ ವಿಷಯದಲ್ಲಿ ಜನರಲ್ಲಿ ಭೇದವಿದ್ದುದ್ದು ಕಂಡುಬರುತ್ತದೆ. ಕೆಲವರು ಇದಕ್ಕೆ ಲಿಂಗಪೂಜೆ, ಇಷ್ಟಲಿಂಗಾರ್ಚನೆ, ಲಿಂಗಾರ್ಚನೆ, ಶಿವಪೂಜೆ, ಇಷ್ಟಲಿಂಗಯೋಗ, ಶಿವಯೋಗವೆಂದು ಹಲವು ನಾಮಗಳಿಂದ ಕರೆಯುವುದು ನೋಡುತ್ತೇವೆ. ಲಿಂಗವಂತರೆಲ್ಲರು ಕೊರಳಲ್ಲಿ ಲಿಂಗಧರಿಸುವದು, ಪ್ರತಿನಿತ್ಯ ಲಿಂಗಸ್ನಾನ ಮಾಡಿಸಿ ಅದಕ್ಕೆ ವಿಭೂತಿ ಹಚ್ಚಿ ದೃಷ್ಟಿಇಟ್ಟು ನೋಡಿ, ಜಲ ಎರಗಿ ಲಿಂಗೋದಕ ಮಾಡಿ ಕುಡಿಯುವುದು ಉಪಾಸನೆಯ ಒಂದು ಖಚಿತವಾದ ವಿಧಿ ಇದೆ. ಇತರ ವಿಷಯಗಳಲ್ಲಿ ಅಲ್ಪಸ್ವಲ್ಪ ಭಿನ್ನ ಭಾವವಿದೆ. ಅದನ್ನು ನಿವಾರಿಸಲು ಉಪಾಸನಾ ವಿಧಿ ಅದರ ನಾಮದ ಸಂದರ್ಭದಲ್ಲಿ ೧೨ನೇ ಶತಮಾನದಿಂದ ಹಿಡಿದು ೧೮ನೇ ಶತಮಾನದ ವರೆಗೆ ಆಗಿಹೋದ ಮಹಾನುಭಾವಿ ವಚನಕಾರ ಶರಣ(೫) ಶರಣೆ(೫) ಕವಿ ವಚನಕಾರ(೨) ವಚನ ಹಾಗು ಬಸವ ಪುರಾಣ(೧) ಶೂನ್ಯ ಸಂಪಾದನೆ, 'ಪ್ರಭುಲಿಂಗ ಲೀಲೆ' ಸಾರವನ್ನು ಪ್ರಸ್ತುತಪಡಿಸುತ್ತಿದ್ದೇನೆ.





## ೬. ಇಷ್ಟಲಿಂಗದ ಉಗಮ ಮತ್ತು ಸ್ವರೂಪ

ಅನಂತಕೋಟಿ ಬ್ರಹ್ಮಾಂಡಗಳನ್ನು ವ್ಯಾಪಿಸುವ, ಪರಿಭ್ರಮಣದಲ್ಲಿರುವ ಶೂನ್ಯ ತತ್ವದ ಚಕ್ರವು ಬಲಿಷ್ಟವಾಗಿ ತನ್ನ ಗೆರೆಗಳಲ್ಲಿ ಸುತ್ತುತ್ತಿರುವಾಗ ಶೂನ್ಯತತ್ವದಿಂದ ಹೊರಹೊಮ್ಮುವ ಮತ್ತು ಚಕ್ರವನ್ನು ಸುತ್ತುವಂತೆ ಮಾಡುವ ಘನಶಕ್ತಿ ಲಿಂಗವಾಗಿ ಅನಂತರೂಪಗಳಲ್ಲಿ ತನ್ನ ವಿವಿಧ ಅಂಗಗಳಲ್ಲಿ ಪ್ರಕಟಗೊಳ್ಳುತ್ತದೆ. ಮನುಷ್ಯನ ಅಂತರಂಗದ ಆಳದಲ್ಲಿ ಭಾವಲಿಂಗವಾಗಿ, ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗವಾಗಿ ಮತ್ತು ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಅನುಭವ ಗಮ್ಯವಾಗುತ್ತದೆ. ಅದೆ ಲಿಂಗ ಒಮ್ಮೆ ಪ್ರೀತಿ, ಒಮ್ಮೆ ಜ್ಞಾನ, ಒಮ್ಮೆ ಭಕ್ತಿ ಮತ್ತು ಒಮ್ಮೆ ತ್ಯಾಗವಾಗಿ ಅಭಿವ್ಯಕ್ತಿ ಪಡೆಯುತ್ತದೆ. ಶೂನ್ಯದಿಂದ ಘನವಾದ ಈ ಶಕ್ತಿಯೇ ಲಿಂಗ, ಘನಲಿಂಗ, ಶಿವ ಈಶ್ವರ ತಂದೆತಾಯಿ ಮತ್ತು ಎಲ್ಲದಕ್ಕೆ ಸೃಷ್ಟಿಕರ್ತನಾಗುತ್ತದೆ. ಅಲ್ಲಮ ಪ್ರಭುಗಳು ತಮ್ಮ ವಚನದಲ್ಲಿ ಲಿಂಗೋದ್ಭವವನ್ನು ವರ್ಣಿಸುತ್ತಾರೆ.

"ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೆ ಸ್ವಯಂಭೂವಾಯಿತ್ತು
ಆ ಸ್ವಯಂಭು ಲಿಂಗದಿಂದಾಯಿತ್ತು ಮೂರ್ತಿವತ್ತು
ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ
ಆ ವಿಶ್ವೋತ್ಪತ್ತಿಯಿಂದಾಯಿತ್ತು ಸಂಸಾರ
................................................"

(ಸ.ವ.ಸ. ೨ ಅಲ್ಲಮಪ್ರಭುದೇವರು–೧೫೨೪)

ಸಾಕಾರ ನಿಷ್ಠಭಾವನೆ ಜನರ ನರನಾಡಿಗಳಲ್ಲಿ ತುಂಬಿದ್ದಾಗ ಪರಿಶುದ್ಧವಾದ ಸತ್ಯದ ನಿರಾಕಾರ ದರ್ಶನದ ಸಮಸ್ತ ಸನ್ಮಂಗಳ ನಿರಾಕಾರ ಸ್ವರೂಪಿ

ಮಹಾಘನಲಿಂಗವೇ ನಿಜಸತ್ಯವೆಂದಿದ್ದಾರೆ ಪ್ರಭುಗಳು. ಸಾಕಾರನಿಷ್ಠ ಮನುಜರಿಗೆ ಶಿವಯೊಗಿ ಸಿದ್ಧರಾಮರು–

"ನಿರಾಕಾರ ನಿಜನಿರ್ವಯಲವೆ ಸ್ಥಿರವೆಂದು
ನಂಬು ಮನವೆ ಕಪಿಲಸಿದ್ಧ ಮಲ್ಲಿಕಾರ್ಜುನ"
ಎಂದು ಹೇಳುತ್ತಾರೆ.
ಇಷ್ಟಲಿಂಗದ ಮಹತಿಯನ್ನು ಬೋಧಿಸುತ್ತಾ ಶಿವಯೋಗಿ ತಿಳಿಸುತ್ತಾರೆ.
ಜನನ ವಿನಾಶ ವಿಗ್ರಹಮೂರ್ತಿ(ಲಿಂಗ)
ಪಶಪಾಶ ಮೋಚನನು
ನಿಮ್ಮ ಪೂಜಿಸಿದವರಿಗೆ ಸಂಪದಾದಿ ಮಹದೈಶ್ವರ್ಯ
ತಪ್ಪದು ನೋಡಾ

ಸಾಕಾರ ನಿಷ್ಠೆಯಿಂದ ಆತ್ಮಕಲ್ಯಾಣದ ಸ್ವಾರ್ಥ ಸಾಧನೆಯಾದರೆ ನಿರಾಕಾರ ನಿಷ್ಠೆಯಲ್ಲಿ ಹುಟ್ಟುವ ಭೂತಾನುಕಂಪೆಯಿಂದ ಲೋಕಕಲ್ಯಾಣವಾಗುತ್ತದೆ ಎನ್ನುತ್ತಾರೆ. ಮನುಷ್ಯರ ಬದುಕಿನ ಆದರ್ಶ ಭೂತಾನುಕಂಪ ಮತ್ತು ತ್ಯಾಗವಾಗಿರಬೇಕು. ಯೋಗಿಯ ಶರೀರ ವೃಥಾಯ ಹೋಗಲಾರದು. ಲೋಕಸೇವೆಗೆ ಸವೆಯಬೇಕು.

"ಅನುಭವವೆಂಬುದು ಅನುಭಾವಿಕಗಲ್ಲದೆ
ಹೊತ್ತಗಯಲಿಲ್ಲಾ ನೋಡಾ"

ಇಷ್ಟಲಿಂಗೋಪಾಸನೆ ಗ್ರಂಥಗಳನ್ನೋದಿ ಮಾಡುವ ಆಚರಣೆಯಲ್ಲ, ಮಾಡಿ ಅನುಭವ ಪಡೆಯುವ ಕಾರ್ಯವಿಧಾನವಾಗಿದೆ.

"ಶೂನ್ಯವ ನುಂಗಿದ ಕುರುಹಿಲ್ಲದ ಯೋಗಕ್ಕೆ
ನೆಲೆ ಮುನ್ನಿಲ್ಲ,
ಅನಿಮಿಷ ನೆಂಬಾತನ ಕರಸ್ಥಲದಲ್ಲಿ
ಸಕಲಯೋಗವಡಗಿತ್ತು ಕಪಿಲಸಿದ್ಧಮಲ್ಲಿಕಾರ್ಜುನ"
(ಸ.ವ.ಸ. ೪ ಸಿದ್ಧರಾಮೇಶ್ವರ ವ–೧೭೫)



೧೨ನೇ ಶತಮಾನಕ್ಕಿಂತ ಮುನ್ನ ಇಷ್ಟಲಿಂಗೋಪಾಸನೆಯಂತಹ ಶೂನ್ಯ ನುಂಗಿದ ಕುರುಹು ಇರಲಾರದರಿಂದ ಇಷ್ಟಲಿಂಗ ಯೋಗವಿರಲಿಲ್ಲ. ಸಕಲ ಯೋಗ ಮೀರಿದ ಯೋಗ ಇದಾಗಿದೆ ಎಂದು ಶಿವಯೋಗಿ ಸಿದ್ಧರಾಮರು ಇಷ್ಟಲಿಂಗದ ಯೋಗದ ಮಹತಿ ಸಾರುತ್ತಾರೆ.

ದಿಟ್ಟಲಿಂಗವ ತನ್ನ ಇಷ್ಟಕರಸ್ಥಳದಲ್ಲಿಟ್ಟು ನೋಡಿದರೆ ಕಂಗಳಂಗಳದಲಿಹ ಮಂಗಳಾಂಗನ ಬೆಳಗು ಹಿಂಗದಂತಾದುದೈ ಸಕಲದೊಳಗೆ.

ಇಷ್ಟಲಿಂಗ ಮಹದರಿವಿನ ಕುರುಹಾಗಿದೆ ಎಂದು ಶಿವಯೋಗಿ ಸಿದ್ಧರಾಮರು ಹೇಳುತ್ತಾರೆ.

"ವಾದ ಬುದ್ಧಿಯ ಬಲ, ವಾದ ಅಭ್ಯಾಸದ ಬಲ
ಮಹತ್ವ ಸುಕೃತದ ಫಲ, ಮಹತ್ವ ಸಿದ್ಧಿಯ ಬಲ
ಅರಿವು ಜ್ಞಾನದ ಬಲ, ಅರಿವು ಸಜ್ಜನಸಹವಾಸದ ಬಲ
ಅರಿವು ಬಾಹ್ಯದಲ್ಲಿ ಇಷ್ಟಲಿಂಗ
ಅರಿವು ಅಂತರಂಗದಲ್ಲಿ ಪ್ರಾಣಲಿಂಗ
ಅರಿವು ಭಾವದಲ್ಲಿ ಆತ್ಮಲಿಂಗ
ಇದುಕಾರಣ
ವಾದಿಸಿದಲ್ಲಿ ಹುರುಳಿಲ್ಲ, ಮಹತ್ವ ಮಾಡುವಲ್ಲಿ ಹುರುಳಿಲ್ಲ
ಲಿಂಗಜ್ಞಾನವೆ ಹುರುಳು ಕಪಿಲಸಿದ್ಧ ಮಲ್ಲಿಕಾರ್ಜುನ
(ಸ.ವ.ಸ.–೪ ಸಿದ್ಧರಾಮೇಶ್ವರ ವ–೯೮೬)

ಮಹದರಿವಿನ ಪ್ರಣವ ಸ್ವರೂಪವಾದ ಲಿಂಗವೆ ಮನುಷ್ಯನಲ್ಲಿ ಅವತರಣಗೊಂಡು ಲಿಂಗತ್ರಯವಾಗಿ ಆತನ ಅಂಗ ಆವರಿಸುತ್ತದೆ. ಇಷ್ಟಲಿಂಗವಾಗಿ ಸ್ಥೂಲ ಶರೀರ, ಪ್ರಾಣಲಿಂಗವಾಗಿ ಸೂಕ್ಷ್ಮ ಶರೀರ ಮತ್ತು ಭಾವಲಿಂಗವಾಗಿ ಕಾರಣಿಕ ಶರೀರಮಯವಾಗುತ್ತದೆ. ಅದಕ್ಕಾಗಿ ಶರಣನ ಸರ್ವಾಂಗ ಲಿಂಗವಾಗುತ್ತದೆ. ಆದುದರಿಂದ ಇಷ್ಟಲಿಂಗೋಪಾಸನೆಯಲ್ಲಿ ಲಿಂಗತ್ರಯದ ಪೂಜೆ ಅವಶ್ಯಕವಾಗಿದೆ.

ಅ ಕಾರವದು ಇಷ್ಟಲಿಂಗ
ಉ ಕಾರವದು ಪ್ರಾಣಲಿಂಗ

ಮ ಕಾರವದು ಭಾವಲಿಂಗ
ಭಕ್ತಂಗಾಗಲಿ ಷಟಸ್ಥಲ ಬ್ರಹ್ಮಿಯಾದವಂಗಾಗಲಿ
ಲಿಂಗತ್ರಯ ಪೂಜೆಯು ಬೇಕು
ಲಿಂಗತ್ರಯ ಪೂಜೆಯರಿತು ಮಾಡದವರ ಮನದೆರೆದು
ಮಾತನಾಡೆನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನ
(ಸ.ವ.ಸ. ೪ ಸಿದ್ಧರಾಮೇಶ್ವರ–೧೮೩೫)

ಪ್ರತಿದಿನ ತ್ರಿಕಾಲ ಲಿಂಗಾರ್ಚನೆಯಾಗಬೇಕು. ಲಿಂಗಾರ್ಚನೆ ಮಾಡಿದಾಗೊಮ್ಮೆ ಮೂರು ಲಿಂಗಗಳ ಪೂಜೆಯಾಗಬೇಕು. ಪೂಜೆಮಾಡುವಾಗ ಮಹಾಪ್ರಣವದ ಜಪಮಾಡಬೇಕು, ನಂತರ ನಿಜದ ಧ್ಯಾನ ಮಾಡಬೇಕೆಂದು ಲಿಂಗಾರ್ಚನೆಯ ಅನುಷ್ಠಾನದ ವಿಧಾನ ತೋರಿಸಿಕೊಡುತ್ತಾರೆ.

ಎಲ್ಲರಗಿಂತಲೂ ಶಿವಭಕ್ತರಧಿಕವೆಂಬ ಕಾರಣವೇನಯ್ಯಾ
ನಿತ್ಯ ಲಿಂಗಾರ್ಚನೆ ಮೂರು ವೇಳೆ
ಲಿಂಗಾರ್ಚನೆಗೊಮ್ಮೆ ಲಿಂಗತ್ರಯ ಪೂಜೆ
ಪೂಜೆಗೊಮ್ಮೆ ಮಹಪ್ರಣವ ಜಪ
ಜಪಕೊಮ್ಮೆ ನಿಜಧ್ಯಾನ
ನಿಜಧ್ಯಾನಕೊಮ್ಮೆ ಚಿತ್ತನ ಲಯನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನ
(ಸ.ವ.ಸ. ೪ ಸಿದ್ಧರಾಮೇಶ್ವರ–೧೮೩೬)

ಲಿಂಗಾರ್ಚನೆಯ ಫಲವನ್ನು ವರ್ಣಿಸುತ್ತಾ ಶಿವಯೋಗಿ ಸಿದ್ಧರಾಮರು ಹೇಳುತ್ತಾರೆ

ಇಷ್ಟಲಿಂಗ ಪೂಜೆಯದು
ಅಷ್ಟೈಶ್ವರ್ಯ ಪ್ರದವಾಯಿತು
ಪ್ರಾಣಲಿಂಗ ಪೂಜೆಯದು
ಅಖಂಡ ಚಿದೈಶ್ವರ್ಯ ಪ್ರದವಾಯಿತ್ತು
ಭಾವಲಿಂಗ ಪೂಜೆಯದು ನಿರ್ಭಾವ ನಿಜಾನಂದ
ವಸ್ತು ಸ್ವರೂಪವಾಯಿತ್ತು ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನ



(ಸ.ವ.ಸ. ೪ ಸಿದ್ಧರಾಮೇಶ್ವರ–೧೮೩೪)

ಲಿಂಗವು ಚರಿಸಿ ಜಂಗಮ, ನೆಲೆಸಿ ಲಿಂಗ, ಅರುಹಿದಲ್ಲಿ ಗುರುವೆನಿಸಿತ್ತು ಅದಕ್ಕಾಗಿ ಲಿಂಗಾರ್ಚನೆ ಮಾಡುವದೆಂದರೆ ಏಕಕಾಲಕ್ಕೆ ಗುರು, ಲಿಂಗ, ಜಂಗಮದ ಪೂಜೆಯಾಗುತ್ತದೆ. ಜಂಗಮವೆಂದರೆ ಜ್ಞಾನ, ಜ್ಞಾನದ ಪೂಜೆ ಅರ್ಥಾತ ನಿಜಜ್ಞಾನದ ಸಾಧನೆ ಲಿಂಗಪೂಜೆಯ ಮಹತ್ವದ ಅಂಗವಾಗಿದೆ. ಅರಿಯದೆ ಪೂಜಿಸುವದು ಅಜ್ಞಾನದ ಆಚರಣೆಯಾಗುವದು. ಲಿಂಗಾರ್ಚಕನು ಇಷ್ಟಲಿಂಗೋಪಾಸನೆ ಕೇವಲ ಜ್ಞಾನದ ಬೆಳಕಿನಲ್ಲಿ ಮಾಡಿದರೆ ಸಾಲದು ಅದನ್ನು ಮಾಡುವವರು ಲಿಂಗಾರ್ಚನೆಯ ವಿಧಿವಿಧಾನವನ್ನು ಅರಿತು ಮಾಡಿದರೆ ಮಾತ್ರ ಅದರ ಸತ್ಫಲ ಪಡೆಯುವರೆಂದು ಶಿವಯೋಗಿ ಸಿದ್ಧರಾಮ ಹೇಳುತ್ತಾರೆ.

"ಲಿಂಗಾರ್ಚಕನಾದ ಬಳಿಕ
ಲಿಂಗ ವಿಧಿವಿಧಾನಂಗಳನರಿದರಿದು ಮಾಡಬೇಕು
ಲಿಂಗದೇಹಿ ತಾನಾದ ಬಳಿಕ
ಅಲಿಂಗಿಗಳ ಸಂಗವಳಿದಿರಬೇಕು
ಲಿಂಗಧ್ಯಾನಿ ತಾನಾದಬಳಿಕ
ಅಂಗನೆಯರ ನೋಡದಿರಬೇಕು
ಲಿಂಗೈಕ್ಯ ತಾನಾದ ಬಳಿಕ
ಕರುಣಾಕರ, ಅಭಯಕರ ಕಪಿಲಸಿದ್ಧ ಮಲ್ಲಿಕಾರ್ಜುನನ
ಕಾರ್ಯದಲ್ಲಿ ಅಭೇದವಿರಬೇಕು ಕಾಣಾ ಕೇದಾರಯ್ಯಾ"

ಲಿಂಗವಂತ ಜ್ಞಾನ–ಸಂಸ್ಕೃತಿ–ಪರಂಪರೆಗಳ ತಿಳುವಳಿಕೆ ನಡವಳಿಕೆ–ನೋಟಗಳಿಗೆ ನಿಜಬೆಳಕಾದ ಮಹಾನ ಲಿಂಗಾಯತ ಧರ್ಮದ ಮೂಲಜ್ಞಾನದ ಮೂಲ ಮಹಾನುಭಾವಿಗಳಲ್ಲಿ ಹಿರಿಯರಾದ ಗುಹಲ್ಲಮ ಪ್ರಭುದೇವರು

"ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ
ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ
ಸರ್ವಕಾರಣ ಲಿಂಗವಾಗಿ
ಲಿಂಗವನೆ ಅರಿದರಿದು ಲಿಂಗಸಂಗವನೆ ಮಾಡುವೆ

ಸಂಗ ಸುಖದೊಳು ಓಲಾಡುವೆ ಗುಹೇಶ್ವರಾ"

(ಸ.ವ.ಸ. ೨ ಅಲ್ಲಮಪ್ರಭುದೇವರು ವ-೧೫೦೫)

ಲಿಂಗದ ಅರಿವಿನ ಮಹತ್ವ ತಿಳಿಸುತ್ತಾರೆ. ಲಿಂಗದ ಜ್ಞಾನ ಎಲ್ಲ ಜ್ಞಾನಕ್ಕಿಂತ ಶ್ರೇಷ್ಠಜ್ಞಾನ. ಅದನ್ನರಿಯದೆ ಇತರ ಏನನ್ನೂ ಅರಿದಡೆ ಅದಕ್ಕೆ ಮನುಷ್ಯ ಜೀವನದಲ್ಲಿ ಮಹತ್ವವಿಲ್ಲ ಎನ್ನುತ್ತಾರೆ ಪ್ರಭುದೇವರು

ಲಿಂಗವಿಡಿದು ಅರಿವ ಅರಿವು ಅರಿವಲ್ಲದೆ
ಗುರುವಿಡಿದು ಅರಿವ ಅರಿವು ಅರಿವಲ್ಲ
ಗುರುವಿಡಿದು ಲಿಂಗವುಂಟೆಂಬುದು ಕಲ್ಪಿತ
...........................................

(ಸ.ವ.ಸ. ೨ ಅಲ್ಲಮಪ್ರಭುದೇವರು ವ-೧೫೦೭)

ತನ್ನ ತಾನರಿಯಲಿಕ್ಕೆ ಅನ್ಯರ ಮಾಧ್ಯಮ ಸರಿಹೋಗದು. ತನ್ನಿಂದ ತಾನು ಅರಿದರೆ ಮಾತ್ರ ತನಗರಿವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಗುರು ಕರುಣಿಸಿ ಕೊಟ್ಟ ಲಿಂಗವೇ ಲಿಂಗವೆಂಬ ಮಾತಿಗೆ ಅವರು ಒಪ್ಪುವದಿಲ್ಲ. ಇನ್ನೊಂದು ಮಾತು ಸ್ಪಷ್ಟವಾಗುತ್ತದೆ. ಅರಿವಾಗಬೇಕಾದರೆ ಇಷ್ಟಲಿಂಗ ಯೋಗ ಸಾಧನೆ ಅವಶ್ಯಕವಿದೆ.

ಇಷ್ಟಲಿಂಗೋಪಾಸನೆ ಎಂಬ ಆಚರಣೆ ತನ್ನಿಂದ ಭಿನ್ನವಾದ ಕ್ರಿಯೆ ಯಾಗಿರದೆ ಸಂಪೂರ್ಣವಾಗಿ ಅಂಗಮಯವಾಗಿ ಅದು ಅಂಗದಾಚಾರ ವಾಗಬೇಕೆಂದು ಅಲ್ಲಮಪ್ರಭುಗಳು ಹೇಳುತ್ತಾರೆ.

ಇಷ್ಟಲಿಂಗಕ್ಕೆ ಅಂಗದಲ್ಲಿಯೇ ಮಜ್ಜನ
ಲಲಾಟದಲ್ಲಿಯೇ ಗಂಧಾಕ್ಷತೆ
ತುರುಬಿದ ಪುಷ್ಪಚಯವೆ ಲಿಂಗಕ್ಕೆ ಪೂಜೆ
..............................................
ಇಂತೀ ಅಂಗದಲ್ಲಿ ಇಷ್ಟಲಿಂಗ ಪೂಜೆಯ ಮಾಡುವ
ಲಿಂಗ ಸಂಪನ್ನರ ತೋರಾ ಗುಹೇಶ್ವರಾ"

(ಸ.ವ.ಸ.-೩ ಅಲ್ಲಮಪ್ರಭುದೇವರು ವ-೯೪೨)



ಇಷ್ಟಲಿಂಗವ ಪೂಜಿಸಿದ ಹೊರತು ನಿಷ್ಠೆ ನೆಲೆಗೊಳ್ಳದು ಬಹು ಲಿಂಗವು ಪೂಜಿಸಿ ಭ್ರಮಿತರಾಗಬೇಡಿ. ಅನ್ಯಲಿಂಗವ ಪೂಜಿಸಿ ಭಿನ್ನರಾದರು. ಸ್ಥಾವರ ಲಿಂಗವ ಪೂಜಿಸಿ ಸಾವಿಗೊಳಗಾದರು ಎನ್ನುತ್ತಾರೆ ಪ್ರಭುದೇವರು.

ಪ್ರಮಥ ಚಿಂತಾಮಣಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಲಿಂಗದ ಅವತರಣ ಮತ್ತು ಆಧ್ಯಾತ್ಮಿಕ ಸ್ವರೂಪ ತಿಳಿಸುತ್ತಾರೆ.

'ಲಿ' ಕಾರವೇ ಶೂನ್ಯ, ಬಿಂದುವೆ ಲೀಲೆ 'ಗ' ಕಾರವೆ ಚಿತ್ತು
ಈ ತ್ರಿವಿಧದೊಳಗಿದೆ ಲಿಂಗವೆಂಬ ಸಕೀಲ
ಇದರ ಸಂಚವನಾತ ಬಲ್ಲ ಆತನೆ ಲಿಂಗಸಂಗಿ
ಇದು ಕಾರಣ-ಲಿಂಗಾನುಭವಿಗಳ ಶ್ರೀಚರಣಕ್ಕೆ
ನಮೋ ನಮೋ ಎಂಬೆ ಕೂಡಲ ಚೆನ್ನಸಂಗಮದೇವಾ"

(ಸ.ವ.ಸ. ೩ ಚೆನ್ನಬಸವಣ್ಣ-೧೫೪೭)

ಶೂನ್ಯ, ಲೀಲೆ ಮತ್ತು ಚಿತ್ತುವಿನಲ್ಲಿ ಲಿಂಗದ ಗೂಢವು ಅಡಗಿದೆ. ಈ ಗೂಢಾನುಭವಿಯ ಶ್ರೀಚರಣಕ್ಕೆ ನಮಿಸಬೇಕೆನ್ನುತ್ತಾರೆ. ಮಹದರಿವು ಮೂಲದಲ್ಲಿ ಶೂನ್ಯ ಸ್ವರೂಪದಲ್ಲಿದೆ. ಅಂದರೆ ತಟಸ್ಥವಾಗಿದೆ ಅಥವಾ ನಪುಂಸಕ ಶಕ್ತಿಯಾಗಿದ್ದು ಅದರಲ್ಲಿ ಚಲನೆ ಉತ್ಪನ್ನವಾಗಿ ಅಭಿವ್ಯಕ್ತಿಯ ವಿವಿಧ ರೂಪ ಅಂದರೆ ಲೀಲೆ ಉತ್ಪನ್ನವಾಗುತ್ತವೆ. ಆ ಲೀಲೆಗಳು ಚಿತ್ತಧರಿಸಿ ಮನುಷ್ಯರ ಅಂತರಂಗದಲ್ಲಿ ಇಳಿಯುತ್ತವೆ. ಮನುಷ್ಯರಲ್ಲಿ ಲಿಂಗದ ಅವತರಣದ ಪರಿ ಇಂತಿದೆ.

ಅವತರಣಗೊಂಡ ಲಿಂಗದ ಮನುಷ್ಯನಂಗದಲ್ಲಿಯ ವಿನ್ಯಾಸವನ್ನು ಚೆನ್ನಬಸವಣ್ಣನವರು ವಿವರವಾಗಿ ಹೇಳುತ್ತಾರೆ.

ಎನ್ನ ಸರ್ವಾಂಗವೆಲ್ಲವು ಲಿಂಗವಾದ ಪರಿಕ್ರಮವಂತೆಂದಡೆ
ಶ್ರೀ ಗುರು ಬಸವಣ್ಣನುಪದೇಶಿಸಿದ ಇಷ್ಟಲಿಂಗವೆನ್ನ ಸರ್ವಾಂಗದಲ್ಲಿ
ಭಿನ್ನನಾಮಗಳಿಂದ ಪ್ರಕಾಶಿಸುತ್ತಿಹುದು
ಅದೆಂತೆಂದಡೆ ಸ್ಥೂಲಾಂಗದಲ್ಲಿ ಇಷ್ಟಲಿಂಗವೆಂದು
ಸೂಕ್ಷ್ಮಾಂಗದಲ್ಲಿ ಪ್ರಾಣಲಿಂಗವೆಂದು
ಕಾರಣಾಂಗದಲ್ಲಿ ಭಾವಲಿಂಗವೆಂದು ತ್ರಿಭೇದವಾಗಿಹುದು

ಹೃದಯದಲ್ಲಿ ಮಹಾಲಿಂಗವೆಂದು ಶ್ರೋತ್ರದಲ್ಲಿ ಪ್ರಸಾದಲಿಂಗವೆಂದು
ತ್ವಕ್ಕಿನಲ್ಲಿ ಜಂಗಮಲಿಂಗವೆಂದು ನೇತ್ರದಲ್ಲಿ ಶಿವಲಿಂಗವೆಂದು
ಜಿಹ್ವೆಯಲ್ಲಿ ಗುರುಲಿಂಗವೆಂದು ಪ್ರಾಣದಲ್ಲಿ ಆಚಾರಲಿಂಗವೆಂದು
ಇಂತು ಷಡಿಂದ್ರಿಯಗಳಲ್ಲಿ ಷಡವಿಧಲಿಂಗವಾಗಿ ತೋರಿತ್ತು

..................................................

ಅಪ್ರಮಾಣ ಅಗೋಚರ ಅನಿರ್ವಾಚ್ಚವಾದ ಕಾರಣ
ವಚಿಸುತ್ತ ವಚಿಸುತ್ತ ವಚಿಸುತ್ತ ವಚನಗೆಟ್ಟಿತು
ಉಪ್ಪು ನೀರೊಳಗೆ ಕೂಡಿದಂತೆ
ವಾರಿಕಲ್ಲು ಅಂಭುದಿಯೊಳು ಬಿದ್ದಂತೆ
ಶಿಖಿಕರ್ಪೂರ ಯೋಗದಂತೆ ಆದೆನಯ್ಯಾ
ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣನ ಭಾವಹಸ್ತ ಮುಟ್ಟಿದ ಕಾರಣ
(ಸ.ವ.ಸ. ೩ ಚೆನ್ನಬಸವಣ್ಣ ವ–೧೦೫೫)

ಸಕಲ ನಿಷ್ಕಲ ಅಖಿಲ ಬ್ರಹ್ಮಾಂಡಗಳ ಜನಕ ಜನನಿ ಸಕಲ ವಿಸ್ತಾರದ ರುಹು ಶೂನ್ಯ ಮಹಾಘನಲಿಂಗ, ಮಹದರಿವು (**Universal consciousness**) ಪರಮಾತ್ಮನೆ ಅವತರಣಗೊಂಡು ಲಿಂಗವೆಂದು ಮನುಷ್ಯರ ಸರ್ವಾಂಗ ವ್ಯಾಪಿಸುತ್ತದೆ. ಆವಾಗ ಮಹದರಿವು ಮನುಷ್ಯರ ಅಂತರಂಗದರಿವಾಗಿ ಪ್ರಕಟವಾಗುತ್ತದೆ. ಅಂತರಂಗದ ಅರಿವು ಹಿಡಿದು ಮಹದರಿವಿನ ಅನುಭಾವ ಹೊಂದಿ ಮಹದರಿವಾಗಿ ಲೋಕ ಕಲ್ಯಾಣದ ಕಾರ್ಯಮಾಡುತ್ತ ಬಾಳುವುದೆ ಶ್ರೀಗುರು ಬಸವ ವಚನೋದಿತ ಇಷ್ಟಲಿಂಗೋಪಾಸನೆಯ ಮಹತ್ ಉದ್ದೇಶವಾಗಿದೆ. ಶಿವಯೋಗಿ ಸಿದ್ಧರಾಮರು

ಜಗಜನಕ ಜನನಿಯರಿಬ್ಬರ ಇರವ ಕೇಳಾ
ಅಯ್ಯಾ! ಹಾ! ಆ! ಆ! ಹೋ! ಏ! ಏ! ಅಯ್ಯಾ!
ಸಸಿಬೀಜದಂತೆ ಶಿವನು ಶರಿ ಕಂಡಾ ಅಯ್ಯಾ!
ಇಲ್ಲಿ ಒಮ್ಮೆಯಾ ಭೇದವಿಲ್ಲ ಕಪಿಲಸಿದ್ಧ ಮಲ್ಲಿನಾಥಯ್ಯಾ
(ಶ್ರೀ ಸಿದ್ಧರಾಮೇಶ್ವರ ದೇವರ ಸತ್ಯ ಶುದ್ಧ ಸಮಗ್ರ ಮಹಾವಚನಾಗಮ ವ. ೬೪ ಪು. ೧೭ ಸಂಪಾದಕ ಪಿ.ಎಂ. ಗಿರಿರಾಜು)



ಜನಕವೇ ಜನಿತ ಮತ್ತು ಜನಿತವೇ ಜನಕ ಇದು ಸತ್ಯ. ಜನಕ–ಜನಿತ ಭಿನ್ನವೆಂಬ ಭೇದವನಳಿದು ಇವೆರಡರಲ್ಲಿ ಭೇದ ಕಾಲ್ಪನಿಕವೆಂದರಿದು ಐಕ್ಯದಲ್ಲಿ ಬಾಳಲಿಕ್ಕೆ ದಾರಿದೀಪವಾಗಿ ಬಂದದು ಇಷ್ಟಲಿಂಗೋಪಾಸನೆ

ನಿಷ್ಠೆ ನೆಲೆಸಿರೆ ಮೊಟ್ಟ ಮೊದಲಲಿ
ಇಷ್ಟಲಿಂಗದ ಭಕ್ತಿ ಮಾರ್ಗದ
ಶಿಷ್ಟತೆಯ ಶೀಲವನು ಸಕಲ ಸಾಧನಾಸಾರವನು
ಕಷ್ಟಕರ್ಮ ಭ್ರಮೆಯ ಕೇಡನು
ದೃಷ್ಟ ಜನ್ಮದಲಿರ್ದು ಕಾಬರೆ
ಶ್ರೇಷ್ಠ ಭಕ್ತರು ತಿಳಿವುದೀ ಪ್ರಭುಲಿಂಗಲೀಲೆಯಲಿ
(ಪ್ರಭುಲಿಂಗ ಲೀಲೆ ಚಾಮರಸ ಕವಿ ಅ–೧೬, ಪ–೧)

ಸಮುದ್ರದಲ್ಲಿ ಮುಳುಗಿದ್ದ ಘಟ ಸಮುದ್ರದ ನೀರಿನಿಂದ ತುಂಬಿದಂತೆ ಮನುಷ್ಯ ಬ್ರಹ್ಮಾಂಡ ವ್ಯಾಪ್ತ, ಮಹಾಪ್ರಜ್ಞೆಯ ಸಮುದ್ರದಲ್ಲಿ ಮುಳುಗಿ ಆ ಪ್ರಜ್ಞೆಯಿಂದ ತುಂಬಿದ ಘಟದಂತಿದ್ದಾನೆ. ಘಟದಲ್ಲಿಯ ಮಹಾಪ್ರಜ್ಞೆಯೆ ಸೂಕ್ಷ್ಮ ರೂಪಧರಿಸಿ ಇಷ್ಟಲಿಂಗವಾಗಿ ಕರಸ್ಥಲದಲ್ಲಿ ಚುಳುಕಾಗುತ್ತದೆ.



## ೭. ಇಷ್ಟಲಿಂಗೋಪಾಸನೆ ಶರಣರ ಅರಿವು ಅನುಭವ ನೋಟ ಮತ್ತು ಉಪಾಸನಾ ವಿಧಿನಾಮ

ಹನ್ನೆರಡನೆಯ ಶತಮಾನದ ಶರಣರು:

೧೨ನೆ ಶತಮಾನದಿ ಶರಣ ಶರಣೆಯರ ೧೩ನೆಯ ಶತಮಾನ ೧೫–೧೬ನೆಯ ಶತಮಾನದ ಶರಣರ ವಚನಗಳನ್ನು ಅಧ್ಯಯನಗೈದು ಈ ವಿಷಯ ಸಂದರ್ಭದಲ್ಲಿ ಅವುಗಳಲ್ಲಿಯ ಪ್ರಮುಖ ಸಾಲು ಮತ್ತು ಉಪಸಾನ ಪದ್ಧತಿಗೆ ಅವರು ಉಪಯೋಗಿಸಿದ ನಾಮವನ್ನು ಇಲ್ಲಿ ಉಲ್ಲೇಖಿಸಲಾಗಿದೆ.



ಅಲ್ಲಮಪ್ರಭುದೇವರು ೧೨ನೆಯ ಶತಮಾನ

ಕ್ರ.ಸಂ. ಸಮಗ್ರ ವಚನ ಸಂಪುಟ — ಶೀರ್ಷಿಕೆ

೧. ಇಂತೀ ಅಂಗದಲ್ಲಿ ಇಷ್ಟಲಿಂಗಪೂಜೆ ಮಾಡುವ ಲಿಂಗ ಸಂಪನ್ನರ ತೋರಾ ಗುಹೇಶ್ವರಾ — ಇಷ್ಟಲಿಂಗ ಪೂಜೆ
– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೨

೨. ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದರೆ.......... ಷಡಂಗಯೋಗವಾದುದು ಕಾಣಾ ಗುಹೇಶ್ವರಾ — ಷಡಂಗ ಯೋಗ
– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೪

೩. ಇಷ್ಟಲಿಂಗದ ಕೂಟ ಪ್ರಾಣಲಿಂಗದ ಸಂಗ.......... ಶಾಂಭವಯೋಗಿಗಳಿಗೆ ಸರ್ವಯೋಗಂಗಳು ತೃಣ ಮಾತ್ರವು — ಶಾಂಭವಯೋಗ
– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೩

೪ ಇಷ್ಟಲಿಂಗ ಪ್ರಾಣಲಿಂಗವೆಂಬ ಭೇದವನಾರು ಬಲ್ಲರು ಹೇಳಾ — ಕುರುಹುವಿಡಿದು ಕುರುಹುಗೆಡಬೇಕು
– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೫

೫. ಇಷ್ಟಲಿಂಗವ ಪೂಜಿಸದರಾಗಿ
ಇಷ್ಟಲಿಂಗಪೂಜೆ
ನಿಷ್ಠೆನೆಲೆಗೊಳ್ಳದು
– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೬

೬ ಇಷ್ಟಲಿಂಗವೆ ಅಂಗಲಿಂಗ ಪ್ರಾಣಲಿಂಗವೆ — ಪ್ರಾಣಲಿಂಗ ಸಂಬಂಧ

ಮನಲಿಂಗವಾಯಿತ್ತು ನೋಡಾ ಸ್ವಯವಾಯಿತ್ತು

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೭

೭. ಇಷ್ಟಲಿಂಗವೆ ಪ್ರಾಣಲಿಂಗವೆಂಬ ಇನ್ನಾವುದು ಲಿಂಗ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೮

೮. ಇಷ್ಟಲಿಂಗದ ಕೂಟ ನಿಜ ಶಿವಯೋಗ
ಪ್ರಾಣಲಿಂಗದ ಸಂಗ ಮಹಾರಾಜಯೋಗ
ಶಾಂಭವಯೋಗ
ಪ್ರಕೃತಿಯೋಗ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೯೪೩

೯. ಲಿಂಗಾರ್ಚನೆಯ ಅವಸರಕ್ಕೆ ಲಿಂಗಾರ್ಚನೆ ಮಾಡು
ಜಂಗಮ ಮನೆಗೆ ಬಂದಡೆ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೫೦೦

೧೦. ಅವರಿಗಿಷ್ಟಲಿಂಗ ಧಾರಣವಿಲ್ಲದ ಕಾರಣ ಶಿವಾರ್ಚನೆ
ಕನಿಷ್ಟವೆಂದು ಪೇಳಲ್ಪಟ್ಟಿತ್ತು

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೫೧೦

೧೧. ಲಿಂಗ ಜಂಗಮವ ಪೂಜಿಸಿ ಲಿಂಗಪೂಜೆ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೪೯೭

೧೨. ಲಿಂಗ ಜಂಗಮವೆಂಬ ಲಿಂಗಾರ್ಚನೆ
ಸಕೀಲವ ಅರಿದು ಜಂಗಮಾರ್ಚನೆ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೪೯೮

೧೩. ಲಿಂಗದೊಳಗೆ ಜಂಗಮ ಲಿಂಗಾರ್ಚನೆ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೫೦೦

೧೪. ಲಿಂಗವೆ ಕರಲಿಂಗವೆನುವೆತ್ತ ಗುರುವಿತ್ತ ಕರಲಿಂಗ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೫೦೮



೧೫. ಇಷ್ಟಲಿಂಗ ಪ್ರಾಣಲಿಂಗದ ನಿಮ್ಮ ಶರಣರು
ಆದಿ ಅಂತುವನಾರು ಅರಿಯರು ಹಿಂದೂ ಗಾಣದ
ಮುಂದುಗಟ್ಟರು

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೫೪

೧೬. ಇಷ್ಟಲಿಂಗ ಪ್ರಾಣಲಿಂಗದ ಭೇದವನು
ಗುಹೇಶ್ವರ ನಿಮ್ಮ ಶರಣ ಬಲ್ಲ ಇಷ್ಟಲಿಂಗ ಹೋದಡೆ
ಪ್ರಾಣಲಿಂಗ

– ಸವಸಂ–೨, ಅಲ್ಲಮಪ್ರಭುದೇವರು ವ.ಸಂ.–೧೮೧

ಅಲ್ಲಮಪ್ರಭುಗಳ ಉಲ್ಲೇಖಿಸಿದ ೧೬ ವಚನಗಳಲ್ಲಿ ಕಂಡುಬಂದ ಉಪಾಸನಾ ನಾಮ

| | |
|---|---|
| ಇಷ್ಟಲಿಂಗ ಪೂಜೆ–೨ | ವಿವಿಧ ಯೋಗ–೬ |
| ಲಿಂಗಪೂಜೆ–೧ | ಲಿಂಗಾರ್ಚನೆ–೩ |
| ಶಿವಾರ್ಚನೆ–೧ | ಜಂಗಮಾರ್ಚನೆ–೧ |
| ಇತರ–೩ | |



## ೨. ಚೆನ್ನಬಸವಣ್ಣ ೧೨ನೇ ಶತಮಾನ

ಕ್ರ.ಸಂ. ಸಮಗ್ರ ವಚನ ಸಂಪುಟ    ಶೀರ್ಷಿಕೆ

೧. ಶ್ರೀ ಗುರು ಬಸವಣ್ಣನುಪದೇಶಿಸಿ    ಶಿಖಿಕರ್ಪೂರ ಯೋಗ
ಇಷ್ಟಲಿಂಗವೆನ್ನ ಸರ್ವಾಂಗಲಿಂಗದಲ್ಲಿ
– ಸವಸಂ–೩, ಚೆನ್ನಬಸವಣ್ಣ ವ.ಸಂ.–೧೦೫೫

೨. ಉದಯ ಮಧ್ಯಾಹ್ನ ಅಸ್ತಮಾನ    ನಿಮ್ಮ ಲಿಂಗದ ಪೂಜೆ
ತ್ರಿಕಾಲದಲ್ಲಿ
– ಸವಸಂ–೩, ಚೆನ್ನಬಸವಣ್ಣ ವ.ಸಂ.–೧೦೨೪



೩. ಇಷ್ಟಲಿಂಗ ಪೂಜಕರೆಲ್ಲ    ಇಷ್ಟಲಿಂಗ ಪೂಜೆ
ದೃಷ್ಟಿಲಿಂಗವನೆತ್ತಬಲ್ಲಿರೋ?
– ಸವಸಂ–೩, ಚೆನ್ನಬಸವಣ್ಣ ವ.ಸಂ.–೧೧೧೨

೪. ಇಷ್ಟಲಿಂಗ ಪೂಜೆ ಮಸುಳಿಸಿದಡೆ    ಇಷ್ಟಲಿಂಗ ಪೂಜೆ
ಪ್ರಾಣಲಿಂಗ ಕಾಣಬಹುದೆ?
– ಸವಸಂ–೩, ಚೆನ್ನಬಸವಣ್ಣ ವ.ಸಂ.–೧೧೧೧

೫. ಇಷ್ಟಲಿಂಗದ ಮುಖದಲ್ಲಿ ಶರೀರವರ್ಪಿತ    ಮಹಾಘನ ಲಿಂಗದಲ್ಲಿ
ಸಮರಸೈಕ್ಯ
– ಸವಸಂ–೩, ಚೆನ್ನಬಸವಣ್ಣ ವ.ಸಂ.–೧೧೧೩

೬. ಉದಾಸೀನವ ಮಾಡಿದ    ಲಿಂಗಾರ್ಚಕ ಶ್ರೇಷ್ಠರು
ಭಕ್ತರ ಮಂದಿರದಲ್ಲಿ ಹೊಕ್ಕು
– ಸವಸಂ–೩, ಚೆನ್ನಬಸವಣ್ಣ ವ.ಸಂ.–೧೦೨೭

೭. ಶ್ರೀ ಗುರು ಕರಸ್ಥಲಕ್ಕೆ    ಇಷ್ಟಲಿಂಗ
ಇಷ್ಟಲಿಂಗವ ಬಿಜಯಂಗೈಸಿ
– ಸವಸಂ–೩, ಚೆನ್ನಬಸವಣ್ಣ ವ.ಸಂ.–೪೮೯

೮. ಲಿಂಗ ಮಧ್ಯದೊಳಗೆ ಜಗವಿದ್ದಡೇನು    –
ಜಗವ ಹೊರಗಿಕ್ಕಿ
ಲಿಂಗವನೊಳಗಿಟ್ಟುಕೊಂಬ
ಆ ಘನಕ್ಕೆ ಶರಣೆಂಬೆನು
– ಸವಸಂ–೩, ಚೆನ್ನಬಸವಣ್ಣ ವ.ಸಂ.–೫೩೨

೯. ಶೈವ ಸೈವೆರಗಾದ    ಭಕ್ತ ಲಿಂಗಾರ್ಚನೆ
ಪಾಸುಪತಿ ಪಥವನರಿಯ    ಮಾಡಿದ ಪವಿತ್ರ
ಕಾಳಾಮುಖಿ ಕಂಗೆಟ್ಟ ಮಹಾವ್ರತಿ    ಭಾಜನಂ
ಮುಂದುವರೆದ ಸನ್ಯಾಸಿ
ಪಾಖಂಡಿಯಾದ ಕಾಪಾಲಿಕ

ಮರುಳಾಗಿ ತಿರುಗಿದ..........
ಲಿಂಗದಲ್ಲಿ ತ್ರಿಕಾಲ ಪೂಜೆ
ಪ್ರೀತಿ ಪ್ರೇಮ ಸ್ನೇಹ ಮೋಹ
ಇಂತಿ ಐದು ಇಲ್ಲದಿರುವುದೇ
ಲಿಂಗ ದ್ರೋಹ

– ಸವಸಂ–೩, ಚೆನ್ನಬಸವಣ್ಣ ವ.ಸಂ.–೫೯೭

೧೦. ಅಲ್ಲಿಂದತ್ತ ಲಿಂಗಪೂಜಕನೆನಿಸುವೆ, ಲಿಂಗಪೂಜಕ
ಅಭ್ಯಾಸವಿಡಿದಲ್ಲಿಂದತ್ತ
ಲಿಂಗಭಕ್ತನೆನಿಸುವೆ

